ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 28 ಭಾನುವಾರ 2025

ಸಂಪುಟ: 46 | ಸಂಚಿಕೆ: 162 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ತಮಿಳ್ನಾಡು ಟಿವಿಕೆ ನಾಯಕ–ನಟ ವಿಜಯ್‌ರ ಕರೂರು ಪ್ರಚಾರ ರ್‍ಯಾಲಿಯಲ್ಲಿ ಕಾಲ್ತುಳಿತ; 38 ಮಂದಿ ಸಾವು

- ನೂರಾರು ಮಂದಿಗೆ ಗಾಯ
- ದುರಂತದಲ್ಲಿ ಮಕ್ಕಳು, ಮಹಿಳೆಯರು ಬಲಿ
- ರ್‍ಯಾಲಿಗೆ ಅಂದಾಜಿಸಿದ್ದು 10 ಸಾವಿರ; ಬಂದದ್ದು 50 ಸಾವಿರಕ್ಕೂ ಅಧಿಕ
- ಮೃತರ ಕುಟುಂಬಕ್ಕೆ ತಲಾ 10 ಲಕ್ಷ, ಗಾಯಾಳುಗಳಿಗೆ 1 ಲಕ್ಷ ಪರಿಹಾರ



ಕರೂರು (ತಮಿಳುನಾಡು), ಸೆ. 27– ತಮಿಳುನಾಡಿನ ಕರೂರಿನಲ್ಲಿ ಶನಿವಾರ ಸಂಜೆ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಸಂಸ್ಥಾಪಕ ಅಧ್ಯಕ್ಷರೂ ಆದ ಜನಪ್ರಿಯ ನಟ ವಿಜಯ್ ಪ್ರಚಾರ ರ್‍ಯಾಲಿ ವೇಳೆ ಕಾಲ್ತುಳಿತ ಉಂಟಾಗಿ 8 ಮಕ್ಕಳು, 19 ಮಹಿಳೆಯರು ಸೇರಿ 38 ಮಂದಿ ಸಾವನ್ನಪ್ಪಿದ್ದಾರೆ. ಈ ದುರ್ಘಟನೆಯಲ್ಲಿ ನೂರಾರು ಮಂದಿ ಗಾಯಗೊಂಡಿದ್ದು, ಅವರಲ್ಲಿ 12 ಮಂದಿಯ ಸ್ಥಿತಿ ಚಿಂತಾಜನಕವಾಗಿದೆ



ಎಂದು ತಮಿಳುನಾಡು ಆರೋಗ್ಯ ಸಚಿವ ಎಂ.ಸುಬ್ರಮಣಿಯನ್ ತಿಳಿಸಿದ್ದಾರೆ. ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗಬಹುದು ಎಂದು ವರದಿಗಳು ತಿಳಿಸಿವೆ.

ವಿಜಯ್: ಮುಂದಿನ ವರ್ಷದ ಮೇ ತಿಂಗಳಲ್ಲಿ ತಮಿಳುನಾಡು ವಿಧಾನಸಭಾ ಚುನಾವಣೆ ನಡೆಯಲಿರುವ ▶ 6ನೇ ಪುಟಕ್ಕೆ

“ ತಮಿಳುನಾಡಿನ ಕರೂರು ಜಿಲ್ಲೆಯಲ್ಲಿ ನಡೆದ ಕಾಲ್ತುಳಿತ ದುರಂತ ಸಾವು, ನೋವುಂಟು ಮಾಡಿದೆ. ಮೃತರ ಕುಟುಂಬ ಸದಸ್ಯರಿಗೆ ನನ್ನ ತೀವ್ರ ಸಂತಾಪ ಸೂಚಿಸುತ್ತೇನೆ ಮತ್ತು ಗಾಯಗೊಂಡವರು ಬೇಗ ಗುಣ ಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ.
–ರಾಷ್ಟ್ರಪತಿ ದ್ರೌಪದಿ ಮುರ್ಮು

“ ತಮಿಳುನಾಡಿನ ಕರೂರಿನಲ್ಲಿ ನಡೆದ ರ್‍ಯಾಲಿಯಲ್ಲಿ ಸಂಭವಿಸಿದ ಕಾಲ್ತುಳಿತ ತೀವ್ರ ನೋವನ್ನುಂಟು ಮಾಡಿದೆ. ಈ ದುರಂತದಲ್ಲಿ ಹಲವರು ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡಿದ್ದಾರೆ. ಈ ಸಂದರ್ಭದಲ್ಲಿ ದೇವರು ಅವರ ಕುಟುಂಬಸ್ಥರಿಗೆ ನೋವನ್ನು ಸಹಿಸಿಕೊಳ್ಳುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಇನ್ನು ಗಾಯಗೊಂಡವರು ಶೀಘ್ರವಾಗಿ ಗುಣಮುಖರಾಗಲಿ. –ಪ್ರಧಾನಮಂತ್ರಿ ನರೇಂದ್ರ ಮೋದಿ

“ ನನ್ನ ಹೃದಯ ಛಿದ್ರವಾಗಿದೆ. ಹೇಳಲಾಗದಂತಹ ದುಃಖದಲ್ಲಿ ನರಳುತ್ತಿದ್ದೇನೆ. ಕರೂರಿನಲ್ಲಿ ಪ್ರಾಣ ಕಳೆದುಕೊಂಡ ನನ್ನ ಪ್ರೀತಿಯ ಸಹೋದರ–ಸಹೋದರಿಯರ ಕುಟುಂಬಗಳಿಗೆ ತೀವ್ರ ಸಂತಾಪಗಳನ್ನು ತಿಳಿಸುತ್ತಿದ್ದೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರು ಶೀಘ್ರ ಗುಣಮುಖರಾಗಲೆಂದು ಪ್ರಾರ್ಥಿಸುತ್ತಿದ್ದೇನೆ. –ಎಕ್ಸ್‌ನಲ್ಲಿ ನಟ ವಿಜಯ್ ಪೋಸ್ಟ್

ಆಯುಧಪೂಜೆಯಲ್ಲಿ ಒಂದು ಬಸ್ ಅಲಂಕಾರಕ್ಕೆ 150 ರೂ.!

ಬೆಂಗಳೂರು: ಆಯುಧಪೂಜೆ ದಿನದಂದು ಸರ್ಕಾರಿ ಬಸ್‌ಗಳಿಗೆ ಪೂಜೆ ಸಲ್ಲಿಸಲು ಸಾರಿಗೆ ಇಲಾಖೆಯಿಂದ ಹಣ ಬಿಡುಗಡೆ ಮಾಡಲಾಗಿದೆ. ಪ್ರತಿ ಬಸ್‌ಗೆ ಕೇವಲ 150 ರೂ. ರಿಲೀಸ್ ಮಾಡಿದೆ. ದಸರಾ ಹಿನ್ನೆಲೆಯಲ್ಲಿ ಆಯುಧಪೂಜೆ ಹಬ್ಬದಲ್ಲಿ ಸಾರಿಗೆ ಬಸ್‌ಗಳಿಗೆ ಪೂಜೆ ಸಲ್ಲಿಸಲಾಗುತ್ತದೆ. ಅದಕ್ಕಾಗಿ ಸಾರಿಗೆ ಇಲಾಖೆಯು ಪ್ರತಿ ಬಸ್, ಇಲಾಖಾ ವಾಹನಕ್ಕೆ ಹಣ ಬಿಡುಗಡೆ ಮಾಡಲಿದೆ. ಈ ಬಾರಿ ಕೇವಲ 150 ರೂ. ಬಿಡುಗಡೆ ಮಾಡಿದೆ ಎನ್ನಲಾಗಿದೆ.

ಜಾತಿಗಣತಿ ವೇಳೆ ಮಾಹಿತಿ ನೀಡುವುದು ಕಡ್ಡಾಯವಲ್ಲ

ಹೈಕೋರ್ಟ್ ಆದೇಶದ ಬೆನ್ನಲ್ಲೇ ಸರ್ಕಾರ ಸ್ಪಷ್ಟನೆ

ಬೆಂಗಳೂರು,ಸೆ.27–ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕೈಗೊಂಡಿರುವ ಸಾಮಾಜಿಕ



ಮತ್ತು ಶೈಕ್ಷಣಿಕ ಸಮೀಕ್ಷೆ ಸೆಪ್ಟೆಂಬರ್ 22ರಿಂದ ರಾಜ್ಯಾದ್ಯಂತ ಪ್ರಾರಂಭಗೊಂಡಿದೆ. ಈ ಸಮೀಕ್ಷೆ ರಾಜ್ಯದ ಎಲ್ಲಾ ಜನಸಂಖ್ಯೆಯನ್ನು ಒಳಗೊಳ್ಳುವುದೆಂದು ಸರ್ಕಾರ ಹೇಳಿದ್ದರೂ, ಇದರಲ್ಲಿ ಭಾಗವಹಿಸುವುದು ಸಂಪೂರ್ಣವಾಗಿ ಸ್ವಯಂಪ್ರೇರಿತವೆಂದು ಆಯೋಗ ಸ್ಪಷ್ಟಪಡಿಸಿದೆ. ಸಮೀಕ್ಷೆಯಲ್ಲಿ ಭಾಗವಹಿಸುವುದು ಕಡ್ಡಾಯವಲ್ಲ ಎಂದು ಸ್ಪಷ್ಟಪಡಿಸಿ ಕರ್ನಾಟಕ ಹೈಕೋರ್ಟ್ ಮಧ್ಯಂತರ ಆದೇಶದ ನೀಡಿದ ಬೆನ್ನಲ್ಲೇ ಹಿಂದುಳಿದ ವರ್ಗಗಳ ಆಯೋಗ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿದೆ.



ಆಯೋಗದ ಪತ್ರಿಕಾ ಪ್ರಕಟಣೆಯಲ್ಲೇನಿದೆ: ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ರಾಜ್ಯದ ಕುಟುಂಬಗಳ ಹಾಗೂ ಜನರ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯನ್ನು 22–09–2025ರಿಂದ ಪ್ರಾರಂಭಿಸಿದ್ದು, ಈಗಾಗಲೇ ಪ್ರಗತಿಯಲ್ಲಿದೆ. ಈ ಸಮೀಕ್ಷೆಯಲ್ಲಿ ರಾಜ್ಯದ ಸಂಪೂರ್ಣ ಜನಸಂಖ್ಯೆಯನ್ನು ಸಮೀಕ್ಷೆಗೆ ಒಳಪಡಿಸಲು ಉದ್ದೇಶಿಸಿದ್ದರೂ, ಸಮೀಕ್ಷೆಯಲ್ಲಿ ಭಾಗವಹಿಸುವುದು ಜನರ/ಕುಟುಂಬಗಳ ಸ್ವಯಂ ಇಚ್ಛೆಗೆ ಬಿಡಲಾಗಿದೆಯೆಂದೂ, ಅಲ್ಲದೆ ಮಾಹಿತಿಯನ್ನು ನೀಡುವ ಬಗ್ಗೆ ಆಯೋಗ ಒತ್ತಾಯಿಸುತ್ತಿಲ್ಲವೆಂದು ಸ್ಪಷ್ಟೀಕರಿಸಲಾಗಿದೆಯೆಂದು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ. ▶ 6ನೇ ಪುಟಕ್ಕೆ

“ ಸಮೀಕ್ಷೆಯ ಸಮಯದಲ್ಲಿ ಜನರು, ಕುಟುಂಬಗಳು ಯಾವುದೇ ಮಾಹಿತಿಯನ್ನು ನೀಡಲು ಸಿಬ್ಬಂದಿ ಬಲವಂತಪಡಿಸುವಂತಿಲ್ಲ ಎಂದು ಸ್ಪಷ್ಟ ಸೂಚನೆ ನೀಡಲಾಗಿದೆ. ರಾಜ್ಯ ಸರ್ಕಾರದಿಂದ ಹಮ್ಮಿಕೊಳ್ಳಲಾಗಿರುವ ಈ ಸಮೀಕ್ಷೆಯ ಉದ್ದೇಶ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಅಂಶಗಳ ನಿಖರ ಮಾಹಿತಿಯನ್ನು ಸಂಗ್ರಹಿಸುವುದಾಗಿದೆ. ಆದರೆ ಭಾಗವಹಿಸುವಿಕೆ ಐಚ್ಛಿಕವಾಗಿದ್ದು, ಯಾರ ಮೇಲೂ ಒತ್ತಡವಿಲ್ಲ ಎಂಬ ಸಂದೇಶವನ್ನು ಸರ್ಕಾರ ಇದೀಗ ರವಾನಿಸಿದೆ.

ಬಾಲಿವುಡ್ ಗಾಯಕಿ ಸುನಿಧಿ ಚೌಹಾಣ್ ಗಾನ ಮೋಡಿ

ದಸರಾದ ಮೆಗಾ ಇವೆಂಟ್ ಯುವ ದಸರಾಗೆ ವರ್ಣರಂಜಿತ ತೆರೆ



ಯುವ ದಸರಾ ಕಾರ್ಯಕ್ರಮದಲ್ಲಿ ಶನಿವಾರ ಬಾಲಿವುಡ್ ಗಾಯಕಿ ಸುನಿಧಿ ಚೌಹಾಣ್ ಅವರಿಂದ ಸಂಗೀತ ರಸಸಂಜೆ.

ಮೈಸೂರು, ಸೆ.27(ವಿವಿಹೆಚ್)– ಬಾಲಿವುಡ್‌ನ ಖ್ಯಾತ ಗಾಯಕಿ ಸುನಿಧಿ ಚೌಹಾಣ್ ಅವರ ಸಂಗೀತ ಸುಧೆಯೊಂದಿಗೆ ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಸಂಗೀತ ರಸಸಂಜೆಯ ಮೆಗಾ ಇವೆಂಟ್ 'ಯುವ ದಸರಾ' ಐದು ದಿನಗಳ ಸಂಗೀತ ಸಮ್ಮಿಲನಕ್ಕೆ ಶನಿವಾರ ವರ್ಣರಂಜಿತ ತೆರೆಬಿದ್ದಿತು.

ಮೈಸೂರು ನಗರ ಹೊರವಲಯದಲ್ಲಿನ ರಿಂಗ್‌ರಸ್ತೆಯಲ್ಲಿರುವ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಾಲಯ ಬಳಿಯ ಮೈದಾನದಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಲಾಗಿದ್ದ ಐದು ದಿನಗಳ ಯುವ ದಸರಾ ಕಾರ್ಯಕ್ರಮದ ಕೊನೆಯ ದಿನ ನಿರೀಕ್ಷೆಗೂ ಮೀರಿ ನೆರೆದಿದ್ದ ಪ್ರೇಕ್ಷಕ ವರ್ಗಕ್ಕೆ ಗಾಯಕಿ ಸುನಿಧಿ ಚೌಹಾಣ್ ಸಂಗೀತ ರಸದೌತಣ ಉಣಬಡಿಸಿದರು.

ಅಭಿಮಾನಿಗಳ ಶಿಳ್ಳೆ, ಚಪ್ಪಾಳೆ, ಕೇಕೆಗಳ ನಡುವೆ 'ಧೂಮ್ ಮಚಾಲೇ ಧೂಮ್ ಮಚಾಲೇ ಧೂಮ್' ಹಾಡು ಹಾಡುವುದರ ಜೊತೆಗೆ ಭರ್ಜರಿ ಸ್ಟೆಪ್ಸ್ ಹಾಕುವ ಮೂಲಕ ಅಭಿಮಾನಿಗಳ ಎದೆಯೊಳಗೆ ಗ್ರ್ಯಾಂಡ್ ಎಂಟ್ರಿ ಕೊಟ್ಟು, ಇಡೀ ಯುವ ಸಮೂಹಕ್ಕೆ ಕಿಚ್ಚು ಹಚ್ಚಿದರು. ಇತ್ತ ತಮ್ಮ ನೆಚ್ಚಿನ ಹಾಡುಗಾರ್ತಿಯನ್ನು ಮೊಬೈಲ್‌ನಲ್ಲಿ ಸೆರೆ ಹಿಡಿಯಲು ಅಭಿಮಾನಿ ವೃಂದ ಮುಗಿಬಿದ್ದರು. ಬಾಲಿವುಡ್ ಸಿನಿಮಾಗಳ 'ಮೇನ್ ಇಷ್ಕು ಮೇರೆ', 'ಐಸಾ ಮೇರಿ ಪ್ಯಾರ್ ಹೈ', 'ಹ್ಯಾನೀ ಹ್ಯಾನಿ ಚುಟ್ಕೆಯ', 'ಮೈ ಕ್ರೇಜಿ ಗರ್ಲ್ ಮೈ ಕ್ರೇಜಿ ಗರ್ಲ್', ▶ 7ನೇ ಪುಟಕ್ಕೆ

ನಿಗಮ–ಮಂಡಳಿಗಳ ನೇಮಕಾತಿ ಬಗ್ಗೆ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಅಸಮಾಧಾನ

ವಲಸಿಗರು, ನಾಯಕರ ಮನೆ ಬಾಗಿಲು ಕಾಯುವವರಿಗೆ ಅವಕಾಶ; ಡಿಸಿಎಂ ಡಿ.ಕೆ.ಶಿವಕುಮಾರ್ ಬಳಿ ಆಕ್ಷೇಪ

ಬೆಂಗಳೂರು,ಸೆ. 27(ಕೆಎಂಶಿ)–ನಿಗಮ–ಮಂಡಳಿ ಅಧ್ಯಕ್ಷ, ಉಪಾಧ್ಯಕ್ಷರ ನೇಮಕಾತಿಯು ಕಾಂಗ್ರೆಸ್ ಕಾರ್ಯಕರ್ತರಲ್ಲಿ ತೀವ್ರ ಅಸಮಾಧಾನ ತಂದಿದೆ.



ಪಕ್ಷಕ್ಕಾಗಿ ದುಡಿದ ಹಿರಿಯರನ್ನು ಕಡೆಗಣಿಸಿ ವಲಸಿಗರು ಮತ್ತು ನಾಯಕರ ಮನೆ ಬಾಗಿಲು ಕಾಯುವವರಿಗೆ ಹೆಚ್ಚು ಅವಕಾಶ ಮಾಡಿಕೊಡಲಾಗಿದೆ ಎಂಬ ದೂರುಗಳು ಬಂದಿವೆ. ಎಐಸಿಸಿ ಕಳುಹಿಸಿದ ಪಟ್ಟಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮೋದನೆ ನೀಡಿ, ಇಲಾಖೆಗಳಿಂದ ಆದೇಶ ಹೊರಡಿಸುವ ವೇಳೆ ತಮಗೆ ಬೇಕಾದವರನ್ನು 7 ನಿಗಮ–ಮಂಡಳಿಗಳಿಗೆ ನೇಮಿಸಿದ್ದಾರೆ. ನೇಮಕಗೊಂಡವರಲ್ಲಿ ಒಂದೇ ಸಮುದಾಯಕ್ಕೆ ಸೇರಿದವರಿದ್ದಾರೆ. ವಿಶ್ವವಿದ್ಯಾಲಯಗಳಿಗೆ ಸಿಂಡಿಕೇಟ್ ಸದಸ್ಯರ ನೇಮಕಾತಿ ವಿಚಾರದಲ್ಲೂ ಮುಖ್ಯಮಂತ್ರಿ ಅವರು, ಪಕ್ಷದವರನ್ನು ನಿರ್ಲಕ್ಷಿಸಿದ್ದಾರೆ. ವಲಸಿಗರು, ನಾಯಕರ ಮನೆ ಬಾಗಿಲು ಕಾಯುವವರಿಗೆ ಅಧ್ಯಕ್ಷ ಸ್ಥಾನ ನೀಡಿ ಪಕ್ಷಕ್ಕೆ ದುಡಿದ ಕೆಲವರನ್ನಷ್ಟೇ ನೇಮಿಸಿ ▶ 6ನೇ ಪುಟಕ್ಕೆ

ಧರ್ಮಸ್ಥಳ ವಿಚಾರದಲ್ಲಿ ವಾಸ್ತವಾಂಶ ತಿಳಿಯುವುದು ಸರ್ಕಾರದ ಉದ್ದೇಶ

ಬೆಂಗಳೂರು,ಸೆ.27(ಕೆಎಂಶಿ)–ಧರ್ಮಸ್ಥಳ ಪ್ರಕರಣದಲ್ಲಿ ಜನರಿಗೆ ವಾಸ್ತವಾಂಶ ತಿಳಿಸುವುದಷ್ಟೇ ಸರ್ಕಾರದ ಉದ್ದೇಶ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಸ್‌ಐಟಿ ರಚನೆಯಿಂದ ಕಳಂಕ ಕಳೆಯುತ್ತಿದೆ ಎಂಬ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಹೇಳಿಕೆ ಬಗ್ಗೆ ಈಗ ಏನನ್ನೂ ಹೇಳಲಾರೆ. ಪ್ರಕರಣದ ತನಿಖಾ ವರದಿ ಬರಲಿ, ಆನಂತರ ಮಾತನಾಡುತ್ತೇನೆ ಎಂದರು.

ವೀರೇಂದ್ರ ಹೆಗ್ಗಡೆ ಹೇಳಿಕೆಯನ್ನು ಮಾಧ್ಯಮಗಳಲ್ಲಿ ನೋಡಿದ್ದೇನೆ. ತನಿಖಾ ವರದಿ ಬರುವ ಮುನ್ನವೇ ಪ್ರತಿಕ್ರಿಯಿಸುವುದರಲ್ಲಿ ಅರ್ಥವಿಲ್ಲ. ರಾಜಕೀಯವಾಗಿ ಯಾರು ಏನು ಬೇಕಾದರೂ ಮಾತನಾಡಬಹುದು. ಸರ್ಕಾರದ ಪ್ರತಿನಿಧಿಯಾಗಿ ಬೇರೆಯವರಂತೆ ▶ 6ನೇ ಪುಟಕ್ಕೆ

ಇನ್ಮುಂದೆ ಯಾವ ಚುನಾವಣೆಗೂ ಸ್ಪರ್ಧಿಸಲ್ಲ

ಶಿವಮೊಗ್ಗ: 2024ರ ಶಿವಮೊಗ್ಗ



ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋತಿದ್ದ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಪತ್ನಿ ಗೀತಾ ಶಿವರಾಜಕುಮಾರ್, ಇನ್ನು ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಘೋಷಿಸಿದ್ದಾರೆ.

ಶಿವಮೊಗ್ಗದಲ್ಲಿ ಮಾತನಾಡಿದ ಅವರು, ನಾನು ಚುನಾವಣೆಗಳಲ್ಲಿ ಸ್ಪರ್ಧಿಸಲ್ಲ. ಆದರೆ ನಿಮ್ಮೆಲ್ಲರ ಜೊತೆ ನಿಲ್ಲುತ್ತೇನೆ. ಮುಂದಿನ ಚುನಾವಣೆಗೆ ಪ್ರಚಾರ ಮಾಡುತ್ತೇನೆ. ಮಹಿಳೆಯರು ಅಬಲೆಯರಲ್ಲ, ಎಲ್ಲರೂ ಸಬಲೆಯರು. ಮಹಿಳೆಯರಿಗೆ ಶಕ್ತಿ ನೀಡಿದರೆ ಎಂತಹ ಕೆಲಸವನ್ನಾದರೂ ಮಾಡುತ್ತಾರೆ. ಇನ್ನು ನಿಮಗೆ ಯಾವುದೇ ಸಮಸ್ಯೆ, ಕಷ್ಟಗಳಿದ್ದರೂ ಸಚಿವ ಮಧು ಬಂಗಾರಪ್ಪರನ್ನು ಸಂಪರ್ಕಿಸಿ ಎಂದರು.


ಹೆಲಿಕಾಪ್ಟರ್‌ಗಳ ಚಮತ್ಕಾರಕ್ಕೆ ಚಕಿತರಾದ ಪ್ರೇಕ್ಷಕರು!

ಐಎಎಫ್ 'ಸಾರಂಗ್' ಹೆಲಿಕಾಪ್ಟರ್ ತಂಡದಿಂದ ಸಾಹಸ ಪ್ರದರ್ಶನ; ದಸರಾ ಮಹೋತ್ಸವದ ಪ್ರಯುಕ್ತ ನಡೆದ ಏರ್ ಶೋ ಸೊಗಸಿದು

ಮೈಸೂರು, ಸೆ.27 (ಪಿಎಂ)– ಬಾನಂಗಳದಲ್ಲಿ ಐದು ಹೆಲಿಕಾಪ್ಟರ್‌ಗಳ ಚಮತ್ಕಾರ... ಶರವೇಗದಲ್ಲಿ ಹೊಗೆಯುಗುಳುತ್ತಾ ಹಾರಾಟ ನಡೆಸಿದ ಅವುಗಳು, ಅಕ್ವೇರಿಯಂನಲ್ಲಿ ಈಜುವ ಮೀನುಗಳಂತೆ ಗೋಚರಿಸಿ ನೋಡುಗರನ್ನು ನಿಬ್ಬೆರಗಾಗಿಸಿದವು.

ಇಂತಹ ರೋಚಕ–ರೋಮಾಂಚನಕಾರಿ ಕ್ಷಣಗಳಿಗೆ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನ ಶನಿವಾರ ಸಂಜೆ ಸಾಕ್ಷಿಯಾಯಿತು. ದಸರಾ 2025ರ ಪ್ರಯುಕ್ತ ಜಿಲ್ಲಾಡಳಿತದ ವತಿಯಿಂದ ಹಮ್ಮಿಕೊಂಡಿದ್ದ ಏರ್ ಶೋ (ವೈಮಾನಿಕ ಪ್ರದರ್ಶನ)ನಲ್ಲಿ ಭಾರತೀಯ ವಾಯುಸೇನೆಯ (ಐಎಎಫ್) 'ಸಾರಂಗ್' ಹೆಲಿಕಾಪ್ಟರ್ ತಂಡವು ಈ ರೀತಿ ಸಾಹಸಮಯ ಹಾರಾಟ ನಡೆಸಿ ಮೈದಾನದಲ್ಲಿ ಕಿಕ್ಕಿರಿದು ನೆರೆದಿದ್ದ ಜನತೆಯಲ್ಲಿ ಪುಳಕ ಉಂಟುಮಾಡಿತು.

ಕೆಂಪು, ಬಿಳಿ ಬಣ್ಣದ ಜೊತೆಗೆ ನೀಲಿ ಬಣ್ಣದಲ್ಲಿ ನವಿಲಿನ ಚಿತ್ತಾರ ಹೊಂದಿರುವ ಈ ಹೆಲಿಕಾಪ್ಟರ್‌ಗಳು, ಆಗಸದಲ್ಲಿ ಹಾರಾಡುವ ನವ್ವಾಲೆಗಳಂತೆ ಕಂಡುಬಂದವು. ತಮಿಳುನಾಡಿನ ಕೊಯಮತ್ತೂರು ಮೂಲದ ಸಾರಂಗ್ ತಂಡ, ಆಕರ್ಷಕ ಪ್ರದರ್ಶನದ ಮೂಲಕ ಪ್ರೇಕ್ಷಕರ ಮನಸೂರೆಗೊಂಡಿತು. ಹೆಲಿಕಾಪ್ಟರ್ ರೆಕ್ಕೆಗಳ ▶ 6ನೇ ಪುಟಕ್ಕೆ



ಮೈಸೂರಿನ ಬನ್ನಿಮಂಟಪದ ಮೈದಾನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಏರ್ ಶೋನಲ್ಲಿ ಹೆಲಿಕಾಪ್ಟರ್‌ಗಳು ಆಗಸದಲ್ಲಿ ಶರವೇಗದ ಹಾರಾಟ ನಡೆಸಿ ನೋಡುಗರಲ್ಲಿ ರೋಮಾಂಚನ ಉಂಟು ಮಾಡಿದವು.



ವಾಹನ ದಟ್ಟಣೆ... ಬನ್ನಿಮಂಟಪ ಪಂಜಿನ ಕವಾಯತು ಮೈದಾನದ ಸುತ್ತಮುತ್ತಲ ರಸ್ತೆಗಳಲ್ಲಿ ಏರ್ ಶೋ ಆರಂಭಕ್ಕೂ ಮುನ್ನ ಹಾಗೂ ಮುಕ್ತಾಯದ ನಂತರ ವಾಹನ ದಟ್ಟಣೆ ವ್ಯಾಪಕವಾಗಿತ್ತು. ಈ ಎರಡು ಅವಧಿಯಲ್ಲಿಯೂ ಸಯ್ಯಾಜಿರಾವ್ ರಸ್ತೆ, ನೆಲ್ಸನ್ ಮಂಡೇಲಾ ರಸ್ತೆಯಲ್ಲಿ ವಾಹನದಟ್ಟಣೆ ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿತು. ಹಲವು ವಾಹನ ಸವಾರರು ಈ ರಸ್ತೆಗಳ ಅಡ್ಡರಸ್ತೆಗಳಲ್ಲಿ ಸಾಗಲು ಪ್ರಾರಂಭಿಸಿದ ಹಿನ್ನೆಲೆಯಲ್ಲಿ ಮಂಡಿಮೊಹಲ್ಲಾದ ಮಿಷನ್ ಆಸ್ಪತ್ರೆ ರಸ್ತೆ ಸೇರಿದಂತೆ ಮೊದಲಾದ ರಸ್ತೆಗಳಲ್ಲಿಯೂ ವಾಹನದಟ್ಟಣೆ ಉಂಟಾಯಿತು. ಬಳಿಕ ವಾಹನ ಸಂಚಾರ ನಿಯಂತ್ರಣಕ್ಕೆ ಬಂತು ಎಂದುಕೊಳ್ಳುವಷ್ಟರಲ್ಲಿ ದೀಪಾಲಂಕಾರ ನೋಡಲು ಮೈಸೂರು ಹೃದಯ ಭಾಗದ ರಸ್ತೆಗಳಲ್ಲಿ ಮತ್ತೆ ವಾಹನದಟ್ಟಣೆ ಉಂಟಾಯಿತು.

ಅ.1, ಸೂರ್ಯಕಿರಣ್ ಏರೋಬ್ಯಾಟಿಕ್ ತಂಡದಿಂದ ಏರ್ ಶೋ

ಮೈಸೂರು,ಸೆ.27(ಪಿಎಂ)– ದಸರಾ ಪ್ರಯುಕ್ತ ಅ.1ರಂದು ಸೂರ್ಯಕಿರಣ್ ಏರೋಬ್ಯಾಟಿಕ್ ತಂಡದ ಪ್ರದರ್ಶನಕ್ಕೆ ವೇದಿಕೆ ಸಜ್ಜುಗೊಳ್ಳುತ್ತಿದೆ. 2023ರ ದಸರಾದಲ್ಲಿ ಸಹ ಇದೇ ಸೂರ್ಯಕಿರಣ ಏರೋಬ್ಯಾಟಿಕ್ ತಂಡ ಮೈಸೂರಿನಲ್ಲಿ ಪ್ರದರ್ಶನ ನೀಡಿತ್ತು. ಮೈಸೂರಿನಲ್ಲಿ ಪ್ರದರ್ಶನ ನೀಡಿದ್ದು ಈ ತಂಡಕ್ಕೆ ಅದೇ ಮೊದಲಾಗಿತ್ತು. ಇದೀಗ ಮೈಸೂರಿನಲ್ಲಿ 2ನೇ ಬಾರಿಗೆ ಪ್ರದರ್ಶನ ನೀಡಲು ತಯಾರಿ ನಡೆಸಿದೆ. 'ಭಾರತೀಯ ವಾಯುಪಡೆಯ ರಾಯಭಾರಿಗಳು' ಎಂದೇ ಪ್ರಸಿದ್ಧವಾಗಿರುವ ▶ 6ನೇ ಪುಟಕ್ಕೆ

ಸೆ.30, ಅಭ್ಯಾಸ ಪ್ರದರ್ಶನ

ಅ.1ರಂದು ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಸಂಜೆ 4ಕ್ಕೆ ಏರ್ ಶೋ ನಡೆಯಲಿದ್ದು, ಪ್ರದರ್ಶನ ವೀಕ್ಷಿಸಲು ಮೈದಾನದ ಒಳಾಂಗಣ ಪ್ರಾಂಗಣಕ್ಕೆ ಪಾಸ್‌ಗಳನ್ನು ಹೊಂದಿದವರಿಗೆ ಮಾತ್ರ ಪ್ರವೇಶಾವಕಾಶ ಕಲ್ಪಿಸಲಾಗುತ್ತದೆ ಎಂದು ಜಿಲ್ಲಾಡಳಿತ ಈಗಾಗಲೇ ಪ್ರಕಟಣೆಯಲ್ಲಿ ತಿಳಿಸಿದೆ. ಇನ್ನು ಸೆ.30ರಂದು ತಾಲೀಮು ಪ್ರದರ್ಶನ ಜರುಗಲಿದೆ. ಭದ್ರತೆ ದೃಷ್ಟಿಯಿಂದ ಈ ಅಭ್ಯಾಸ ಪ್ರದರ್ಶನಕ್ಕೆ ಸಾರ್ವಜನಿಕರಿಗೆ ಪ್ರವೇಶ ನೀಡುತ್ತಿಲ್ಲವೆಂದು ಮೂಲಗಳು ತಿಳಿಸಿವೆ.

ಮೈಸೂರಲ್ಲಿ ವಿಶ್ವ ಪ್ರವಾಸೋದ್ಯಮ ದಿನಾಚರಣೆ: ಪ್ರವಾಸಿಗರಿಗೆ ಸಿಹಿ ನೀಡಿ, ಆತ್ಮೀಯ ಸ್ವಾಗತ

ಮೈಸೂರಿಗೆ ಪ್ರವಾಸಿಗರ ಸೆಳೆಯಲು ಕ್ರಮ ಕೈಗೊಳ್ಳಲಾಗಿದೆ; ಶಾಸಕ ತನ್ವೀರ್ ಮಾಹಿತಿ




ಮೈಸೂರು ಅರಮನೆ ಆವರಣದಲ್ಲಿ ಶನಿವಾರ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮದಲ್ಲಿ ಗಮನ ಸೆಳೆದ ಕಂಸಾಳೆ ಕಲಾವಿದರ ನೃತ್ಯ ಹಾಗೂ ಯುವ ಕಲಾವಿದರಿಂದ ಕೊಡವರ ಸಾಂಪ್ರದಾಯಿಕ ನೃತ್ಯ ಪ್ರದರ್ಶನ.

ಮೈಸೂರು, ಸೆ.27(ಎಂಟಿವೈ)– ವಿಶ್ವ ಪ್ರವಾಸೋದ್ಯಮ ದಿನದ ಅಂಗವಾಗಿ ಮೈಸೂರು ಅರಮನೆ ಆವರಣದಲ್ಲಿ ಶನಿವಾರ ಬೆಳಗ್ಗೆ ವಿವಿಧ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಸಿಹಿ ವಿತರಿಸಿ ಪ್ರವಾಸಿಗರ ಸ್ವಾಗತಿಸಲಾಯಿತು.

ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಅರಮನೆ ಆವರಣದಲ್ಲಿ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಈ ವೇಳೆ ಅರಮನೆಗೆ ಆಗಮಿಸಿದ ಪ್ರವಾಸಿಗರಿಗೆ ಸಿಹಿ ನೀಡಿ ದಸರಾ ಕಾರ್ಯಕ್ರಮ ಹಾಗೂ ಮೈಸೂರಿನ ಪ್ರವಾಸಿ ತಾಣಗಳಿಗೆ ಸ್ವಾಗತ ಕೋರಲಾಯಿತು.

ಪ್ರವಾಸಿಗರ ಸ್ವಾಗತ ಕಾರ್ಯಕ್ರಮದ ಬಳಿಕ ಕಂಸಾಳೆ, ವೀರಗಾಸೆ, ಡೊಳ್ಳು ಕುಣಿತ, ಪೂಜಾ ಕುಣಿತ, ಗೊಂಬೆ ಕುಣಿತ, ಚಂಡೆ ಮದ್ದಲೆ, ಕೊಡವರ ಸಾಂಪ್ರದಾಯಿಕ ನೃತ್ಯ ತಂಡ ಸೇರಿದಂತೆ ವಿವಿಧ ಜಾನಪದ ಕಲಾತಂಡ ಹಾಗೂ ವಿವಿಧ ಕಾಲೇಜುಗಳ ಪ್ರವಾಸೋದ್ಯಮ ವಿಭಾಗದ ವಿದ್ಯಾರ್ಥಿಗಳು ವಿಶ್ವ ಪ್ರವಾಸೋದ್ಯಮ ದಿನದ ಅಂಗವಾಗಿ ಮೆರವಣಿಗೆ ನಡೆಸಿದರು. ಅರಮನೆ ಆವರಣದಿಂದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದ ಮೂಲಕ ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ಆಸ್ಪತ್ರೆ, ಹಳೆ ಆರ್‌ಎಂಸಿ ವೃತ್ತ, ಬಂಬೂಬಜಾರ್ ಮೂಲಕ ಹೈವೆ ವೃತ್ತದಲ್ಲಿ ಅಂತ್ಯಗೊಂಡಿತು.

ಜಂಬೂಸವಾರಿ ಮಾರ್ಗದಲ್ಲಿ ವಿವಿಧ ಜಾನಪದ ಕಲಾತಂಡಗಳೊಂದಿಗೆ ಸಾಗಿದ ವಿಶ್ವ ಪ್ರವಾಸೋದ್ಯಮ ದಿನದ ಮೆರವಣಿಗೆ ನೋಡುಗರ ಗಮನ ಸೆಳೆಯಿತು.

ಇದಕ್ಕೂ ಮುನ್ನ ವಿಶ್ವ ಪ್ರವಾಸೋದ್ಯಮ ದಿನ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಶಾಸಕ ತನ್ವೀರ್ ಸೇಠ್ ಮಾತನಾಡಿ, ಮೈಸೂರು ಸಾಂಸ್ಕೃತಿಕ ಹಾಗೂ ಅರಮನೆಗಳ ನಗರವೂ ಹೌದು. ಮೈಸೂರು ನಗರ ಮಾತ್ರವಲ್ಲದೆ ಸುತ್ತಮುತ್ತ ಅನೇಕ ಪ್ರವಾಸಿ ತಾಣಗಳಿದ್ದು, ಅವುಗಳ ವೀಕ್ಷಣೆಗಾಗಿ ವಿದೇಶಿ ಹಾಗೂ ಹೊರರಾಜ್ಯಗಳ ಪ್ರವಾಸಿಗರ ಸೆಳೆಯುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ. ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಈಗಾಗಲೇ ಮೈಸೂರಿನಾದ್ಯಂತ ಹಲವು ಸಾಂಸ್ಕೃತಿಕ ಕಾರ್ಯಕ್ರಮ ಜರುಗುತ್ತಿದ್ದು, ಅವುಗಳ ವೀಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಇಂದು ಪ್ರವಾಸಿಗರಿಗೆ ಸಿಹಿ ನೀಡಿ ಸ್ವಾಗತಿಸಲಾಗಿದೆ.

ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್.ಪ್ರಶಾಂತ್ ಮಾತನಾಡಿ, ಪ್ರತಿವರ್ಷದಂತೆ ಈ ಬಾರಿಯೂ ವಿಶ್ವ ಪ್ರವಾಸೋದ್ಯಮ ದಿನವನ್ನು ಆಚರಿಸಿ, ಅರಮನೆ ಆವರಣದಲ್ಲಿ ಪ್ರವಾಸಿಗರಿಗೆ ಸಿಹಿ ನೀಡಿ ಸ್ವಾಗತಿಸಲಾಗಿದೆ. ಮೈಸೂರು ಜಿಲ್ಲೆ ಮಾತ್ರವಲ್ಲದೆ ಸುತ್ತಮುತ್ತಲಿನ ಪ್ರವಾಸಿ ತಾಣಗಳ ಭೇಟಿ ಕುರಿತಂತೆ ಪ್ರವಾಸಿಗರಿಗೆ ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ ಪ್ರವಾಸೋದ್ಯಮ ಅವಲಂಬಿತ ಸಂಘ ಸಂಸ್ಥೆಗಳು ಕಾರ್ಯೋನ್ಮುಖವಾಗಿವೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಪ್ರಭುಸ್ವಾಮಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಸ್ಕಾಲ್ ಸಂಸ್ಥೆ ಅಧ್ಯಕ್ಷ ಜಯಕುಮಾರ್, ಪ್ರವಾಸೋದ್ಯಮ ದಿನಾಚರಣೆ ಸಮಿತಿ ಅಧ್ಯಕ್ಷ ಅನಿಲ್‌ರಾಜ್, ಗೈಡ್ಸ್ ಅಸೋಸಿಯೇಷನ್ ಅಧ್ಯಕ್ಷ ಅಶೋಕ್, ಮ್ಯಾಕ್ಸಿಕ್ಯಾಬ್ ಅಸೋಸಿಯೇಷನ್ ಅಧ್ಯಕ್ಷ ಎ.ಸಿ.ರವಿ ಇನ್ನಿತರರು ಉಪಸ್ಥಿತರಿದ್ದರು.

ಸಂಭ್ರಮದ ಹೆಬ್ಬಾಳು ದಸರಾ ಕ್ರೀಡಾಹಬ್ಬ

ನಿವಾಸಿಗಳಿಗಾಗಿ ಚಿತ್ರಕಲೆ, ಲೆಮನ್ ಅಂಡ್ ಸ್ಪೂನ್, ಓಟ ಸ್ಪರ್ಧೆ; ಯುವಕ–ಯುವತಿಯರಿಗೆ ಶಾಟ್‌ಪುಟ್, ಹಗ್ಗಜಗ್ಗಾಟ, ಮ್ಯೂಸಿಕಲ್ ಚೇರ್ ಸ್ಪರ್ಧೆಗಳು

ಮೈಸೂರು,ಸೆ.27(ಜಿಎ)–ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್‌ನಿಂದ ಆಯೋಜಿಸಿರುವ ಹೆಬ್ಬಾಳು ದಸರಾ ಸೀಸನ್ 5ರ ಕ್ರೀಡಾಹಬ್ಬ ಸಂಭ್ರಮದಿಂದ ಜರುಗಿತು.

ಮೈಸೂರು ಮಹಾನಗರಪಾಲಿಕೆ ವಾರ್ಡ್ ನಂ.3ರ ನಿವಾಸಿಗಳಿಗಾಗಿ ವಿಜಯನಗರ ರೈಲ್ವೆ ಲೇಔಟ್‌ನ ಇಂದಿರಾ ನರ್ಸಿಂಗ್ ಹೋಂ ಎದುರಿನ ರಂಗಮಂದಿರದಲ್ಲಿ ಆಯೋಜಿಸಿದ್ದ ಕ್ರೀಡಾಹಬ್ಬದಲ್ಲಿ ವಯಸ್ಸಿನ ಅಂತರವಿಲ್ಲದೆ ಎಲ್ಲರೂ ಆಟಗಳಲ್ಲಿ ಸ್ಪರ್ಧಿಸಿ ಸಂಭ್ರಮಿಸಿದರು.

10ರಿಂದ 15 ವರ್ಷದ ಮಕ್ಕಳಿಗಾಗಿ ಚಿತ್ರಕಲೆ, ಲೆಮನ್ ಅಂಡ್ ಸ್ಪೂನ್, ಓಟ ಸ್ಪರ್ಧೆಗಳು ನಡೆದವು. ಯುವಕ, ಯುವತಿಯರಿಗೆ ಶಾಟ್‌ಪುಟ್, ಹಗ್ಗಜಗ್ಗಾಟ, ಮ್ಯೂಸಿಕಲ್ ಚೇರ್, ಬಾಲ್ ಇನ್ ಬಾಸ್ಕೆಟ್ ಹಾಗೂ 50 ವರ್ಷ ಮೇಲ್ಪಟ್ಟವರಿಗೆ ಬಾಲ್ ಇನ್ ಬಾಸ್ಕೆಟ್ ಸ್ಪರ್ಧೆ ನಡೆಯಿತು.

ಕ್ರೀಡಾಹಬ್ಬಕ್ಕೆ ಚಾಲನೆ ನೀಡಿ ಮಾತನಾಡಿದ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಶ್ರೀಧರ್, ಹೆಬ್ಬಾಳು ದಸರಾ ಕ್ರೀಡಾಹಬ್ಬದಲ್ಲಿ ಕೇವಲ ವೃತ್ತಿಪರರಿಗಾಗಿ ಕ್ರೀಡೆಗಳನ್ನು ಆಯೋಜಿಸದೆ ವಾರ್ಡ್‌ನ ಪ್ರತಿ ನಾಗರಿಕರಿಗೂ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ನಾಡಹಬ್ಬ ದಸರಾದಲ್ಲಿ ವೃತ್ತಿಪರರಿಗಾಗಿ ಕ್ರೀಡಾ ಸ್ಪರ್ಧೆಗಳು ಜರುಗುತ್ತವೆ. ಹಾಗಾಗಿ ನಾವು ಯಾವುದೇ ನಿಯಮಾವಳಿ ಇಲ್ಲದೆ ಎಲ್ಲ ವರ್ಗದ ಜನರೂ ಮುಕ್ತ ಮನಸ್ಸಿನಿಂದ ಕ್ರೀಡೆಗಳಲ್ಲಿ ಭಾಗವಹಿಸುವುದು ಆಯೋಜನೆಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಇದೇ ವೇಳೆ ಹೆಬ್ಬಾಳು ಬಡಾವಣೆಯ ಮನೆಗಳಲ್ಲಿ ಕೂರಿಸಿರುವ ದಸರಾ ಬೊಂಬೆಗಳನ್ನು ವೀಕ್ಷಿಸಿ ಉತ್ತಮ ಬೊಂಬೆ ಮನೆಗಳಿಗೆ ಬಹುಮಾನಗಳನ್ನು ಘೋಷಿಸಲಾಯಿತು. ಸೆ.28ರಂದು ಭಾನುವಾರ ಸಂಜೆ 5 ಗಂಟೆಗೆ ವಿಜಯನಗರ ರೈಲ್ವೆ ಲೇಔಟ್‌ನ ಇಂದಿರಾ ನರ್ಸಿಂಗ್ ಹೋಂ ಎದುರಿನ ರಂಗಮಂದಿರದಲ್ಲಿ ಸಾಂಸ್ಕೃತಿಕ ಸಂಭ್ರಮ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಖ್ಯಾತ ಗಾಯಕರಾದ ನಿತಿನ್ ರಾಜಾರಾಂ ಶಾಸ್ತ್ರಿ ಹಾಗೂ ತಂಡದಿಂದ ಗಾಯನ ಕಾರ್ಯಕ್ರಮ ನಡೆಯಲಿದೆ. ಅಲ್ಲದೆ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಹಾಗೂ ಉತ್ತಮ ಬೊಂಬೆ ಕೂರಿಸಿದವರಿಗೆ ಬಹುಮಾನ ವಿತರಣೆ ನಡೆಯಲಿದೆ ಎಂದು ಮಾಹಿತಿ ನೀಡಿದರು.



ಮೈಸೂರಿನ ಹೆಬ್ಬಾಳು ದಸರಾ ಕ್ರೀಡಾಹಬ್ಬಕ್ಕೆ ಶಾಟ್‌ಪುಟ್ ಎಸೆಯುವ ಮೂಲಕ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಶ್ರೀಧರ್ ಚಾಲನೆ ನೀಡಿದರು.

ಜೋಯಾಲುಕ್ಕಾಸ್ ಶೋ ರೂಂ ಉದ್ಘಾಟನೆ...



ಹಾಸನದಲ್ಲಿ ನವೀಕೃತ ಜೋಯಾಲುಕ್ಕಾಸ್‌ನ ಐಷಾರಾಮಿ ಶೋ ರೂಂ ಅನ್ನು ಹಾಸನ ಸಂಸದ ಶ್ರೇಯಸ್ ಎಂ.ಪಟೇಲ್ ಶನಿವಾರ ಉದ್ಘಾಟಿಸಿದರು. ಈ ವೇಳೆ ಹಾಸನ ಮೇಯರ್ ಗಿರೀಶ್ ಚನ್ನವೀರಪ್ಪ, ಜೋಯಾಲುಕ್ಕಾಸ್‌ನ ಪ್ರತಿನಿಧಿಗಳಾದ ರಾಜೇಶ್ ಕೃಷ್ಣನ್, ವಿ.ಎಸ್.ಜಿನೇಶ್ ಸೇರಿದಂತೆ ಗಣ್ಯರು ಹಾಗೂ ಗ್ರಾಹಕರು ಹಾಜರಿದ್ದರು.

ಇಂದು ಮೈಸೂರು ಕೊಡವ ಸಮಾಜದ ವಾರ್ಷಿಕ ಮಹಾಸಭೆ

ಮೈಸೂರು, ಸೆ. 27– ಮೈಸೂರು ವಿಜಯನಗರ ಮೊದಲ ಹಂತದ ಮೈಸೂರು ಕೊಡವ ಸಮಾಜದ 47ನೇ ವಾರ್ಷಿಕ ಮಹಾಸಭೆ ಸೆ.28 (ಭಾನುವಾರ)ರಂದು ಬೆಳಗ್ಗೆ 9.30ಕ್ಕೆ ನಡೆಯಲಿದೆ. ಸಮಾಜದ ಗುರುಮನೆ ಸಭಾಂಗಣದಲ್ಲಿ ನಡೆಯುವ ಸಭೆಯ ಅಧ್ಯಕ್ಷತೆಯನ್ನು ಸಮಾಜದ ಅಧ್ಯಕ್ಷರಾದ ಮುಂಜಂಡ ಎ.ಗಣಪತಿ ವಹಿಸಲಿದ್ದಾರೆ.

ವಾರ್ಷಿಕ ಮಹಾಸಭೆ...



ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಘದ 61ನೇ ವಾರ್ಷಿಕ ಮಹಾಸಭೆ ಗುರುವಾರ ಸಂಘದ ಆವರಣದಲ್ಲಿ ನಡೆಯಿತು. ಸಂಘದ ಅಧ್ಯಕ್ಷ ಯು.ಎಸ್.ರಮೇಶ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಈ ವೇಳೆ ಉಪಾಧ್ಯಕ್ಷೆ ಹೆಚ್.ಸಿ.ಪಂಕಜ, ಸಂಸ್ಥೆಯ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್, ಆಡಳಿತ ಮಂಡಳಿ ನಿರ್ದೇಶಕರಾದ ಗುಲಾಂ ರಬ್ಬಾನಿ, ಹೆಚ್.ಎಸ್.ರಾಮಮೂರ್ತಿ, ರಾಮಕೃಷ್ಣೇಗೌಡ, ಎನ್.ಮಂಜುನಾಥ್, ಎಂ.ಎ.ನಯನಕುಮಾರ್, ಎಂ.ಮೀನಾಕ್ಷಿ, ಬಿ.ರಮಾರಾಧ್ಯ, ಸಿ.ಎಂ.ಸುಂದ್ರಪ್ಪ, ಎಂ.ಆನಂದ್, ರೂಪ, ಕೆ.ಉಷಾ, ಶೋಭಾ, ನಸೀಮಾಜಾನ್, ಆರ್.ಗೌತಮ್, ಮಂಜುಳಾ ಉಪಸ್ಥಿತರಿದ್ದರು.

ಜಾತಿಗಣತಿಗೆ ಅನಾರೋಗ್ಯಪೀಡಿತ ಶಿಕ್ಷಕರ ನಿಯೋಜನೆ ಖಂಡಿಸಿ ಪ್ರತಿಭಟನೆ



ಜಾತಿಗಣತಿಗೆ ಅನಾರೋಗ್ಯಪೀಡಿತ ಶಿಕ್ಷಕರನ್ನು ನಿಯೋಜಿಸಿರುವ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಸೆ.27(ಜಿಎ)–ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಜಾತಿಗಣತಿಗೆ ಅನಾರೋಗ್ಯಪೀಡಿತ ಶಿಕ್ಷಕರನ್ನು ನಿಯೋಜಿಸಿ, ಶಿಕ್ಷೆ ನೀಡುತ್ತಿರುವ ರಾಜ್ಯ ಸರ್ಕಾರದ ಕ್ರಮವನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಸರ್ಕಾರ ಮನೆಗಳ ಜನಗಣತಿಯ ಪಟ್ಟಿಗಳನ್ನು ಶಿಕ್ಷಕರಿಗೆ ಸರಿಯಾಗಿ ನೀಡದೆ, ಆ ಮನೆಗಳ ಲೊಕೇಶನ್ ಅನ್ನು ತಲುಪುವುದು ಕಷ್ಟಕರವಾಗಿದೆ. ಮನೆ ಮುಂದೆ ಹಿಂದುಳಿದ ವರ್ಗಗಳ ಆಯೋಗದಿಂದ ಅಂಟಿಸಿರುವ ಯುಹೆಚ್‌ಐಡಿ ನಂಬರ್, ಹಳ್ಳಿಗಳಲ್ಲಿ ಬೇರೆ ಬೇರೆ ಜಾಗಗಳಲ್ಲಿ ತೋರಿಸುತ್ತಿರುವುದು ದೊಡ್ಡ ಸಮಸ್ಯೆಯಾಗಿದೆ ಎಂದು ಪ್ರತಿಭಟನಾಕಾರರು ಆಪಾದಿಸಿದರು.

ದೈಹಿಕ ನ್ಯೂನತೆಯುಳ್ಳ, ಅನಾರೋಗ್ಯ ಮತ್ತು ವಯಸ್ಸಾದ ಶಿಕ್ಷಕರಿಗೆ ದೂರದ ಊರಿಗೆ ಸಮೀಕ್ಷೆಗೆ ಹೋಗಲು ತೊಂದರೆಯಾಗುತ್ತಿದೆ. ಇಂತಹ ಅನಾರೋಗ್ಯವುಳ್ಳವರು, ವೈದ್ಯಕೀಯ ಸರ್ಟಿಫಿಕೇಟ್ ನೀಡಿದರೂ, ಸರ್ಕಾರ ಇಂಥವರಿಗೆ ವಿನಾಯತಿ ನೀಡುತ್ತಿಲ್ಲ. ರಾಜ್ಯ ಸರ್ಕಾರ ಈ ಕೂಡಲೇ ಶಿಕ್ಷಕರ ಸಮಸ್ಯೆಗಳನ್ನು ಆಲಿಸಿ, ಆನ್‌ಲೈನ್ ಬದಲು ಬುಕ್‌ಲೆಟ್ ಅಥವಾ ಮ್ಯಾನ್ಯುಯಲ್ ಅಪ್ಲಿಕೇಶನ್‌ನಲ್ಲಿ ಗಣತಿ ಮಾಡಲಿ ಹಾಗೂ ಅನಾರೋಗ್ಯದಿಂದ ಬಳಲುತ್ತಿರುವವರು ವೈದ್ಯಕೀಯ ಸರ್ಟಿಫಿಕೇಟ್ ನೀಡಿದವರಿಗೆ ಈ ಜಾತಿ ಗಣತಿಯಿಂದ ರಿಯಾಯಿತಿಯನ್ನು ನೀಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ತೇಜೇಶ್ ಲೋಕೇಶ್ ಗೌಡ, ಗೋಲ್ಡನ್ ಸುರೇಶ್, ಪ್ರಜೀಶ್, ಪ್ರಭುಶಂಕರ, ಕೃಷ್ಣಪ್ಪ, ಶಿವಕುಮಾರ್, ಸಿದ್ದೇಗೌಡ, ಶಿವಲಿಂಗಯ್ಯ, ನೇಹಾ, ಭಾಗ್ಯಮ್ಮ, ಕೃಷ್ಣೇಗೌಡ, ಹೊನ್ನೇಗೌಡ, ಹನುಮಂತಯ್ಯ, ತಾಯೂರು ಗಣೇಶ್, ರಾಮಣ್ಣ, ಬಸವರಾಜು, ಕುಮಾರ್‌ಗೌಡ, ಸುನೀಲ್ ಅಗರವಾಲ್, ಆನಂದ್‌ಗೌಡ, ಡಾ.ಶಾಂತರಾಜೇಅರಸ್, ರಾಧಾಕೃಷ್ಣ, ರಾಜುಗೌಡ, ರಘುಅರಸ್, ಮೂರ್ತಿಲಿಂಗಯ್ಯ, ಗಣೇಶ್ ಪ್ರಸಾದ್, ದರ್ಶನ್ ಗೌಡ, ರವಿನಾಯಕ್, ರವೀಶ್, ಮಹಾದೇವಸ್ವಾಮಿ, ಚಂದ್ರಶೇಖರ್ ಇದ್ದರು.

ಬೆಂಗಳೂರಿಗೆ ಇಬ್ಬರು ಪೊಲೀಸ್ ಕಮಿಷನರ್ ನೇಮಕಕ್ಕೆ ಚಿಂತನೆ



ತುಮಕೂರು: ಬೆಂಗಳೂರು ನಗರಕ್ಕೆ ಇಬ್ಬರು ಪೊಲೀಸ್ ಕಮಿಷನರ್ ನೇಮಕ ಮಾಡುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಬಿಬಿಎಂಪಿಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮಾಡಲಾಗಿದೆ. ಪ್ರಾಧಿಕಾರದ ವ್ಯಾಪ್ತಿಯಲ್ಲಿ ಐದು ಮಹಾನಗರ ಪಾಲಿಕೆಗಳನ್ನು ರಚಿಸಲಾಗಿದೆ. ಅದರ ಭಾಗವಾಗಿ ಇಬ್ಬರು ಪೊಲೀಸ್ ಕಮಿಷನರ್ ನೇಮಕ ಮಾಡಬೇಕು ಎಂಬ ಬೇಡಿಕೆ ಇದೆ' ಎಂದರು. ಹೊಸದಾಗಿ ಕಮಿಷನರ್ ಹುದ್ದೆ ಸೃಷ್ಟಿ, ಅದರ ಸಾಧಕ, ಬಾಧಕ, ಬೇಕಾಗುವ ಸಿಬ್ಬಂದಿ, ಖರ್ಚು ವೆಚ್ಚಗಳ ಬಗ್ಗೆ ಅಧ್ಯಯನ ಮಾಡಲಾಗುತ್ತಿದೆ. ಶೀಘ್ರವೇ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.09.2025 ಭಾನುವಾರ, ಮಳೆ ನಕ್ಷತ್ರ: ಹಸ್ತ 27.09.2025ರಿಂದ 10.10.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯಣ, ಶರದ್ ಋತು, ಅಶ್ವಿನಿ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಶ್ರೀ ವಾಸವಿ ಶಾಂತಿಧಾಮ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ವರ್ಧ್ಯಂತ್ಯುತ್ಸವ, ಬೆಳಗ್ಗೆ 6.30ಕ್ಕೆ ವೇದ ಪಾರಾಯಣ, ಕಲಶಾರಾಧನೆ, ಪಂಚಾಮೃತ ಅಭಿಷೇಕ, ಮಹಾಪೂಜಾ, ಶ್ರೀ ನವಚಂಡಿಕಾ ಹೋಮ, ಪ್ರಾಯಶ್ಚಿತ್ತ ಹೋಮ, ಜಯಾದಿ, ಮಹಾಪೂರ್ಣಾಹುತಿ, ಬೆ. 11.30ಕ್ಕೆ ಮಹಾಪೂರ್ಣಾಹುತಿ, ಮಂತ್ರಪುಷ್ಪ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ವೇದಮೂರ್ತಿಗಳಿಂದ ವೇದಾಶೀರ್ವಚನ, ಸಭಾ ತಾಂಬೂಲ, ಸ್ಥಳ: ಹಿರಿಯ ನಾಗರಿಕರ ನಿವಾಸ, ಆಲನಹಳ್ಳಿ ಬಡಾವಣೆ, ನಾಡನಹಳ್ಳಿ

■ **ರೋಟರಿ ಮೈಸೂರು ಮೆಟ್ರೋ :** ರೋಟರಿ ಪಾರಂಪರಿಕಾ ನಡಿಗೆ, ಮುಖ್ಯ ಅತಿಥಿಗಳು : ಜಿಲ್ಲಾ ಗೌರ್ನರ್ ರೋ.ಪಿ.ಕೆ. ರಾಮಕೃಷ್ಣ, ರೋ. ಯಶಸ್ವಿ ಸೋಮಶೇಖರ್, ರೋ. ಡಾ. ಶಿವಪ್ರಸಾದ್, ರೋ.ಬಿ. ಹರೀಶ್, ಸ್ಥಳ: ಕುಕ್ಕರಹಳ್ಳಿ ಲೇಕ್ ಈಸ್ಟ್ ಗೇಟ್, ಬೆಳಗ್ಗೆ 7ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ. ಬೊಜ್ಜು ನಿವಾರಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ ಬೆಳಗ್ಗೆ 9ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಸುಬ್ಬರಾಯ ದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ್ ಶ್ರೀ ಪ್ರಸನ್ನ, ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ನವರಾತ್ರಿ ಬ್ರಹ್ಮೋತ್ಸವ. ಬೆಳಗ್ಗೆ ಮಹಾಸುದರ್ಶನ ಹೋಮ, ಉತ್ಸವ, ಸಾಯಂಕಾಲ ಕಲ್ಯಾಣೋತ್ಸವ, ಪ್ರವಚನ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನದ ಆವರಣ, ದೇವರಾಜ ಮೊಹಲ್ಲಾ.

■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ–2025. ಬೆಳಗ್ಗೆ 9ಕ್ಕೆ ಶ್ರೀ ಭೂಸೂಕ್ತ ಹೋಮ, ಶ್ರೀ ಭುವನೇಶ್ವರಿ ಅಲಂಕಾರ, ಸ್ಥಳ: ದೇವಸ್ಥಾನದ ಪ್ರಾಂಗಣ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ:** ಶ್ರೀ ಶಾರದಾ ಶರನ್ನವರಾತ್ರೋತ್ಸವ–2025. ಷಷ್ಠಿ ಶ್ರೀ ಇಂದ್ರಾಣೀ (ಗಜಾರೂಡಾಲಂಕಾರ), ಶ್ರೀ ಸುಬ್ರಹ್ಮಣ್ಯ ಹೋಮ, ಸ್ಥಳ: ಅಭಿನವ ಶಂಕರಾಲಯ, ಪೋರ್ಟ್ ಮೊಹಲ್ಲಾ. ಬೆಳಗ್ಗೆಯಿಂದ.

■ **ವಿವೇಕಾನಂದನಗರ ಬ್ರಾಹ್ಮಣ ಮಹಾಸಭಾ:** ಶರನ್ನವರಾತ್ರಿ, ವಿದುಷಿ ಶ್ರೀಮತಿ ತೇಜಸ್ವಿನಿ ಎಸ್. ವರ್ತಲೂರು ಅವರಿಂದ ಅವರಿಂದ ಭಕ್ತಿ ಗೀತೆ, ಸ್ಥಳ: ಶ್ರೀ ಶಂಕರ ಪ್ರಾರ್ಥನಾ ಮಂದಿರ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀದೇವಿ ನವರಾತ್ರಿ ಕಾರ್ಯಕ್ರಮ. ಬೆಳಗ್ಗೆ 9ರಿಂದ ಶ್ರೀ ದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರ ಪೂಜೆ, ನವಾವರಣ ಪೂಜೆ, ವಿದುಷಿ ವಿದ್ಯಾ ಕಲ್ಯಾಣರಾಮನ್ ಅವರಿಂದ ಕರ್ನಾಟಕ ಸಂಗೀತ ಗಾಯನ, ಮಧ್ಯಾಹ್ನ 12ಕ್ಕೆ ಅನ್ನಾರ್ಚನೆ, ವಿಶಾಲಾಕ್ಷಿ ಪೂಜೆ, ಹೋಮ ಪೂರ್ಣಾಹುತಿ, ಸಂಜೆ 4ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ಕ್ಕೆ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಗಣಪತಿ ಸಚ್ಚಿದಾನಂದ ಆಶ್ರಮ.

■ **ವ್ಯವಸ್ಥಾಪಕರು:** ಪೇಪರ್ ಪಲ್ಪ್ ಉಪಯೋಗಿಸಿ ಕೆ.ಎಸ್.ರಾಘವೇಂದ್ರ ಕೆ.ಎಸ್.ಅವರು ಕೈಯ್ಯಿಂದ ಮಾಡಿದ 500ಕ್ಕೂ ಹೆಚ್ಚು ಬೊಂಬೆಗಳ ಮೂಲಕ ಶ್ರೀನಿವಾಸ ಕಲ್ಯಾಣ, ಶ್ರೀ ರಾಘವೇಂದ್ರ ಸ್ವಾಮಿಯವರ ಮಹಿಮೆ, ದಶಾವತಾರದಲ್ಲಿ ಶ್ರೀ ಬಾಲಕೃಷ್ಣ ಲೀಲೆ ಕುರಿತು ಪ್ರದರ್ಶನ. ಸ್ಥಳ: ಇಂಚರ ಕಲಾಕ್ಷೇತ್ರ ಮಹದೇಶ್ವರ ನಗರ, ಬೆಳಗ್ಗೆ 10ರಿಂದ.

■ **ಬಂಜಾರ (ಲಂಬಾಣಿ) ಸೇವಾ ಸಂಘ:** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಂ.ಸುಂದರ್, ಸ್ಥಳ: ಸಂಘದ ಕಟ್ಟಡ, ವಿಜಯನಗರ ಎರಡನೇ ಹಂತ, ಬೆಳಗ್ಗೆ 10ಕ್ಕೆ.

■ **ಶ್ರೀ ಅಮೃತೇಶ್ವರ ದೇವಸ್ಥಾನ :** ಶ್ರೀ ಶ್ರೀ ದಕ್ಷಿಣಾಮ್ನಾಯ ಶೃಂಗೇರಿ ಶಾರದಾಪೀಠದ ಉಭಯ ಜಗದ್ಗುರುಗಳ ಅನುಗ್ರಹಗಳೊಂದಿಗೆ ಶರನ್ನವರಾತ್ರಿ ಪ್ರಯುಕ್ತ 75ನೇ ವರ್ಷದ ಸಹಸ್ರ ಚಂಡಿಕಾಯಾಗ, ಬೆಳಗ್ಗೆ 9.30ಕ್ಕೆ ಕಾಳರಾತ್ರಿದೇವಿಯ ಆರಾಧನೆ, ಮಧ್ಯಾಹ್ನ 12ಕ್ಕೆ ಪೂರ್ಣಾಹುತಿ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಮೃತೇಶ್ವರ ದೇವಸ್ಥಾನ.

■ **ವ್ಯವಸ್ಥಾಪಕರು:** ಮೈಸೂರು ಮನೆ–ಮನೆ ದಸರಾ ಬೊಂಬೆ ಪ್ರದರ್ಶನ–2025. ಸ್ಥಳ: ಹೇಮಲತಾ ಕುಮಾರಸ್ವಾಮಿ ಅವರ ನಿವಾಸ, 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್:** 29ನೇ ವರ್ಷದ ಶರನ್ನವರಾತ್ರಿ ಮಹೋತ್ಸವ. ಬೆಳಗ್ಗೆ 8.30ಕ್ಕೆ ಮಹಾಭಿಷೇಕ, ಶ್ರೀ ಕಾತ್ಯಾಯಿನಿ, ಶ್ರೀವಿದ್ಯಾ ಜ್ವಲದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ಸುಬ್ರಹ್ಮಣ್ಯ ಆವರಣಾಂಗ ಹೋಮ, ಶ್ರೀ ದಶವಾರಾಹಿ ಹೋಮ, ಸ್ಥಳ: ಫೌಂಡೇಷನ್ ಆವರಣ, ಜಯಲಕ್ಷ್ಮೀಪುರಂ.

■ **ಸುರುಚಿ ರಂಗಮನೆ:** ಸಾಹಿತ್ಯ ಚಾವಡಿ ಕಾರ್ಯಕ್ರಮ –161, ಭಾಷಣಕಾರರು: ಡಾ.ಕೃಷ್ಣಮೂರ್ತಿ ಹನೂರು, ವಿಷಯ: ಸಾಹಿತ್ಯ ಸೃಷ್ಟಿ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಬೆಳಗ್ಗೆ 10.30 ರಿಂದ.

■ **ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್ :** ದಸರಾ ಕೇಕ್ ಶೋ, ಸ್ಥಳ: ಶ್ರೀ ಚಾಮರಾಜೇಂದ್ರ ಸ್ಕೂಲ್ ಫಾರ್ ಎಕ್ಸಲೆನ್ಸ್, ಮಹಾರಾಜ ಕಾಲೇಜು ಮೈದಾನ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ದಸರಾ ಚಿಂತನ–ಡಾ.ಟಿ.ವಿ.ಸತ್ಯನಾರಾಯಣ, 6.15 ದಸರಾ ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ, ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ದಸರಾದಲ್ಲಿ ಇಂದು ಮತ್ತು ನಾಳೆ ನಂತರ ಮೈಸೂರು ದಸರಾ ಎಷ್ಟೊಂದು ಸುಂದರ, ಪ್ರಸ್ತುತಿ–ಶ್ರೀಮಾನ್ ಎಸ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಸಂಗೀತಾ ಕಟ್ಟಿ, 8.30 ನಮ್ಮ ಆರೋಗ್ಯ–ಅಂತಾರಾಷ್ಟ್ರೀಯ ಹಿರಿಯ ನಾಗರಿಕರ ದಿನಾಚರಣೆಯ ಸಂದರ್ಭದಲ್ಲಿ ಹಿರಿಯ ನಾಗರಿಕರ ಆರೋಗ್ಯ ಕಾಳಜಿ ಕುರಿತು ಫಿಸಿಷಿಯನ್ ಮತ್ತು ಡಯಾಬಿಟಾಲಜಿಸ್ಟ್ ಡಾ.ಕಾರ್ತಿಕ್ ಉಡುಪ.ಎನ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.05 ಮಕ್ಕಳ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 9.30 ಮೈಸೂರು ಬ್ರಾಂಡ್ ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 9.40 ಮೈಸೂರು ಸಂಸ್ಥಾನದ ಕಲಾ ಪರಂಪರೆ–ದಸರಾ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಸಾಹಿತ್ಯ: ಡಾ.ಜ್ಯೋತಿಶಂಕರ್, ಪರಿಕಲ್ಪನೆ ಹಾಗೂ ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, 10.00 ಕೇಳಿ ಗಿಳಿಗಳೇ–ಲಿಂಗಾಂಬುಧಿಪಾಳ್ಯದ ಅರಿವು ಶಾಲೆಯ ಪುಟ್ಟ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 KRISH-TRISH and Balty boy ನಾವು ಭಾರತೀಯರು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.55 ಮನ್ ಕೀ ಬಾತ್–ಭಾರತದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತು

ಮಧ್ಯಾಹ್ನ: 12.05 ವನಿತಾ ವಿಹಾರ–ಬೆಂಗಳೂರಿನ ವಾಗ್ದೇವಿ ಭಜನಾ ಮಂಡಳಿ ಸದಸ್ಯರಿಂದ ನವರಾತ್ರಿ ಕಾರ್ಯಕ್ರಮ, 12.35 ದೇವರನಾಮ, 12.45 ಜನಪದ ಸಂಗೀತ : ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ನಿಲಘಟ್ಟ ಗ್ರಾಮದ ಪುಟ್ಟನಂಜಮ್ಮ ಮತ್ತು ಸಂಗಡಿಗರಿಂದ ಚಾಮುಂಡೇಶ್ವರಿ ಹಾಡು, 1.00 ಪ್ರಗತಿ ಪಥ –ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು: ಸಾಯಿ ತೇಜಸ್ ಚಂದ್ರಶೇಖರ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40–ನಕ್ಷತ್ರಲೋಕ–ಎಸ್.ವಿ.ರಾಜೇಂದ್ರಸಿಂಗ್ ಬಾಬು ಅವರ ಸಂದರ್ಶನ, ಇವರೊಂದಿಗೆ ಭಾಗವಹಿಸಿದ್ದಾರೆ–ಜಿ.ಶಾಂತಕುಮಾರ್ ಹಾಗೂ ಶ್ರೀಮಾನ್.ಎಸ್., 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ, ಸಿಕ್ಕಿಲ್ ಮಾಲಾ ಚಂದ್ರಶೇಖರ್–ವೇಣುವಾದನ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ– ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಏಷ್ಯಾ ಕಪ್ ಕ್ರಿಕೆಟ್ 2025ರ ಅಂಗವಾಗಿ ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವೆ ದುಬೈನ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಟಿ–20 ಫೈನಲ್ ಪಂದ್ಯದ ವೀಕ್ಷಕ ವಿವರಣೆ, 8.00 ಭಾರತದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿ ಅವರು ರಾಷ್ಟ್ರದ ಜನತೆಯೊಡನೆ ಹಂಚಿಕೊಳ್ಳುವ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 8.30 ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ ಮುಂದುವರೆಯುತ್ತದೆ, 10.00 ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

■ **ತರಳುಬಾಳು ಸಮಾಗಮ, ಶ್ರೀ ತರಳಬಾಳು ಶಿಕ್ಷಣ ಕೇಂದ್ರ:** ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ 34ನೆಯ ಶ್ರದ್ಧಾಂಜಲಿ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ನಟರಾಜ ಸ್ವಾಮೀಜಿ, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್, ನುಡಿನಮನ: ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಹೆಚ್.ಕೆ.ಲಿಂಗರಾಜು, ಅಧ್ಯಕ್ಷತೆ: ಶ್ರೀ ತರಳಬಾಳು ಸಮಾಗಮ ಅಧ್ಯಕ್ಷ ಡಿ.ಎನ್.ಲೋಕಪ್ಪ, ಉಪಸ್ಥಿತರು: ಉಪಾಧ್ಯಕ್ಷ ಡಾ.ಕೆ.ಬಿ.ಗುರುಮೂರ್ತಿ, ಪ್ರಾಂಶುಪಾಲ ಎಸ್ ಮಹದೇವಸ್ವಾಮಿ, ಶ್ರೀಮತಿ ಶಶಿಕಲಾ ಸಿ. ಚಂದ್ರಶೇಖರ್ ಮತ್ತು ವೃಂದದವರಿಂದ ವಚನ ಗಾಯನ, ಸ್ಥಳ: ಶ್ರೀ ತರಳಬಾಳು ಶಿಕ್ಷಣ ಕೇಂದ್ರ, ತೊಣಚಿಕೊಪ್ಪಲು, ಬೆಳಗ್ಗೆ 11ಕ್ಕೆ.

■ **ಕವಿಪ್ರನಿನಿ ಎಸ್ಕಾಂಗಳ ಪಿಂಚಣಿ ಮತ್ತು ಕುಟುಂಬ ಪಿಂಚಣಿದಾರರ ಕ್ಷೇಮಾಭಿವೃದ್ಧಿ ಸಂಘ:** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಚಿಕ್ಕಚಲ್ಲಯ್ಯ, ಸ್ಥಳ: ಸಂಘದ ಆವರಣ, ಬೆಳಗ್ಗೆ 11ಕ್ಕೆ.

■ **ಶ್ರೀ ಶ್ರೀ ಆವನೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ :** ಶ್ರೀ ಶಾರದಾ ಶರನ್ನವರಾತ್ರಿ ಮಹೋತ್ಸವ, ಷಷ್ಠಿ–ಕಾತ್ಯಾಯಿನಿ ಅಲಂಕಾರ, ಬೆಳಗ್ಗೆ 9ಕ್ಕೆ ಶ್ರೀ ಸೂಕ್ತ ಹೋಮ, ಮಧ್ಯಾಹ್ನ 12.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6.30ರಿಂದ ಶ್ರೀನಿಧಿ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀ ಆವನೀ ಶೃಂಗೇರಿ ಮಠ, ವಿದ್ಯಾರಣ್ಯಪುರಂ.

■ **ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರ :** 61ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ನವರಾತ್ರಿ ಉತ್ಸವ, ಉದ್ಘಾಟನೆ: ಕೊ.ಸು.ನರಸಿಂಹಮೂರ್ತಿ, ವಿದುಷಿ ಶ್ರೀಮತಿ ಪಲ್ಲವಿ ರಾಘವೇಂದ್ರ, ವಿದುಷಿ ಶ್ರೀಮತಿ ಶ್ರೀ ಲಕ್ಷ್ಮಿ, ಶ್ರೀಮತಿ ವಿದುಷಿ ಗುರು ಪಲ್ಲವಿ ರಾಘವೇಂದ್ರ ಅವರಿಗೆ ನವರಾತ್ರಿ ಕಲೆಮನೆ ಪ್ರಶಸ್ತಿ ಪ್ರದಾನ, ಸ್ಥಳ: ಕಲೆಮನೆ ಸಭಾಂಗಣ, ಮಧ್ಯಾಹ್ನ 3.30ಕ್ಕೆ.


■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಮೈಸೂರು ದಸರಾ ಮಹೋತ್ಸವ ಸಮಿತಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು :** ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳ, ಸಾಹಿತಿಗಳೊಂದಿಗೆ ಸೆಲ್ಫಿ–ಪ್ರೊ. ಎಂ. ಶಂಕರೇಗೌಡ, ವೃಕ್ಷ ಟ್ರಸ್ಟ್ ಕಲಾವಿದರಿಂದ ರಂಗ ಗೀತೆಗಳ ಗಾಯನ, ಸ್ಥಳ: ರಾಷ್ಟ್ರಕವಿ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಹಳೆ ಡಿಸಿ ಕಚೇರಿ ಎದುರು, ಬೆಳಗ್ಗೆ 11.30ಕ್ಕೆ


■ **ಮೈಸೂರು ಬೊಂಬೆ ರಂಗ ಮಂದಿರ :** ಮೈಸೂರು ಬೊಂಬೆ ಪ್ರದರ್ಶನ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಮೃಗಾಲಯದ ಎದುರು, ಸಂಜೆ 4.30 ರಿಂದ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ದಸರಾ ಪ್ರಯುಕ್ತ ವಿಶೇಷ ಕರ್ನಾಟಕ ಸಂಗೀತ ಕಾರ್ಯಕ್ರಮ, ವಿದುಷಿ ಹರ್ಷಿತಾ ಸುಬ್ರಮಣ್ಯ, ವಿದುಷಿ ಮೌಲ್ಯ ವೆಂಕಟೇಶ್ ಅವರಿಂದ ಭರತನಾಟ್ಯ, ಉಪಸ್ಥಿತರು : ನಾಟ್ಯಾಚಾರ್ಯ ಪ್ರೊ. ಕೆ. ರಾಮಮೂರ್ತಿರಾವ್, ಸ್ಥಳ: ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಸಂಜೆ 5ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಇಂದು ದಸರಾ ಕುಸ್ತಿ ಪಂದ್ಯಾವಳಿಯಲ್ಲಿ
ಟೈಟಲ್ ಪ್ರತಿಷ್ಠೆಗಾಗಿ ಹಣಾಹಣಿ





ದಸರಾ ಕುಸ್ತಿ ಅಖಾಡದಲ್ಲಿ ಶನಿವಾರ ಸೆಣಸಾಡಿದ ಪೈಲ್ವಾನರು

ಮೈಸೂರು,ಸೆ.27– ಮೈಸೂರು ದಸರಾ ಮಹೋತ್ಸವದ ಕುಸ್ತಿ ಪಂದ್ಯಾವಳಿಯ ಟೈಟಲ್ ಪ್ರಶಸ್ತಿಗಳ ಅಂತಿಮ ಹಣಾಹಣಿ ಭಾನುವಾರ ನಡೆಯಲಿದೆ.

ಡಿ.ದೇವರಾಜ ಅರಸ್ ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಭಾನುವಾರ ಮಧ್ಯಾಹ್ನ 3ರಿಂದ ಆರಂಭಗೊಳ್ಳಲಿರುವ ಟೈಟಲ್ ಪಂದ್ಯಗಳ ಅಂತಿಮ ಸುತ್ತಿನಲ್ಲಿ ದಸರಾ ಕಿಶೋರ ಪ್ರಶಸ್ತಿಗೆ ದಾವಣಗೆರೆಯ ಪೈ. ಕೊರವರ ಸಂಜೀವ ಹಾಗೂ ಪೈ. ಕುಮಾರ್ ನಾಗೂರ್, ದಸರಾ ಕುಮಾರ ಪ್ರಶಸ್ತಿಗೆ ಮೈಸೂರಿನ ಪೈ.ಬಿ.ಚೇತನ್ ಹಾಗೂ ಪೈ.ಚೇತನ್‌ಗೌಡ, ದಸರಾ ಕಂಠೀರವ ಪ್ರಶಸ್ತಿಗೆ ಪೈ.ಕಾಮೇಶ್ ಪಾಟೀಲ್ ಹಾಗೂ ಪೈ.ಎನ್.ಕಿರಣ್, ದಸರಾ ಕೇಸರಿ ಪ್ರಶಸ್ತಿಗೆ ಪೈ.ಬಿ.ಡಿ.ಪರಮಾನಂದ ಹಾಗೂ ಪೈ. ಮಂಜುನಾಥ್ ಗೌಡ ಸೆಣಸಾಡಲಿದ್ದಾರೆ.

ಅಂತಿಮ ಕುಸ್ತಿ: ಇದೇ ಮೊದಲ ಬಾರಿಗೆ 15 ಹಾಗೂ 17 ವರ್ಷ ವಯೋಮಿತಿಯ ಬಾಲ ಪೈಲ್ವಾನರಿಗೆ ಆಯೋಜಿಸಿರುವ ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿಯ ಅಂತಿಮ ಕುಸ್ತಿಯೂ ಇದೇ ವೇಳೆ ನಡೆಯಲಿದ್ದು, 15 ವರ್ಷ ವಯೋಮಿತಿಯೊಳಗಿನ ದಸರಾ ಬಾಲಕಿಶೋರ ವಿಭಾಗದಲ್ಲಿ ಬೆಳಗಾವಿ ಪೈ.ಪ್ರದೀಪ್ ಗೋಳಿಹಳ್ಳಿ ಮತ್ತು ದಾವಣಗೆರೆ ಪೈ.ಆರ್.ಪ್ರಜ್ವಲ್, ದಸರಾ ಬಾಲ ಕುಮಾರ ವಿಭಾಗದಲ್ಲಿ ಧಾರವಾಡ ಪೈ.ಚೇತನ್ ತುಕಾಜಿ ಮತ್ತು ದಾವಣಗೆರೆ ಪೈ.ಮುತ್ತುರಾಜ್ ಸೆಣಸಾಡಲಿದ್ದಾರೆ. 44 ಕೆ.ಜಿ. ವಿಭಾಗದಲ್ಲಿ ಪೈ.ಎನ್.ತೇಜು ಮತ್ತು ಧಾರವಾಡದ ಪೈ.ಅಭಿ ಯಲ್ಲಪ್ಪ, 48 ಕೆ.ಜಿ. ವಿಭಾಗದಲ್ಲಿ ದಾವಣಗೆರೆಯ ಪೈ.ರತನ್ ವಿಠಲ್ ಮತ್ತು ಪೈ.ಸಮರ್ಥ್, 62 ಕೆ.ಜಿ.ವಿಭಾಗದಲ್ಲಿ ಧಾರವಾಡದ ಪೈ.ದಾದಾಪೀರ್ ಮತ್ತು ಮೈಸೂರಿನ ಪೈ. ಚಿನ್ಮಯ್ ಗೌಡ ಫೈನಲ್ ಪ್ರವೇಶಿಸಿದ್ದಾರೆ. ಹಾಗೆಯೇ 17 ವರ್ಷ ವಯೋಮಿತಿಯೊಳಗಿನ ವಿಭಾಗದ ಮೈಸೂರು ದಸರಾ ಬಾಲಕೇಸರಿ(65 ಕೆ.ಜಿ.) ಕುಸ್ತಿಯಲ್ಲಿ ದಾವಣಗೆರೆ ಪೈ.ಅರ್ಜುನ್ ಎಂ.ಕೊರವರ ಮತ್ತು ಪೈ.ಎಂ.ಸತ್ಯರಾಜು, 55 ಕೆ.ಜಿ.ವಿಭಾಗದಲ್ಲಿ ಉತ್ತರ ಕನ್ನಡದ ಅಮೋಘ ಬಸವರಾಜು ಮತ್ತು ಧಾರವಾಡದ ಮನೋಜ್, 60 ಕೆ.ಜಿ.ವಿಭಾಗದಲ್ಲಿ ದಾವಣಗೆರೆಯ ಎಂ.ಮಧು ಕುಮಾರ್ ಮತ್ತು ಹೆಚ್.ಯುವರಾಜ್, 71 ಕೆ.ಜಿ.ವಿಭಾಗದಲ್ಲಿ ಬಾಗಲಕೋಟೆಯ ಅಲ್ತಾಫ್ ಬಿ.ಕರಜಗಿ ಮತ್ತು ಬೆಳಗಾವಿಯ ಸಚಿನ್ ಚಿಕ್ಕಟ್ಟಿ ಫೈನಲ್ ಆಡಲಿದ್ದಾರೆ.

ಕುಸ್ತಿ ಪ್ರಿಯರಿಗೆ ರಸದೌತಣ: ಶನಿವಾರ ನಡೆದ ಪಂದ್ಯಗಳಲ್ಲಿ ಕನಕಪುರ ಪೈ.ಆರ್. ಅಭಿಷೇಕ್ ಎದುರಾಳಿ ಕಲಬುರಗಿಯ ಪೈ.ದೇವಿಂದ್ರ ಗಂವ್ಹಾಲ್ ಅವರನ್ನು 9 ನಿಮಿಷದಲ್ಲಿ ಮಣಿಸಿದರೆ, ಕನಕಪುರ ಪೈ.ಶ್ರೀನಿವಾಸ್ ಎದುರಾಳಿ ಕ್ಯಾತಮಾರನ ಹಳ್ಳಿ ಪೈ.ಬಸವರಾಜು ಹಾಗೂ ಹಿಮ್ಮಾವು ಪೈ.ಕಿರಣ್ ಎದುರಾಳಿ ಪೈ.ನೂತನ್ ವಿರುದ್ಧ ಜಯಗಳಿಸಿದರು. ಮಹಿಳಾ ನಾಡಕುಸ್ತಿಯಲ್ಲಿ ಸೀಗೆಹಳ್ಳಿಯ ಪೈ.ಪ್ರೇಕ್ಷಿತಾ ಮೈಸೂರಿನ ಪೈ.ಹರ್ಷಿತಾ ಅವರನ್ನು 25 ಸೆಕೆಂಡ್‌ಗಳಲ್ಲಿ ಸೋಲಿಸಿದರು. ಬೆಂಗಳೂರಿನ ಪೈ.ಅಶ್ವಿನಿ ಅವರು 2.32 ನಿಮಿಷದಲ್ಲಿ ಪೈ.ನಿಕ್ಷಿತಾ ವಿರುದ್ಧ ಜಯಗಳಿಸಿದರು. ಬೆಂಗಳೂರಿನ ಪೈ.ಡಯಾನ ಅವರು ಪೈ.ರಾಧಿಕಾ ಅವರನ್ನು 1.04 ನಿಮಿಷದಲ್ಲಿ ಚಿತ್ ಮಾಡಿದರು. ತುಮಕೂರು ಪೈ.ಪುಷ್ಪ–ಬೆಂಗಳೂರು ಪೈ.ದಿವ್ಯಾ ಮತ್ತು ರಮ್ಮನಹಳ್ಳಿ ಪೈ.ಅಮೃತಾ–ಬನ್ನೂರು ಪೈ.ಲೋಚನಾ ನಡುವಿನ ಪಂದ್ಯಗಳು ಸಮಬಲದಲ್ಲಿ ಅಂತ್ಯಗೊಂಡವು.

'ನನ್ನ ಮೆಚ್ಚಿನ ಪುಸ್ತಕ ಓದು' ಕಾರ್ಯಕ್ರಮ
ಭೈರಪ್ಪನವರ 'ಗೃಹಭಂಗ' ಬಾನು ಮುಷ್ತಾಕ್‌ರ 'ಎದೆಯ ಹಣತೆ' ಸೇರಿ 16 ಪುಸ್ತಕ ವಿಮರ್ಶೆ

●ಅದ್ಭುತವಾಗಿ ವರ್ಣನೆ ಮಾಡಿದ 16 ವಿದ್ಯಾರ್ಥಿನಿಯರು ●ಎಲ್ಲಾ ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ವಿತರಿಸಿದ ನಟ ಶಂಕರ್ ಅಶ್ವತ್ಥ್



ಕನ್ನಡ ಪುಸ್ತಕಗಳ ರಿಯಾಯ್ತಿ ಮಾರಾಟ ಮೇಳ–2025ರಲ್ಲಿ 'ನನ್ನ ಮೆಚ್ಚಿನ ಪುಸ್ತಕ ಓದು' ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಮೈಸೂರು, ಸೆ.27(ಎಸ್‌ಪಿಎನ್)– ಯುವರಾಜ ಕಾಲೇಜಿನ 16 ವಿದ್ಯಾರ್ಥಿನಿಯರು 'ನನ್ನ ಮೆಚ್ಚಿನ ಪುಸ್ತಕ ಓದು' ಕಾರ್ಯಕ್ರಮದಲ್ಲಿ ಹಿರಿಯ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ರಚಿತ 'ಗೃಹಭಂಗ', ಬಾನು ಮುಷ್ತಾಕ್ ರಚನೆಯ ದೀಪಾ ಭಾಸ್ತಿ ಅನುವಾದದ 'ಎದೆಯ ಹಣತೆ'(ಬೂಕರ್ ಪ್ರಶಸ್ತಿ ಪುರಸ್ಕೃತ ಕೃತಿ) ಪುಸ್ತಕ ಸೇರಿದಂತೆ ಒಟ್ಟು 16 ಸಾಹಿತಿಗಳ ಪುಸ್ತಕಗಳನ್ನು ಅಚ್ಚುಕಟ್ಟಾಗಿ ವಿಮರ್ಶಿಸಿದರು.

ಮೈಸೂರು ಹಳೆ ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗದ ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ದಸರಾ ಮಹೋತ್ಸವ ಸಮಿತಿ ಹಾಗೂ ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ ಆಯೋಜಿಸಿರುವ ಕನ್ನಡ ಪುಸ್ತಕಗಳ ರಿಯಾಯ್ತಿ ಮಾರಾಟ ಮೇಳ–2025ರಲ್ಲಿ 'ನನ್ನ ಮೆಚ್ಚಿನ ಪುಸ್ತಕ ಓದು' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪುಸ್ತಕಗಳ ವಿಮರ್ಶೆ ಮಾಡಿದರು.

ಯುವರಾಜ ಕಾಲೇಜಿನ ಜಿ.ಸೌಜನ್ಯ, ಬಾನು ಮುಷ್ತಾಕ್ ರಚಿತ, ಲೇಖಕಿ ದೀಪಾ ಭಾಸ್ತಿ ಅನುವಾದದ 'ಎದೆಯ ಹಣತೆ' ಕೃತಿಯನ್ನು ವಿಮರ್ಶಿಸಿದರೆ, ಎಸ್. ವೇದಾವತಿ, ಕುವೆಂಪು ರಚಿತ 'ಮಲೆಗಳಲ್ಲಿ ಮದುಮಗಳು' ಕೃತಿಯನ್ನು ವಿಮರ್ಶಿಸಿದರು. ಹಿರಿಯ ಸಾಹಿತಿ ಪೂರ್ಣಚಂದ್ರ ತೇಜಸ್ವಿ ರಚಿತ 'ಏರೋಪ್ಲೇನ್' ಕೃತಿಯನ್ನು ಕೆ.ಎನ್.ಉಲ್ಲಾಸ್ ವಿಮರ್ಶಿಸಿದರೆ, ಹಿರಿಯ ಸಾಹಿತಿ ರವಿಬೆಳಗೆರೆ ರಚಿತ 'ಹೇಳಿ ಹೋಗು ಕಾರಣ' ಕೃತಿಯನ್ನು ವಿದ್ಯಾರ್ಥಿನಿ ಸುಚಿತ್ರಾ ಪರಿಚಯಿಸಿದರು.

ತರಾಸು ರಚಿತ 'ಮಸಣದ ಹೂವು' ಕೃತಿಯನ್ನು ಎಂ.ಮಧುಶ್ರೀ ವಿಮರ್ಶಿಸಿದರೆ, ಹಿರಿಯ ಪತ್ರಕರ್ತ ಅಂಶಿಪ್ರಸನ್ನ ಕುಮಾರ್ ರಚಿತ 'ಸಾಹಿತ್ಯ ಸಂಪದ' ಕೃತಿಯನ್ನು ಎನ್.ಜಿ.ಲಕ್ಷ್ಮೀ ಪರಿಚಯಿಸಿದರು. ಈ ವೇಳೆ ಸಿನಿಮಾ ಪೋಷಕ ನಟ ಶಂಕರ್ ಅಶ್ವತ್ 'ನನ್ನ ಮೆಚ್ಚಿನ ಪುಸ್ತಕ ಓದು' ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿದ್ಯಾರ್ಥಿನಿಯರಿಗೆ ಪ್ರಮಾಣ ಪತ್ರ ವಿತರಿಸಿದರು. ಈ ವೇಳೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಮೈಸೂರು ದಸರಾ ಪುಸ್ತಕ ಮೇಳದ ಉಪಸಮಿತಿ ಸದಸ್ಯ ಎಂ.ಚಂದ್ರಶೇಖರ್, ಡಾ.ಎಂ.ಮಹೇಶ್ ಚಿಕ್ಕಲ್ಲೂರು, ಸುಚಿತ್ರಾ ಹೆಗಡೆ, ಹಿರಿಯ ರಂಗಕರ್ಮಿ ರಾಜಶೇಖರ್ ಕದಂಬ, ಪ್ರಕಾಶಕ ನಿಂಗರಾಜು ಚಿತ್ತಣ್ಣವರ್, ಪ್ರವೀಣ್ ಉಪಸ್ಥಿತರಿದ್ದರು.

ಕೋರ್ಟ್‌ಗಳಲ್ಲಿ ದಾಖಲಾಗುತ್ತಿರುವ ಪ್ರಕರಣಗಳಲ್ಲಿ ಶೇ.30 ಮಕ್ಕಳಿಗೆ ಸಂಬಂಧಿಸಿವೆ

●ಜಿಲ್ಲಾ ನ್ಯಾಯಾಧೀಶರಾದ ಉಷಾರಾಣಿ ಆತಂಕ ●'ಟೀನೇಜರ್' ನಾಟಕ ಪ್ರಸಂಗ ಆಧರಿಸಿ ಇಂತಹ ವೇಳೆ ನ್ಯಾಯದಾನ; ಪೊಲೀಸರ ಇಕ್ಕಟ್ಟಿನ ಪರಿಸ್ಥಿತಿ ವಿವರಣೆ

ಮೈಸೂರು, ಸೆ.27(ಎಸ್‌ಪಿಎನ್)– ನಮ್ಮ ದೇಶದ ಕೋರ್ಟ್‌ಗಳಲ್ಲಿ ದಾಖಲಾಗುವ ನೂರು ಕ್ರಿಮಿನಲ್ ಪ್ರಕರಣದಲ್ಲಿ ಶೇ.30ರಷ್ಟು ಮಕ್ಕಳು ಮಾಡಿದ ಕ್ರಿಮಿನಲ್ ಅಪರಾಧಗಳಾಗಿದ್ದು, ಇದರಲ್ಲಿ ಶೇ.10 ರಷ್ಟು 12ರಿಂದ 18 ವರ್ಷದವರ ಪ್ರೇಮ ಪ್ರಕರಣಗಳಾಗಿವೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷೆ ಉಷಾರಾಣಿ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಮೈಸೂರು ವಕೀಲರ ಸಂಘ ಸಹಯೋಗದೊಂದಿಗೆ ಕಾನೂನು ಅರಿವು ಮೂಡಿಸುವ 'ಟೀನೇಜರ್'(ಹದಿಹರೆಯದವರು) ಕಿರು ನಾಟಕದ ಪ್ರದರ್ಶನವನ್ನು ವೀಕ್ಷಿಸಿದ ಬಳಿಕ ಕಲಾವಿದರಿಗೆ ಪ್ರಮಾಣ ಪತ್ರ ವಿತರಿಸಿ ಅವರು, ಮಾತನಾಡಿದರು.

ಎನ್.ಸುಂದರ್‌ರಾಜ್ ರಚಿಸಿ, ನಿರ್ದೇಶಿಸಿರುವ 'ಟೀನೇಜರ್' ನಾಟಕ ತುಂಬಾ ಸೊಗಸಾಗಿ ಮೂಡಿಬಂದಿದೆ. 12ರಿಂದ 18ರೊಳಗಿನ ಹದಿಹರೆಯದವರು ಪರಸ್ಪರ ಆಕರ್ಷಣೆಗೊಳಗಾಗಿ ಪ್ರೀತಿ–ಪ್ರೇಮದಲ್ಲಿ ಸಿಲುಕುತ್ತಾರೆ. ನಂತರ ಹೇಗೋ ಬದುಕಿನ ಪ್ರಯಣವನ್ನು ಆರಂಭಿಸಿ, ಮುಂದೆ ಕುಟುಂಬವನ್ನು ನೀಗಿಸಲಾಗದೆ ಕ್ರಿಮಿನಲ್ ಪ್ರಕರಣದಲ್ಲಿ ಸಿಲುಕಿ, ಈ ರೀತಿ ದಾರಿ ತಪ್ಪುವ ಮಕ್ಕಳಿಂದ ಪೋಷಕರ ಮನಸ್ಸಿನ ಮೇಲಾಗುವ ಪರಿಣಾಮ, ಈ ಸಂದರ್ಭ ಅಧಿಕಾರಿಗಳ ಕರ್ತವ್ಯಪ್ರಜ್ಞೆ ಕುರಿತು ನಾಟಕ ಬೆಳಕು ಚೆಲ್ಲುತ್ತದೆ ಎಂದರು.

ಹದಿಹರೆಯದ ಮಕ್ಕಳು ತಮ್ಮ ಅರಿವಿಗೆ ಇಲ್ಲದಂತೆ ಅಪರಾಧ ಪ್ರಕರಣದಲ್ಲಿ ಸಿಲುಕುತ್ತಾರೆ. ಈ ಪ್ರಕರಣದಲ್ಲಿ ವಿಚಾರಣೆ ನಡೆಸಿ, ಕಾನೂನು ಜಾರಿಗೊಳಿಸುವುದೇ ಚಾಲೆಂಜಿಂಗ್ ವಿಷಯ. ಪ್ರಕರಣ ಗಂಭೀರ ಸ್ವರೂಪದಿಂದ ಕೂಡಿದ್ದರೆ, ಕಾನೂನು ಪ್ರಕಾರ ಶಿಕ್ಷೆ ವಿಧಿಸಲೇಬೇಕಾಗುತ್ತದೆ ಎಂದು ನ್ಯಾಯದಾನ ವಿಷಯದಲ್ಲಾಗುವ ಮಾನಸಿಕ ತೊಳಲಾಟಗಳನ್ನು ಬಿಚ್ಚಿಟ್ಟರು.

ಮಕ್ಕಳಿಗೆ ಶಿಕ್ಷೆ ಪ್ರಕಟಿಸುವಾಗ ನಮ್ಮ (ತೀರ್ಪು ಪ್ರಕಟಿಸುವ ನ್ಯಾಯಾಧೀಶರು) ಮನಸ್ಸಿನ ಮೇಲೂ ಪರಿಣಾಮ ಬೀರುತ್ತದೆ. ಆದರೆ, ಭಾವನಾತ್ಮಕ ಅಂಶದ ಮೇಲೆ ಅಪರಾಧ ಪ್ರಕರಣಗಳನ್ನು ವಿಲೇವಾರಿ ಮಾಡಲು ಸಾಧ್ಯವಿಲ್ಲ. ಹಾಗಾಗಿ ಕಾನೂನಾತ್ಮಕವಾಗಿಯೇ ನ್ಯಾಯಾಧೀಶರು ಕೆಲಸ ಮಾಡಬೇಕಾಗುತ್ತದೆ ಎಂದು ತಮ್ಮ ಸವಾಲಿನ ಪರಿಸ್ಥಿತಿಯನ್ನು ಎಳೆಎಳೆಯಾಗಿ ವಿವರಿಸಿದರು.

ಇಂತಹ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯೂ ದಾರಿ ತಪ್ಪಿದ ಮಕ್ಕಳನ್ನು ಹೇಗೆ ಸಂರಕ್ಷಣೆ ಮಾಡಬೇಕು. ಆ ಮಕ್ಕಳ ಪುನರ್ವಸತಿಗಾಗಿ ಯಾವೆಲ್ಲಾ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದನ್ನು ಈ ನಾಟಕದ ಪಾತ್ರಧಾರಿಗಳು ತಮ್ಮ ಅಮೋಘ ಪಾತ್ರದ ಮೂಲಕ ತೋರಿಸಿ ಕೊಟ್ಟಿದ್ದಾರೆ. ಪೊಲೀಸ್ ಇಲಾಖೆ ಮಕ್ಕಳು ಮಾಡಿದ ಅಪರಾಧಗಳಿಗೆ ಯಾವ ರೀತಿಯ ಪ್ರಕರಣಗಳನ್ನು ದಾಖಲಿಸುತ್ತದೆ. ದಾರಿ ತಪ್ಪಿದ ಮಕ್ಕಳು, ಅವರ ಪೋಷಕರಿಗೆ ಯಾವ ರೀತಿ ಕಾನೂನು ನೆರವು ನೀಡಲು ಸಾಧ್ಯ ಎಂಬುದೇ ಈ ನಾಟಕದ ತಿರುಳಾಗಿದೆ ಎಂದರು.



ಮಕ್ಕಳಿಗೆ ಕಾನೂನು ಅರಿವು ಮೂಡಿಸುವ 'ಟೀನೇಜರ್' ಕಿರು ನಾಟಕದ ಪ್ರದರ್ಶನ ವೀಕ್ಷಿಸಿದ ಬಳಿಕ ಕಲಾವಿದರಿಗೆ ಪ್ರಮಾಣ ಪತ್ರ ವಿತರಿಸಿದರು.

ರಂಗಭೂಮಿಕೆಯಲ್ಲಿ 'ಟೀನೇಜರ್' ನಾಟಕದ ತಂದೆ ಪಾತ್ರದಲ್ಲಿ ಎಸ್.ಮಂಜುನಾಥ್, ತಾಯಿಯ ಪಾತ್ರದಲ್ಲಿ ವಿಶಾಲಕ್ಷ್ಮಮ್ಮ, ಪ್ರಾಧಿಕಾರ ಪ್ಯಾನಲ್ ವಕೀಲನ ಪಾತ್ರದಲ್ಲಿ ಜಿ.ಆರ್.ಪ್ರವೀಣ್, ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಟಿ.ಪಿ.ಬಸವಶೆಟ್ಟಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಧಿಕಾರಿ ಪಾತ್ರದಲ್ಲಿ ಪುಷ್ಪ, ಮಗನ ಪಾತ್ರಧಾರಿಯಾಗಿ ಧ್ರುವ, ಮಗಳ ಪಾತ್ರದಲ್ಲಿ ಎಚ್.ಕೆ.ಪಲ್ಲವಿ, ಪೊಲೀಸ್ ಪಾತ್ರದಲ್ಲಿ ಸಿದ್ದಿಖ್ ಜುನ್ನುರೈನ್, ಸ್ನೇಹಿತನ ಪಾತ್ರಧಾರಿಯಾಗಿ ಆರ್.ಜಗದೀಶ್, ಅಜ್ಜಿಯ ಪಾತ್ರದಲ್ಲಿ ಸುಲೋಚನಾ ಅಮೋಘವಾಗಿ ಅಭಿನಯಿಸಿದ್ದಾರೆ. ಈ ನಾಟಕಕ್ಕೆ ಸಂಗೀತ ಅಲೆಕ್ಸ್, ಮೇಕಪ್ ನಾಗೇಶ್ ಅವರು ನಿರ್ವಹಿಸಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ಸಮಿತಿ ಮುಖ್ಯಸ್ಥೆ ಕೆ.ಎನ್.ರೂಪ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಕೆ.ಅಮರ್‌ನಾಥ್, ವಕೀಲರ ಸಂಘದ ಜಿಲ್ಲಾಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ.ಸುದೀರ್, ಉಪಾಧ್ಯಕ್ಷ ಎಂ.ವಿ. ಚಂದ್ರಶೇಖರ ಸೇರಿದಂತೆ ಇತರರಿದ್ದರು.

ಸುತ್ತೂರು ಶ್ರೀಕ್ಷೇತ್ರದ ಜನ ಕಲ್ಯಾಣ ಕಾರ್ಯಗಳ ಮುಕ್ತಕಂಠದಿಂದ ಕೊಂಡಾಡಿದ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಬಿ.ದಿನೇಶ್



ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಜಯಂತಿ ಅಂಗವಾಗಿ ವಿಶೇಷಚೇತನರಿಗೆ ಆಸರೆ ಗ್ರೂಪ್ ವತಿಯಿಂದ ಕೃತಕಾಂಗಗಳನ್ನು ವಿತರಿಸಲಾಯಿತು.

ಮೈಸೂರು, ಸೆ.27(ಎಂಕೆ)– ಸುತ್ತೂರು ಶ್ರೀ ಮಠವು ಜಾತಿ, ಮತ ಭೇದವಿಲ್ಲದೆ ಜನ ಕಲ್ಯಾಣಕ್ಕಾಗಿ ಶ್ರಮಿಸುತ್ತಿದೆ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಬಿ.ದಿನೇಶ್ ಹೇಳಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರ 110ನೇ ಜಯಂತಿ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ನನ್ನ ಮನಸ್ಸಿನಲ್ಲಿ ತುಂಬಾ ಆಳವಾಗಿ ಬೇರೂರಿದ ಒಂದು ಸಂದರ್ಭ ಎಂದರೆ ರಾಜೇಂದ್ರ ಶ್ರೀಗಳು ತಮ್ಮ ಚಿನ್ನದ ಕರಡಿಗೆಯನ್ನು ಮಾರಿ ವಸತಿ ನಿಲಯದ ವಿದ್ಯಾರ್ಥಿಗಳಿಗೆ ಅನ್ನದಾಸೋಹ ಮಾಡಿದ್ದು. ಇದಕ್ಕಿಂತ ಹೃದಯವೈಶಾಲ್ಯತೆ ಬೇಕೆ ಎಂದರು.

ಕೋವಿಡ್ ಸಂದರ್ಭದಲ್ಲಿ ಕೆಲವು ಆಸ್ಪತ್ರೆ–ಸಂಸ್ಥೆಗಳು ತಮ್ಮ ಉದ್ಯೋಗಿಗಳಿಗೆ ಸಂಬಳ ನೀಡದ ಪರಿಸ್ಥಿತಿಯಲ್ಲಿದ್ದಾಗ ಜೆಎಸ್‌ಎಸ್ ಸಂಸ್ಥೆ, ತನ್ನ ಎಲ್ಲಾ ಉದ್ಯೋಗಿಗಳಿಗೂ ಪ್ರತಿ ತಿಂಗಳು ವೇತನ ನೀಡಿ, ಆಧಾರವಾಗಿ ನಿಂತದ್ದು ಶ್ಲಾಘನೀಯ. ಜೆಎಸ್‌ಎಸ್ ಸಂಸ್ಥೆಯು ಸುಮಾರು 16 ಸಾವಿರ ಜನರಿಗೆ ಉದ್ಯೋಗ ನೀಡಿ ಅವರ ಕುಟುಂಬ ವರ್ಗದವರಿಗೆ ಸಹಕಾರಿಯಾಗಿದೆ ಎಂದು ಮೆಚ್ಚುಗೆ ಮಾತುಗಳನ್ನಾಡಿದರು.

ವೀರಶೈವ ಲಿಂಗಾಯತ ಮಹಾವೇದಿಕೆ ರಾಜ್ಯಾಧ್ಯಕ್ಷ ಪ್ರಶಾಂತ್ ಕಲ್ಲೂರ್ ಮಾತನಾಡಿ, ಶಿಕ್ಷಣದ ಬಗ್ಗೆ ರಾಜೇಂದ್ರ ಶ್ರೀಗಳಿಗೆ ಇದ್ದ ದೂರದೃಷ್ಟಿ ಬಹಳ ವಿಶಾಲವಾದುದು. ಶ್ರೀಗಳ ಸಾಧನೆ, ಆದರ್ಶಗಳನ್ನು ಮುಂದಿನ ಪೀಳಿಗೆಗೆ ತಿಳಿಸಬೇಕು. ಮಹನೀಯರ ಚರಿತ್ರೆಯನ್ನು ಓದಿ ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಹಾಗೆಯೇ ಸಮಾಜಕ್ಕೆ ನಮ್ಮಿಂದಾಗುವ ಸೇವೆಯನ್ನು ಸಲ್ಲಿಸಬೇಕು ಎಂದು ತಿಳಿಸಿದರು.

ಬಳಿಕ ಜಯಂತಿ ಅಂಗವಾಗಿ ವಿಶೇಷ ಚೇತನರಿಗೆ ಆಸರೆ ಗ್ರೂಪ್ ವತಿಯಿಂದ ಕೃತಕಾಂಗಗಳನ್ನು ವಿತರಿಸಲಾಯಿತು. ಜೆಎಸ್‌ಎಸ್ ಮಹಾವಿದ್ಯಾಪೀಠದ ತೋಟಗಾರಿಕೆ ವಿಭಾಗದ ನಿರ್ದೇಶಕ ಶಿವಶಂಕರಪ್ಪ ಜೆಎಸ್‌ಎಸ್ ಆಸ್ಪತ್ರೆ ನಿರ್ದೇಶಕ ಡಾ.ಸಿ.ಪಿ. ಮಧು, ಮೈಸೂರು ವಿವಿ ಗಣಕವಿಜ್ಞಾನ ವಿಭಾಗದ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು, ಆಸರೆ ಗ್ರೂಪ್‌ನ ನಿತಿನ್ ಮತ್ತಿತರರಿದ್ದರು.

ಸಮೀಕ್ಷೆ ವೇಳೆ 'ಬಲಿಜ ಎ–0120' ಮಾತ್ರವೇ ದಾಖಲಿಸುವಂತೆ ಸೂಚನೆ

ಮೈಸೂರು, ಸೆ.27(ಎಂಕೆ)– ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಸಂದರ್ಭದಲ್ಲಿ ಬಲಿಜ, ಬಣಜಿಗ, ಬಲಜಿಗ, ದಾಸಬಣಜಿಗ ಸಮುದಾಯದವರು ಜಾತಿ ಕಾಲಂನಲ್ಲಿ 'ಬಲಿಜ ಎ–0120' ಎಂದೇ ನಮೂದಿಸಬೇಕೆಂದು ಶ್ರೀ ಯೋಗಿ ನಾರೇಯಣ ಬಣಜಿಗ/ಬಲಿಜ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಆರ್. ಗೋಪಾಲಕೃಷ್ಣ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಶನಿವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಬಲಿಜ ಸಮುದಾಯದವರು ಸುಮಾರು 11 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ದ್ದಾರೆ. 1994 ರಲ್ಲಿ ನಿಖರ ಅಂಕಿ–ಅಂಶ ಇಲ್ಲದ ಕಾರಣ 2ಎ ಮೀಸಲಾತಿಯಿಂದ ವಂಚಿತವಾಗಿದೆ. ಆದ್ದರಿಂದ ಮುಂದಾದರೂ ಸರ್ಕಾರದ ಸೌಲಭ್ಯ ಪಡೆಯುವ ನಿಟ್ಟಿನಲ್ಲಿ ಸಮೀಕ್ಷಾದಾರರಿಗೆ ನಿಖರ ಮಾಹಿತಿ ನೀಡುವಂತೆ ಕೋರಿದರು.

ಬಲಿಜ ಸಮುದಾಯದ ಶೇ.95 ರಷ್ಟು ಜನರು ಇಂದಿಗೂ ಬಡತನದಲ್ಲಿದ್ದು, ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡಿದ್ದಾರೆ. ಇವರೆಲ್ಲರೂ ಸಮೀಕ್ಷೆಯಲ್ಲಿ ಪಾಲ್ಗೊಂಡು, ಜಾತಿ ಕಾಲಂನಲ್ಲಿ ಬಲಿಜ, ಧರ್ಮದ ಕಾಲಂನಲ್ಲಿ ಹಿಂದೂ ಎಂದು ನಮೂದಿಸಬೇಕು ಎಂದು ತಿಳಿಸಿದರು.

ಶ್ರೀ ಯೋಗಿ ನಾರೇಯಣ ಬಣಜಿಗ/ಬಲಿಜ ಸಂಘದ ಅಧ್ಯಕ್ಷ ಎಂ. ನಾರಾಯಣ, ಉಪಾಧ್ಯಕ್ಷ ಜಿ.ರಮೇಶ್, ಸಹ ಕಾರ್ಯದರ್ಶಿ ಚೆಲುವರಾಜು, ಖಜಾಂಚಿ ಕೆ.ಚಂದ್ರಶೇಖರ್, ನಿರ್ದೇಶಕರಾದ ಬಿ.ಕೆ.ಸುರೇಶ್, ಹೆಚ್.ವಿ.ನಾಗರಾಜು, ಗೋವಿಂದರಾಜು ಉಪಸ್ಥಿತರಿದ್ದರು.

ಗಾಂಧಿ ಜಯಂತಿ ಪ್ರಯುಕ್ತ ಮಾಂಸ ಮಾರಾಟ ನಿಷೇಧ

ಮೈಸೂರು,ಸೆ.27– ಅ.2 ರಂದು ಗಾಂಧಿ ಜಯಂತಿಯ ಪ್ರಯುಕ್ತ ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ಮುಚ್ಚಲಾಗುತ್ತದೆ ಹಾಗೂ ಈ ದಿನ (ಕುರಿ/ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು) ವ್ಯಾಪಾರವನ್ನು ಮೈಸೂರು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿರುತ್ತದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಆರೋಗ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿಂದಿ ಹೇರಿಕೆ ವಿರುದ್ಧ ಹೋರಾಟದಲ್ಲಿ ಬಂಧಿತರ ಬಿಡುಗಡೆಗೆ ಆಗ್ರಹಿಸಿ ಕರವೇ ಕಾರ್ಯಕರ್ತರ ಪ್ರತಿಭಟನೆ



ಮೈಸೂರು ಗಾಂಧಿ ವೃತ್ತದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಸೆ.27(ಎಂಕೆ)– ಹಿಂದಿ ಹೇರಿಕೆ ಕಾರ್ಯಕ್ರಮ ಆಯೋಜನೆ ವಿರುದ್ಧ ಪ್ರತಿಭಟನೆ ನಡೆಸಿ, ಬಂಧಿತರಾಗಿರುವ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರನ್ನು ಕೂಡಲೇ ಬಿಡುಗಡೆ ಮಾಡಿ, ಅವರ ಮೇಲಿನ ಮೊಕದ್ದಮೆ ಹಿಂಪಡೆಯಬೇಕು ಎಂದು ಒತ್ತಾಯಿಸಿ ಮೈಸೂರಿನಲ್ಲಿ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿವೃತ್ತದಲ್ಲಿ ಜಮಾವಣೆಗೊಂಡ ಕರವೇ ಕಾರ್ಯಕರ್ತರು, ಬೆಂಗಳೂರಿನ ತಾಜ್‌ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಸೆ.25 ರಂದು ರಾಜ್ ಭಾಷಾ ಸಂಸತ್ ಸಮಿತಿ ಆಯೋಜಿಸಿದ್ದ ಹಿಂದಿ ಹೇರಿಕೆ ಕಾರ್ಯಕ್ರಮವನ್ನು ರದ್ದು ಮಾಡುವಂತೆ ಸ್ಥಳದಲ್ಲಿ ಪ್ರತಿಭಟನೆ ನಡೆಸಿದ್ದ 41 ಮಂದಿ ಕರವೇ ಕಾರ್ಯಕರ್ತರನ್ನು ಬಂಧಿಸಿರುವುದು ಅತ್ಯಂತ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಂಧಿತರಲ್ಲಿ ಮಹಿಳೆಯರು ಇದ್ದು, ಕೂಡಲೇ ಎಲ್ಲರನ್ನು ಬಿಡುಗಡೆ ಮಾಡಬೇಕು. ಹಾಗೆಯೇ ದಾಖಲಿಸಿರುವ ಮೊಕದ್ದಮೆ ಹಿಂಪಡೆಯಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಪ್ರವೀಣ್ ಕುಮಾರ್ ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಕರವೇ ಜಿಲ್ಲಾ ಪದಾಧಿಕಾರಿಗಳಾದ ಲೋಕೇಶ್ ಕುಮಾರ್, ಸುಜಾತ, ಸರೋಜ, ಹೇಮಂತ್‌ಗೌಡ, ಸುನಂದ್, ಗಣೇಶ್, ರಫೀಕ್, ಪರಮೇಶ್ ಮತ್ತಿತರರಿದ್ದರು.

ಅ.2ಕ್ಕೆ ಸುತ್ತೂರು ಮಠದಲ್ಲಿ ವಿಜಯದಶಮಿ ವಿಶೇಷ ಪೂಜೆ

ಮೈಸೂರು, ಸೆ.27– ಚಾಮುಂಡಿಬೆಟ್ಟ ಪಾದದ ಶ್ರೀ ಸುತ್ತೂರು ಮಠದಲ್ಲಿ ಅ.2ರಂದು ವಿಜಯದಶಮಿ ವಿಶೇಷ ಪೂಜೆ ಜರುಗಲಿದೆ. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಬೆಟ್ಟದ ಪಾದದ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಬನ್ನಿಪೂಜೆ ನೆರವೇರಲಿದ್ದು, ಅಂದು ಬೆಳಗ್ಗೆ 9ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂಜೆ 5ಕ್ಕೆ ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಸೇರಿದಂತೆ ಅನೇಕ ಸಚಿವರು, ಜನಪ್ರತಿನಿಧಿಗಳು, ಸಾಹಿತಿಗಳು, ಕಲಾವಿದರು, ಅಧಿಕಾರಿಗಳು, ವಿವಿಧ ಕ್ಷೇತ್ರದ ಗಣ್ಯರು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಹಾಗೂ ಭಕ್ತರೂ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡು ಶ್ರೀಗಳಿಂದ ಬನ್ನಿ ಪತ್ರೆ ಆಶೀರ್ವಾದ ಹಾಗೂ ಪ್ರಸಾದ ಸ್ವೀಕರಿಸುವಂತೆ ತಿಳಿಸಲಾಗಿದೆ.

ಪರಕಾಲ ಮಠಕ್ಕೆ ಶ್ರೀ ಪದ್ಮನಾಭಸ್ವಾಮಿ ದೇವಸ್ಥಾನದ ಪ್ರಧಾನ ತಂತ್ರಿ ಸತೀಶನ್ ನಂಬೂದಿರಿಪಾದ್ ಭೇಟಿ

ಶ್ರೀಮದ್ ಪರಕಾಲ ಸ್ವಾಮಿ, ಶ್ರೀ ಲಕ್ಷ್ಮಿ ಹಯಗ್ರೀವರ ಆಶೀರ್ವಾದ ಪಡೆದ ಶ್ರೀಗಳು

ಮೈಸೂರು,ಸೆ.27(ಜಿಎ)– ತಿರುವನಂತಪುರಂ (ಮಲಯನಾಡು ದಿವ್ಯದೇಶಂ) ಶ್ರೀ ಪದ್ಮನಾಭಸ್ವಾಮಿ ದೇವಸ್ಥಾನದ ಪ್ರಧಾನ ತಂತ್ರಿ ಬ್ರಹ್ಮಶ್ರೀ ತರಣನಲೂರು ಸತೀಶನ್ ನಂಬೂದಿರಿಪಾದ್ ಅವರು ಮೈಸೂರಿನ ಯದುವಂಶದ ರಾಜಗುರುಗಳಾದ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿ ಮಠಕ್ಕೆ ಭೇಟಿ ನೀಡಿ ಶ್ರೀಮದ್ ಪರಕಾಲಸ್ವಾಮಿ ಮತ್ತು ಶ್ರೀ ಲಕ್ಷ್ಮಿ ಹಯಗ್ರೀವರ ಆಶೀರ್ವಾದ ಪಡೆದರು.

ನಂಬೂದಿರಿಪಾದ್ ಅವರು ಪರಶುರಾಮನಿಂದ ಕೇರಳಕ್ಕೆ ಕರೆಸಲ್ಪಟ್ಟ ಪೂಜ್ಯ ಕುಟುಂಬದಿಂದ ಬಂದವರಾಗಿದ್ದು, ಭಗವಂತನೇ ಸ್ವತಃ ಹಸ್ತಾಂತರಿಸಿದ ಪವಿತ್ರ ಗ್ರಂಥವಾದ ಪರಶುರಾಮ ಸಂಹಿತವನ್ನು ಬಳಸಿಕೊಂಡು ಪೂಜೆ ಸಲ್ಲಿಸಿದರು.

ಈ ವೇಳೆ ಕಲಹಳ್ಳಿ ಶ್ರೀ ಭೂವರಾಹ ಸ್ವಾಮಿ ದೇವಸ್ಥಾನಕ್ಕೂ ಭೇಟಿ ನೀಡಿ, ಅಲ್ಲಿ ಅವರು ಮುಂಬರುವ ದೇವಾಲಯದ ವೈಭವ ಹಾಗೂ ಅಭಿವೃದ್ಧಿಯ ಬಗ್ಗೆ ಮತ್ತು ಅದರ ನಿರ್ಮಾಣದಲ್ಲಿ ಬಳಸಲಾಗುತ್ತಿರುವ ಮುಂದುವರಿದ ತಂತ್ರಜ್ಞಾನಕ್ಕೆ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪರಕಾಲ ಮಠದ ಆಡಳಿತಾಧಿಕಾರಿ ಶ್ರೀನಿವಾಸ್ ರಾಘವನ್, ಆಕಾಶ್, ಮುಕುಂದ, ಟಿ.ಎಸ್ ಅರುಣ್, ರಕ್ಷಿತ್, ಶ್ರೀವತ್ಸ ಮತ್ತಿತರರು ಉಪಸ್ಥಿತರಿದ್ದರು.



ಶ್ರೀ ಪದ್ಮನಾಭಸ್ವಾಮಿ ದೇವಸ್ಥಾನದ ಪ್ರಧಾನ ತಂತ್ರಿ ಬ್ರಹ್ಮಶ್ರೀ ತರಣನಲೂರು ಸತೀಶನ್ ನಂಬೂದಿರಿಪಾದ್ ಅವರು ಮೈಸೂರಿನ ಯದುವಂಶದ ರಾಜಗುರುಗಳಾದ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠಕ್ಕೆ ಭೇಟಿ ನೀಡಿದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ಕೆಲಸದವಳ ಹತ್ತಿರ ಏನಾದ್ರು ತರ್ಲೆ ಮಾಡಿದ್ರಾ...?
ಗಂಡ : ಯಾಕೆ ಏನಾಯ್ತು...?
ಹೆಂಡತಿ : ಇಷ್ಟು ದಿನ 'ಅಮ್ಮ' ಎಂದು ಕರೆಯುತ್ತಿದ್ದವಳು... ಈಗ 'ಅಕ್ಕ' ಎಂದು ಕರೆಯುತ್ತಿದ್ದಾಳೆ...!!

ಮೈಸೂರು ಮಿತ್ರ
ಭಾನುವಾರ, 28 ಸೆಪ್ಟೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಸಾಕು ಎಂದವ ಸಾಹುಕಾರ. ಬೇಕು ಎಂದವ ಬಡವ. ತೃಪ್ತಿಯೇ ನಿಜವಾದ ಶ್ರೀಮಂತಿಕೆ. ಇದ್ದುದರಲ್ಲಿ ತೃಪ್ತಿ ಹೊಂದಿ ಖುಷಿ ಕಾಣಬೇಕು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹತ್ತು ಕಟ್ಟೋ ಕಡೆ ಒಂದು ಮುತ್ತು ಕಟ್ಟು

ನಿಮ್ಮ ಪತ್ರಗಳು

ಸರಸ್ವತಿ ಸುಪುತ್ರರಾಗಿದ್ದ ಡಾ.ಭೈರಪ್ಪ

ಮಾನ್ಯರೆ,



ನಾಡಿನ ಖ್ಯಾತ ಕಾದಂಬರಿಕಾರ, ಶ್ರೇಷ್ಠ ಲೇಖಕ, ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಲೇಖಕ, ಪದ್ಮಭೂಷಣ ಡಾ.ಎಸ್ ಎಲ್ ಭೈರಪ್ಪನವರ ಹಠಾತ್ ನಿಧನ ದೇಶದ ಸಾಂಸ್ಕೃತಿಕ ವಲಯಕ್ಕೆ ತುಂಬಲಾಗದ ನಷ್ಟವಾಗಿದೆ. 94ರ ಹರೆಯದ ಡಾ.ಭೈರಪ್ಪನವರು ನಾಡು ಕಂಡ ಓರ್ವ ಪರಮ ಶ್ರೇಷ್ಠ ಲೇಖಕರಾಗಿದ್ದರು. ತಮ್ಮ ವೈವಿಧ್ಯಮಯ ಕಾದಂಬರಿಗಳ ಮೂಲಕ, ದೇಶ ವಿದೇಶಗಳಲ್ಲಿ ತಮ್ಮದೇ ಆದ ಅಭಿಮಾನಿಗಳನ್ನು ಹೊಂದಿದ್ದ ಡಾ..ಭೈರಪ್ಪನವರನ್ನು 'ವಿಶ್ವಕವಿ' ಎಂದು ಖಂಡಿತಾ ಕರೆಯಬಹುದು. ತಮ್ಮ ಕಾದಂಬರಿಗಳ ಮೂಲಕ ವೈಚಾರಿಕತೆಯ ಕಿಚ್ಚನ್ನು ಹೊತ್ತಿಸಿದ್ದ ಡಾ.ಭೈರಪ್ಪನವರ ಕಾದಂಬರಿಗಳು ತಮ್ಮದೇ ಆದ ಓದುಗ ವೃಂದವನ್ನು ಸೃಷ್ಟಿಸಿಕೊಂಡಿವೆ.

ಅವರ 'ಪರ್ವ' ಕಾದಂಬರಿಯನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಚೀನಿ ಮತ್ತು ರಷ್ಯನ್ ಭಾಷೆಗಳಿಗೆ ಅನುವಾದಗೊಳಿಸಿರುವುದು ಸಮಸ್ತ ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ. ಮಹಾಭಾರತದ ಕಥೆಯನ್ನು ವೈಚಾರಿಕ ದೃಷ್ಟಿಕೋನದಿಂದ ಹೇಳಲಾಗಿರುವ ಪರ್ವ ಕಾದಂಬರಿ ಪ್ರಪ್ರಥಮವಾಗಿ 1976ರಲ್ಲಿ ಪ್ರಕಟವಾಗಿದ್ದು, ಇದುವರೆಗೂ 23 ಬಾರಿ ಮರು ಮುದ್ರಣಗೊಂಡು ದಾಖಲೆ ಸ್ಥಾಪಿಸಿದೆ. ಅವರ ಹಲವಾರು ಕೃತಿಗಳು ದೇಶದ ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಂಡಿವೆ. ತಬ್ಬಲಿಯು ನೀನಾದೆ ಮಗನೇ, ನಾಯಿ ನೆರಳು, ಪರ್ವ, ದಾಟು, ನೆಲೆ, ಸಾರ್ಥ, ಧರ್ಮಶ್ರೀ, ಮತದಾನ, ಆವರಣ, ತಂತು, ಮಂದ್ರ ಮುಂತಾದ ವಿಭಿನ್ನ ಕಥಾವಸ್ತು ಹಾಗೂ ಶೈಲಿಯ ಕೃತಿಗಳನ್ನು ರಚಿಸಿರುವ ಡಾ.ಎಸ್.ಎಲ್.ಭೈರಪ್ಪ ಈ ದೇಶ ಕಂಡ ಓರ್ವ ಸತ್ವಶಾಲಿ ಬರಹಗಾರರಾಗಿದ್ದರು. 1958ರಲ್ಲಿ 'ಭೀಮಕಾಯ' ಎಂಬ ಕೃತಿಯ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಪ್ರವೇಶಿಸಿದ ಡಾ.ಎಸ್ ಎಲ್.ಭೈರಪ್ಪ ಮುಂದೆ ಹಲವಾರು ಅಮೂಲ್ಯ ಕೃತಿಗಳನ್ನು ನೀಡಿದ್ದಾರೆ. ಅವರ ವಂಶವೃಕ್ಷ, ಮತದಾನ, ತಬ್ಬಲಿಯು ನೀನಾದೆ ಮಗನೇ ಹಾಗೂ ನಾಯಿ ನೆರಳು ಕನ್ನಡ ಚಲನಚಿತ್ರಗಳಾಗಿ ನಿರ್ಮಾಣಗೊಂಡು ಹಲವಾರು ಪ್ರಶಸ್ತಿಗಳನ್ನು ಗಳಿಸಿವೆ. ತಮ್ಮ ಏಳು ದಶಕಗಳಿಗಿಂತ ಅಧಿಕ ಸಾಹಿತ್ಯಾರಾಧನೆಯಲ್ಲಿ ಹತ್ತು ಹಲವು ಮಜಲುಗಳನ್ನು ದಾಟಿ ಕನ್ನಡಾಂಬೆಯ ವರಪುತ್ರರಾಗಿದ್ದ ಡಾ.ಎಸ್.ಎಲ್. ಭೈರಪ್ಪ ನಿಜವಾದ ಅರ್ಥದಲ್ಲಿ ಸರಸ್ವತಿಯ ಸುಪುತ್ರರೇ ಆಗಿದ್ದರು. ಅವರ ಆತ್ಮಕ್ಕೆ ಶಾಂತಿ ಕೋರೋಣ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಈ ಬಾರಿಯೂ ದುಬಾರಿಯಾದ ದಸರಾ ಮನರಂಜನಾ ಕಾರ್ಯಕ್ರಮ

ಮಾನ್ಯರೆ,



ನಾಡಹಬ್ಬ ಮೈಸೂರು ದಸರಾ ಮಹೋತ್ಸವವು ಸೆಪ್ಟೆಂಬರ್ 22ರಿಂದ ಆರಂಭವಾಗಿದ್ದು, ಅಕ್ಟೋಬರ್ 2 ರವರೆಗೆ ಅದ್ಧೂರಿಯಾಗಿ ಜರುಗಲಿದೆ. ಸರ್ಕಾರದಿಂದ ಸುಮಾರು 60 ಕೋಟಿ ಅನುದಾನವನ್ನು ದಸರಾ ಮಹೋತ್ಸವದ ಖರ್ಚಿಗಾಗಿ ಬಿಡುಗಡೆ ಮಾಡಿದ್ದರೂ ಜನಸಾಮಾನ್ಯರಿಗೆ ದಸರಾ ವೈಭವವನ್ನು ಕಣ್ತುಂಬಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕಾರಣ ಅನೇಕ ಜನಾಕರ್ಷಣೆ ಮತ್ತು ಮನರಂಜನಾ ಕಾರ್ಯಕ್ರಮಗಳ ಪ್ರವೇಶ ಶುಲ್ಕವನ್ನು ದುಬಾರಿ ಮಾಡಿದ್ದಾರೆ. ಈ ಬಾರಿಯೂ ಯುವ ದಸರಾ ವೀಕ್ಷಣೆಗೆ ದರ ನಿಗದಿ ಮಾಡಿದ್ದು ಟಿಕೆಟ್ ವ್ಯವಸ್ಥೆಯನ್ನು ಮಾಡಲಾಗಿದೆ. ಒಂದು ದಿನ ಯುವ ದಸರಾ ವೀಕ್ಷಣೆಗೆ ಗ್ಯಾಲರಿಯಲ್ಲಿ ಕುಳಿತುಕೊಳ್ಳುವ ಆಧಾರದಲ್ಲಿ ಒಟ್ಟಾರೆ 20 ಸಾವಿರ ಆಸನಗಳ ವ್ಯವಸ್ಥೆ ಮಾಡಿದ್ದು, ಈ ಪೈಕಿ 5 ಸಾವಿರ ಟಿಕೆಟ್ ಹಾಗೂ 2,500 ರೂ. ಟಿಕೆಟ್‌ಗಳಿಗೆ ತಲಾ ರೂ 500 ಆಸನಗಳ ಗ್ಯಾಲರಿಗಳ ವ್ಯವಸ್ಥೆಗೊಳಿಸಲಾಗಿದೆ. ಇದಲ್ಲದೆ ವಿದ್ಯುತ್ ದೀಪಾಲಂಕಾರವನ್ನು ವೀಕ್ಷಿಸಲು ಅಂಬಾರಿ ಬಸ್ ದರ ರೂ 500, ಗೋಲ್ಡನ್ ಪಾಸ್ ರೂ 6,500, ಜಂಬೂಸವಾರಿ ವೀಕ್ಷಣೆ 3,500, ಪಂಜಿನ ಕವಾಯತು ವೀಕ್ಷಣೆ ರೂ. 1500, ಡ್ರೋಣ್ ಶೋ 1500, ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ರೂ 50 ನಿಗದಿ ಮಾಡಲಾಗಿದೆ. ಈ ಬಾರಿಯೂ ದಸರಾ ವೀಕ್ಷಣೆಯು ತುಂಬಾ ದುಬಾರಿಯಾಗಿದೆ ಎಂದು ಜನ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ರಾಜಕೀಯ ಮುಖಂಡರ ಹಿಂಬಾಲಕರದೇ ಅಬ್ಬರ ಜೋರಾಗಿದೆ. ಅವರಿಗೆ ಮಾತ್ರ ಉಚಿತ ಪಾಸ್‌ಗಳು ದೊರೆಯಲಿವೆ. ಸಾಮಾನ್ಯ ಜನರಿಗೆ ದಸರಾ ವೀಕ್ಷಣೆ ಅಸಾಧ್ಯವಾಗಿದೆ. ನಾಡಿನ ವಿವಿಧ ಮೂಲಗಳಿಂದ ಆಗಮಿಸುವ ದಸರಾ ವೀಕ್ಷಣೆಯ ಪ್ರವಾಸಿಗರ ಜೇಬಿಗೆ ಕತ್ತರಿ ಬೀಳುವುದು ಗ್ಯಾರಂಟಿಯಾಗಿದೆ. ಈಗಾಗಲೇ ಟಿಕೆಟ್ ದರದ ಹೆಚ್ಚಳದ ವಿರುದ್ಧ ಸಾರ್ವಜನಿಕರ ವಲಯದಲ್ಲಿ ತೀವ್ರ ಟೀಕೆಗಳು ವ್ಯಕ್ತವಾಗುತ್ತಿವೆ. ದಸರಾ ನಡೆಸುವುದು ದುಡ್ಡಿಗಾಗಿಯೇ ಎಂಬ ಮನೋಭಾವನೆ ಸಾರ್ವಜನಿಕರಲ್ಲಿ ಮನೆ ಮಾಡುತ್ತಿದೆ. ಆದ್ದರಿಂದ ಈ ಬಾರಿಯ ದಸರಾವು ದುಬಾರಿಯಾಗದೆ. ಜನಸಾಮಾನ್ಯರ ದಸರಾವಾಗಲಿ ಎಂಬುದೇ ಸಾರ್ವಜನಿಕರ ಒಕ್ಕೊರಲಿನ ಅಭಿಪ್ರಾಯವಾಗಿದೆ..

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ವೆರೈಟಿ: ನೀ ಯಾರವ, ಯಾರವ

ಮಾನ್ಯರೆ,

ಯಾವ ಜಾತಿ, ಯಾವ ಕುಲ ಎಂದು ನೋಡಬೇಡಿ ಎಂದರು ದಾಸರು. ಇವನಾರವ, ಇವನಾರವ, ಎನ್ನಬೇಡಿ. ಇವ ನಮ್ಮವ, ಇವ ನಮ್ಮವ, ಎನ್ನಿರಯ್ಯ ಎಂದರು ಶರಣರು.

ನೀ ನಮ್ಮವ, ನೀ ನಮ್ಮವ ಎನ್ನುತ್ತಿದ್ದಾರೆ ರಾಜಕಾರಣಿಗಳು, ಮಠಾಧೀಶರು. ನೀ ಯಾವ ಜಾತಿ? ನೀ ಯಾವ ಜಾತಿ? ಎನ್ನುತ್ತಿದ್ದಾರೆ ಸರ್ಕಾರಿ ಗಣತಿದಾರರು ಮನ, ಮನೆಗೆ ನುಗ್ಗಿ ಇನ್ನೂ ಜಾತಿ ಏಕೆ ಇದೆ? ಎನ್ನುವುದು ಯಕ್ಷ ಪ್ರಶ್ನೆ, ಹೇಗೆ?!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಕರುಣಾಳು ಬಾ ಬೆಳಕೇ...!?

ಅದೊಂದು ಬೃಹತ್ ಗೃಹ ಸಮುಚ್ಚಯ. ಸುಮಾರು ಐದು ನೂರು ಸುಸಜ್ಜಿತ, ಅತ್ಯಾಧುನಿಕ ಮನೆಗಳೇ ಅಲ್ಲಿ ಇದ್ದುದು. ಅಲ್ಲಿದ್ದವರೆಲ್ಲರೂ ಅನುಕೂಲವಂತರೇ. ಭಾರತದ ಅನೇಕ ಭಾಷೆಗಳನ್ನಾಡುವ ಮಂದಿ ಅಲ್ಲಿದ್ದರು. ಹಲವು ಕುಟುಂಬಗಳಲ್ಲಿ ವಯಸ್ಸಾದವರೂ ಇದ್ದರು, ನಿವೃತ್ತ ಜೀವನ ನಡೆಸುತ್ತಿದ್ದವರು, ಬಾಳ ಸಂಗಾತಿಯನ್ನು ಕಳೆದುಕೊಂಡವರು ಕೆಲವರು, ಮಕ್ಕಳ ಓದಿಗಾಗಿ ತಾತ್ಕಾಲಿಕವಾಗಿ ಬಂದು ನೆಲಸಿದವರು.. ಹೀಗೆ ಹತ್ತು ಹಲವು ರೀತಿಯ ಜನರು ಅಲ್ಲಿ ವಾಸ ಮಾಡುತ್ತಿದ್ದರು. ಏಳನೆಯ ಮಹಡಿಯಲ್ಲಿ ಒಂದು ಸಂಸಾರ. ಗಂಡ–ಹೆಂಡತಿ, ಈ ಇಬ್ಬರೂ ಕೆಲಸಕ್ಕೆ ಹೋಗುವವರು. ಹೆಂಡತಿಯ ತಂದೆ ಅವರ ಜೊತೆಯಲ್ಲಿಯೇ ಇದ್ದರು. ಆತನ ಮಡದಿ ತೀರಿಕೊಂಡ ಕೆಲವೇ ದಿನಗಳಲ್ಲಿ ಆತನ ಒಂಟಿತನ ನೋಡ ಲಾರದೆ, ಮಗಳು ಮತ್ತು ಅಳಿಯ ಅವರನ್ನು ತಮ್ಮ ಜೊತೆಯಲ್ಲೇ ಇರಿಸಿಕೊಂಡಿದ್ದರು. ಅವರಿಬ್ಬರೂ ಕೆಲಸಕ್ಕೆ ಹೋದ ನಂತರ ಇವರು ಅಲ್ಲೇ ಪರಿಚಯವಾದ ಕೆಲವು ತಮ್ಮ ವಯಸ್ಸಿನ ಮಿತ್ರರೊಂದಿಗೆ ಸ್ವಲ್ಪ ಹೊತ್ತು ನಡಿಗೆ, ಮಾತುಕತೆ, ಲಘು ವ್ಯಾಯಾಮ ಮಾಡಿಕೊಂಡು ತಾವು ಒಂಟಿ ಅಲ್ಲ ಎಂಬ ನಂಬಿಕೆಯಿಂದ ಇರುತ್ತಿದ್ದರು. ಸ್ವಲ್ಪ ಧ್ಯಾನ, ಓದು, ವಿಶ್ರಾಂತಿ ಹೀಗೆ ಮಗಳು ಬರುವವರೆಗೆ ಸಮಯ ಕಳೆಯುವುದು ಅಂತಹ ಸಮಸ್ಯೆ ಎಂದು ಅನಿಸುತ್ತಿರಲಿಲ್ಲ. ಮಗಳು ಮಾಡಿಟ್ಟು ಹೋದ ಅಡುಗೆಯನ್ನು ತಾವೇ ಬಡಿಸಿಕೊಂಡು ಊಟ ಮಾಡುವರು. ಮಧ್ಯಾಹ್ನ ಸ್ವಲ್ಪ ಹೊತ್ತು ನಿದ್ದೆ. ಸಂಜೆ ಮಗಳು ಬಂದ ನಂತರ ಅವಳೊಡನೆ ಮಾತುಕತೆ ಹೀಗೆ ಒಟ್ಟಾರೆ ಅವರು ಸಂತೋಷದಿಂದ ಇದ್ದರು.

ಕ್ರಮೇಣ ತಮ್ಮ ಬದುಕಿಗೆ ಒಗ್ಗಿಕೊಂಡಿದ್ದರು. ಎಂದಿನಂತೆ ಅಂದೂ ಮಗಳು ಹೋದ ನಂತರ ಗೆಳೆಯರೊಡನೆ ನಿತ್ಯದ ನಡಿಗೆ, ವ್ಯಾಯಾಮವನ್ನು ಮುಗಿಸಿ ಮನೆಗೆ ಬಂದರು. ಸ್ನಾನ ಮುಗಿಸಿ ಹೊರ ಬರುತ್ತಿದ್ದಂತೆ ನೆಲ ಸ್ವಲ್ಪ ಒದ್ದೆಯಾಗಿದ್ದುದು ಕಾಣಿಸದೆ, ಕಾಲು ಇಟ್ಟದ್ದೇ ತಡ, ಜರ್ರನೆ ಜಾರಿಬಿದ್ದರು. ಒಂದು ಕ್ಷಣ ತಮಗೆ ಏನಾಯಿತೆಂಬುದೇ ಅವರಿಗೆ ತಿಳಿಯಲಾರದಂತಾಯಿತು. ಸೊಂಟವನ್ನು ಅಲುಗಾಡಿಸಲೂ ಆಗಲಿಲ್ಲ. ಗಾಬರಿಗೊಂಡ ಅವರು ಅದೆಷ್ಟೋ ಹೊತ್ತು ಅದೇ ಸ್ಥಿತಿಯಲ್ಲಿಯೇ ಇದ್ದರು. ಮೆಲ್ಲಗೆ ಎದ್ದು ಹೋಗೋಣ ಎಂದು ಅಂದುಕೊಂಡರೆ, ಊಹ್ಞೂ, ಅಲುಗಾಡಲೂ ಆಗುತ್ತಿಲ್ಲ. ಫೋನನ್ನಾದರೂ ಮಾಡೋಣ ಎಂದರೆ, ಅಗೋ ಅಲ್ಲಿ ಕಾಣುತ್ತಿರುವ ಫೋನನ್ನು ತಲುಪುವುದಾದರೂ ಹೇಗೆ?



> ಜನಸೇವೆಯೇ ಜನಾರ್ಧನನ ಸೇವೆ ಅಲ್ಲವೇ, ಮಾನವೀಯತೆಯ ಮಹತ್ವದ ಪಾಠವನ್ನು ನಮ್ಮ ಮಕ್ಕಳಲ್ಲಿ ಬೆಳೆಸಲೂ ಸಹ ಇದು ಸಹಕಾರಿ ಎಂಬುದನ್ನು ಬೇರೆ ಹೇಳಬೇಕಿಲ್ಲ.

ಎಂಬ ದೊಡ್ಡ ಪ್ರಶ್ನೆ. ಒಂದು ಕಡೆ ತೀವ್ರವಾಗುತ್ತಿರುವ ನೋವು. ಎಷ್ಟೇ ಕಿರುಚಿಕೊಂಡರೂ ಬಾಗಿಲು ಹಾಕಿಕೊಂಡ ಅಕ್ಕಪಕ್ಕದವರಿಗೆ ಕೇಳಿಸಿದರೆ ತಾನೆ!

ಎಷ್ಟೇ ತಡೆದುಕೊಂಡರೂ ಅವರ ಕಣ್ಣುಗಳಲ್ಲಿ ನೀರು ಹರಿಯಲಾರಂಭಿಸಿತು. ಇದೇನು ದೇವಾ ಒಂದೇ ಕ್ಷಣದಲ್ಲಿ ಇದು ಹೇಗಾಯಿತು. ನಾನು ಮತ್ತೆ ಸರಿಹೋಗುತ್ತೇನೋ ಇಲ್ಲವೋ? ಇವರಿಬ್ಬರೂ ಕೆಲಸಕ್ಕೆ ಹೋದಾಗ ನನ್ನ ಗತಿ ಏನು ಬಚ್ಚಲು ಮನೆಗೆ ಹೋಗಲೂ ಆಗದಿದ್ದರೆ ಏನು ಗತಿ ಹೀಗೆ ತರಹೇವಾರಿ ಆಲೋಚನೆಗಳ ಗೂಡಾಯಿತು ಮನ. ತಕ್ಷಣವೇ ತಮಗೆ ವೈದ್ಯಕೀಯ ನೆರವು ಅತ್ಯಗತ್ಯವಾಗಿ ಬೇಕಿದೆ ಎಂಬುದು ಅವರಿಗೆ ಗೊತ್ತಾಯಿತು. ಆದರೆ ಅವರು ತಮ್ಮ ನಿಸ್ಸಹಾಯಕ ಪರಿಸ್ಥಿತಿಗೆ ಏನೂ ಮಾಡಲಾರದವರಾಗಿದ್ದರು.

ಸಂಜೆ ಮನೆಗೆ ಬಂದ ಮಗಳು, ಅಳಿಯ ಇವರನ್ನು ನೋಡಿ ಹೌಹಾರಿ ಕೂಡಲೇ ಆಸ್ಪತ್ರೆಗೆ ಧಾವಿಸಿದರು. ಮುರಿದಿದ್ದ ಸೊಂಟದ ಮೂಳೆಯ ಆಪರೇಷನ್ ಕೂಡಲೇ ಮಾಡಲಾಯಿತು. ಇನ್ನು ಕೆಲವು ತಿಂಗಳು ಅವರಿಗೆ ಹಾಸಿಗೆಯೇ ಗತಿ. ಕೆಲವು ದಿನಗಳ ನಂತರ ಮನೆಗೆ ಬಂದ ಅವರಿಗೆ ಊಟ, ಔಷಧಿ ಕೊಡಲು ತಮ್ಮ ಪಕ್ಕದ ಮನೆಯವರನ್ನು ವಿನಂತಿಸಿಕೊಂಡು ಮಗಳು, ಅಳಿಯ ಮತ್ತೆ ತಮ್ಮ ಕೆಲಸಗಳಿಗೆ ಗಮನ ನೀಡಲಾರಂಭಿಸಿದರು. ತಮ್ಮ ಸುತ್ತಲ ನಾಕು ಗೋಡೆಗಳನ್ನು ದಿಟ್ಟಿಸುತ್ತಾ ತಮ್ಮ ಮನಸಿನ ಗೂಡೊಳಗೆ ಮತ್ತೆ ಅವಿತುಕೊಳ್ಳಲಾರಂಭಿಸಿದರು ಈತ. ಊಟ ಸೇರುತ್ತಿರಲಿಲ್ಲ, ನಿದ್ರೆ ಬರುತ್ತಿರಲಿಲ್ಲ. ದಿನೇ ದಿನೆ ಖಿನ್ನತೆಗೆ ಜಾರುತ್ತಿದ್ದರು.

ಒಂದು ದಿನ ಅಲ್ಲೇ ನಾಲ್ಕೈದು ಮನೆಗಳಿಂದಾಚೆ ವಾಸಿಸುತ್ತಿದ್ದ ಹಿರಿಯ ಹೆಂಗಸರೊಬ್ಬರು ಸಂಜೆ ಮಗಳು, ಅಳಿಯ ಇರುವ ಸಮಯದಲ್ಲಿ ಬಂದು ತಮ್ಮನ್ನು ಪರಿಚಯಿಸಿಕೊಂಡು, ತಾವೊಬ್ಬ ಸ್ವಯಂ ಸೇವಕಿ ಎಂದೂ, ಇಂತಹ ರೋಗಿಗಳಿಗೆ ತಮ್ಮ ಕೈಲಾದ ಸಹಾಯ ಮಾಡುವುದಾಗಿ ಹೇಳಿದಾಗ, ಅವರನ್ನು ನಂಬುವುದು ಹೇಗೆ ಎಂದು ಮಗಳು ಮತ್ತು ಅಳಿಯನಿಗೆ ಅನ್ನಿಸಿತು. ಆಗ ಆಕೆ ಉಪಶಮನ ಆರೈಕೆಯಲ್ಲಿ ತಾವು ತರಬೇತಿ ಹೊಂದಿರುವುದಾಗಿ ಹೇಳಿ, ಅವರಿಬ್ಬರೂ ಇಲ್ಲದ ವೇಳೆಯಲ್ಲಿ, ತಾವು ಆತನೊಡನೆ ಸ್ವಲ್ಪ ಸಮಯವನ್ನು ನಿತ್ಯವೂ ಕಳೆಯುವುದಾಗಿ ಪದೇ ಪದೆ ಹೇಳಿದ ಮೇಲೆ ಅನುಮಾನಿಸುತ್ತಲೇ ಮಗಳು ಒಪ್ಪಿಗೆ ನೀಡಿದಳು.

ತಮ್ಮ ಗೆಳೆಯರ ಮುಖ ದರ್ಶನವೂ ಇಲ್ಲದೆ ಒಂಟಿಯಾಗಿ ಆಲೋಚನೆ ಮಾಡುತ್ತಾ ಕಾಲ ನೂಕುತ್ತಿದ್ದ ಆತನಿಗೆ ಸದ್ಯ, ಮಾತನಾಡಲು ಯಾರಾದರೂ ಸಿಕ್ಕಿದರಲ್ಲ ಎಂಬ ದೊಡ್ಡ ಸಮಾಧಾನ, ಬಾಯಲ್ಲಿ ಹೇಳದಿದ್ದರೂ ಮುಖದಲ್ಲಿ ವ್ಯಕ್ತವಾಗುತ್ತಿತ್ತು. ಹೊತ್ತು ಹೊತ್ತಿಗೆ ಅವರಿಗೆ ಔಷಧಿ, ಆಹಾರ ನೀಡುವುದರ ಜೊತೆಗೆ ಅವರ ಬ್ಯಾಂಕು, ಪೋಸ್ಟ್ ಆಫೀಸಿನ ಕೆಲಸಗಳನ್ನೂ, ಆಕೆ ಉತ್ಸಾಹದಿಂದಲೇ ಮಾಡಿಕೊಡುತ್ತಿದ್ದರು. ಪ್ರಾರ್ಥನೆಯೂ ಜೊತೆಗೂಡಿತು.

ಏನಿದು ಉಪಶಮನ ಆರೈಕೆ, ಅದರಲ್ಲಿ ತರಬೇತಿ ಪಡೆಯುವುದೆಂದರೇನು? ಅದೂ ಈ ವಯಸ್ಸಿನಲ್ಲಿ ಬನ್ನಿ, ಅದರ ಬಗ್ಗೆ ಎಲ್ಲರೂ ಅಗತ್ಯವಾಗಿ ತಿಳಿದುಕೊಳ್ಳಬೇಕಿದೆ. ಇದನ್ನು ಇಂಗ್ಲೀಷಿನಲ್ಲಿ ಪ್ಯಾಲಿಯೇಟಿವ್ ಕೇರ್ ಎನ್ನುತ್ತಾರೆ. ರೋಗಿಗಳಿಗೆ ಭಾವನಾತ್ಮಕ, ಸಾಮಾಜಿಕ, ಆಧ್ಯಾತ್ಮಿಕ ನೆರವಿನೊಂದಿಗೆ ಅವರ ನೋವು ಮತ್ತಿತರ ಲಕ್ಷಣಗಳನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಒತ್ತಾಸೆಯನ್ನು ನೀಡುವುದಕ್ಕಾಗಿ ತರಬೇತಿ ಹೊಂದಿರುವ ಸ್ವಯಂಸೇವಕರೇ ಇವರು. ಇಂತಹ ಸ್ವಯಂಸೇವಕರು ಯಾವುದೇ ದುಡ್ಡಿನ ಆಸೆ ಇಲ್ಲದೆ ಉಚಿತವಾಗಿ ತಮ್ಮಿಂದಾಗುವ ನೆರವನ್ನು ನೀಡಿ, ರೋಗಿಗಳ ಮುಖದಲ್ಲಿ ಮಂದಸ್ಮಿತವನ್ನು ತರಲು ಯತ್ನಿಸುವ ನಿಸ್ವಾರ್ಥ ಜೀವಿಗಳು. ಪ್ರಥಮ ಚಿಕಿತ್ಸೆ, ರೋಗಿಯ ಹಾಸಿಗೆ ಸರಿಪಡಿಸುವುದು, ರಕ್ತದ ಒತ್ತಡ, ರಕ್ತದಲ್ಲಿ ಸಕ್ಕರೆಯ ಮಟ್ಟ ಅಳೆಯುವ ಇತ್ಯಾದಿ ಸರಳ ವೈದ್ಯಕೀಯ ನೆರವು ನೀಡಲು ಇವರಿಗೆ ತರಬೇತಿ ಸಿಕ್ಕಿರುತ್ತದೆ.

ಇಂತಹ ಸ್ವಯಂಸೇವಕರ ಅಗಾಧ ಅವಶ್ಯಕತೆಯನ್ನು ಮನಗಂಡ ಮೈಸೂರಿನ ಸ್ವಾಮಿ ವಿವೇಕಾನಂದ ಯೂಥ್ ಮೂವ್‌ಮೆಂಟ್ ಎಂಬ ಸಂಸ್ಥೆಯು ಆಯಾ ಊರಿನ ಮೆಡಿಕಲ್ ಕಾಲೇಜಿನ ಸಹಭಾಗಿತ್ವದೊಂದಿಗೆ ಕರ್ನಾಟಕದ ಹಾಸನ, ಮಡಿಕೇರಿ, ಧಾರವಾಡ, ಬೆಂಗಳೂರು, ಸರಗೂರು ಮುಂತಾದ ಕಡೆಗಳಲ್ಲಿ ಇದರ ಸಹಾಯಹಸ್ತವನ್ನು ಚಾಚಿದೆ. ಇದುವರೆಗೆ ಸುಮಾರು ಹತ್ತು ಸಾವಿರಕ್ಕೂ ಹೆಚ್ಚಿನ ಕುಟುಂಬಗಳು ಈ ಕಾರ್ಯಕ್ರಮದ ನೆರವನ್ನು ಪಡೆದಿವೆ. ಹಳ್ಳಿ ಮತ್ತು ಪಟ್ಟಣಗಳಲ್ಲಿ ರೋಗಿಗಳಿರುವ ಮನೆಯವರನ್ನೇ ತರಬೇತುಗೊಳಿಸುವ ಇವರ ಉದ್ದೇಶ ನಿಜಕ್ಕೂ ಅತ್ಯಂತ ಶ್ಲಾಘನೀಯ. ವಾಸಿಯಾಗದಂತಹ ಖಾಯಿಲೆಗಳಿಂದ ನರಳುತ್ತಿರುವವರಿಗಂತೂ ಇದು ಒಂದು ವರ ಎಂದರೆ ಅತಿಶಯೋಕ್ತಿ ಅಲ್ಲ.

ಕ್ಯಾನ್ಸರ್, ಲಕ್ವಾ, ಸೆರಿಬ್ರಲ್ ಪಾಲ್ಸಿ, ಹೃದಯ ಸಂಬಂಧಿತವೂ ಸೇರಿದಂತೆ ಗಂಭೀರ ಖಾಯಿಲೆಗಳನ್ನು ಅನುಭವಿಸುತ್ತಿದ್ದು, ಇದರ ಪ್ರಯೋಜನ ಪಡೆದ ಅದೆಷ್ಟು ರೋಗಿಗಳ ಮುಖದಲ್ಲಿ ನೆಮ್ಮದಿ ಮೂಡಿದೆ! ಇವಿಷ್ಟೇ ಅಲ್ಲದೆ ಅನೇಕ ಬಾರಿ ಸಾಮಾಜಿಕ ನೆರವನ್ನೂ ನೀಡುವ ಇವರ ಸದುದ್ದೇಶಕ್ಕೆ ಹೆಚ್ಚು ಹೆಚ್ಚು ಮಂದಿ ಕೈ ಜೋಡಿಸಿದಲ್ಲಿ ಅದು ಮತ್ತಷ್ಟು ಸಾರ್ಥಕ್ಯವನ್ನು ಪಡೆಯುವುದರಲ್ಲಿ ಸಂಶಯವಿಲ್ಲ.ನೋವಿನಲ್ಲಿರುವ ಇತರರಿಗೆ ನೆರವಾಗಲಿಚ್ಛಿಸುವ ಯಾರು ಬೇಕಾದರೂ ಈ ತರಬೇತಿಯನ್ನು ಪಡೆಯಬಹುದು. ಇದು ಸಮಾಜಕ್ಕೆ ನಮ್ಮಿಂದಾಗುವ ಕಿಂಚಿತ್ ಸೇವೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಜನಸೇವೆಯೇ ಜನಾರ್ಧನನ ಸೇವೆ ಅಲ್ಲವೇ, ಮಾನವೀಯತೆಯ ಮಹತ್ವದ ಪಾಠವನ್ನು ನಮ್ಮ ಮಕ್ಕಳಲ್ಲಿ ಬೆಳೆಸಲೂ ಸಹ ಇದು ಸಹಕಾರಿ ಎಂಬುದನ್ನು ಬೇರೆ ಹೇಳಬೇಕಿಲ್ಲ.

ಮಲ್ಪೆಯಲ್ಲಿ ಹಾಡಹಗಲೇ ರೌಡಿಶೀಟರ್ ಗುಂಡಿಕ್ಕಿ ಹತ್ಯೆ

ಉಡುಪಿ: ಜಿಲ್ಲೆಯ ಮಲ್ಪೆ ಪ್ರದೇಶದಲ್ಲಿ ಶನಿವಾರ ದುಷ್ಕರ್ಮಿಗಳು ರೌಡಿಶೀಟರ್‌ನನ್ನು ಗುಂಡಿಕ್ಕಿ ಕೊಂದಿದ್ದಾರೆ. ಮೃತ ವ್ಯಕ್ತಿಯನ್ನು ಮಣಿಪಾಲದ ಸೈಫುದ್ದೀನ್(38) ಎಂದು ಗುರುತಿಸಲಾಗಿದ್ದು, ಸಾರಿಗೆ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದು, ಕ್ರಿಮಿನಲ್ ಹಿನ್ನೆಲೆಯನ್ನು ಹೊಂದಿದ್ದ ಎಂದು ಪೊಲೀಸರು ಹೇಳಿದ್ದಾರೆ. ಕೊಲೆಗೆ ನಿಖರವಾದ ಕಾರಣ ಏನೆಂಬುದನ್ನು ತಿಳಿಯಲು ಪೊಲೀಸರು ತನಿಖೆ ಕೈಗೊಂಡಿದ್ದಾರೆ. ಪೊಲೀಸರ ಪ್ರಕಾರ, ಸೈಫುದ್ದೀನ್ ಕೆಲಸದ ಸ್ಥಳದ ಬಳಿಯೇ ಆತನ ಮೇಲೆ ದಾಳಿ ನಡೆಸಲಾಗಿದೆ. ಬೆಳಿಗ್ಗೆ 10.30 ರ ಸುಮಾರಿಗೆ ಅಪರಿಚಿತ ಹಲ್ಲೆಕೋರರ ಗುಂಪು ಗುಂಡು ಹಾರಿಸಿದೆ.

ಪ್ರತ್ಯಕ್ಷದರ್ಶಿಗಳು, ದಾಳಿಕೋರರು ಹಲವಾರು ಬಾರಿ ಗುಂಡು ಹಾರಿಸಿ, ದೈಹಿಕವಾಗಿಯೂ ಹಲ್ಲೆ ನಡೆಸಿದ್ದಾರೆ. ನಂತರ ಮೋಟಾರ್ ಸೈಕಲ್‌ನಲ್ಲಿ ಪರಾರಿಯಾಗಿದ್ದಾರೆ.

ಸ್ಥಳಕ್ಕೆ ಉಡುಪಿ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಭೇಟಿ ನೀಡಿ, ದುಷ್ಕರ್ಮಿಗಳನ್ನು ಪತ್ತೆ ಹಚ್ಚಲು ಹಲವು ತಂಡಗಳನ್ನು ರಚಿಸಲಾಗಿದೆ. ಸಿಸಿಟಿವಿ ದೃಶ್ಯಾವಳಿಗಳು ಮತ್ತು ಪ್ರತ್ಯಕ್ಷದರ್ಶಿಗಳ ಹೇಳಿಕೆಗಳನ್ನು ಪರಿಶೀಲಿಸುತ್ತಿದ್ದೇವೆ. ಹತ್ಯೆಯ ಹಿಂದಿನ ಉದ್ದೇಶವನ್ನು ತನಿಖೆ ಮಾಡಲಾಗುತ್ತಿದೆ ಎಂದು ಸುದ್ದಿಗಾರರಿಗೆ ಎಸ್ಪಿ ತಿಳಿಸಿದ್ದಾರೆ.

ಅಪ್ರಾಪ್ತ ಬಾಲಕಿ ಮಾರಾಟಕ್ಕೆ ಯತ್ನ; ಜಿಲ್ಲಾ ಮಕ್ಕಳ ರಕ್ಷಣೆ ಘಟಕ–ಒಡನಾಡಿಯಿಂದ ರಕ್ಷಣೆ

ಮೈಸೂರು, ಸೆ.27(ಎಂಕೆ)– ಲೈಂಗಿಕವಾಗಿ ಬಳಸಿಕೊಳ್ಳುವ ಸಲುವಾಗಿಯೇ ಮಾರಾಟ ಮಾಡುತ್ತಿದ್ದ ಅಪ್ರಾಪ್ತ ಬಾಲಕಿಯನ್ನು ಮೈಸೂರಿನ ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಶನಿವಾರ ರಕ್ಷಣೆ ಮಾಡಲಾಗಿದೆ.

ಬೆಂಗಳೂರು ಮೂಲದ ಈ ಅಪ್ರಾಪ್ತ ಬಾಲಕಿಯನ್ನು 25 ಲಕ್ಷ ರೂ.ಗೆ ಮಾರಾಟ ಮಾಡಲು ಯತ್ನಿಸುತ್ತಿದ್ದ ವಿಚಾರ ತಿಳಿದು ಜಂಟಿ ಕಾರ್ಯಾಚರಣೆ ನಡೆಸಿದ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಒಡನಾಡಿ, ಮಕ್ಕಳ ಕಲ್ಯಾಣ ಸಮಿತಿ ಹಾಗೂ ಮಕ್ಕಳ ರಕ್ಷಣಾ ಪೊಲೀಸ್ ಘಟಕವು ಬಾಲಕಿಯನ್ನು ರಕ್ಷಿಸಿ, ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಇಬ್ಬರು ಪೊಲೀಸ್ ವಶಕ್ಕೆ

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಒಡನಾಡಿ ಸೇವಾ ಸಂಸ್ಥೆಯ ಸ್ಟ್ಯಾನ್ಲಿ, ಋತುಮತಿಯಾದ ಅಪ್ರಾಪ್ತ ಹೆಣ್ಣು ಮಕ್ಕಳನ್ನು ಲೈಂಗಿಕ ಉದ್ದೇಶಕ್ಕೆ ಬಳಕೆ ಮಾಡುವ ದಂಧೆ ವ್ಯಾಪಕವಾಗಿದ್ದು, ಮೈಸೂರಲ್ಲಿಯೂ ಇದು ನಡೆಯುತ್ತಿದೆ ಎಂಬ ಮಾಹಿತಿ ಮೇರೆಗೆ ಜಂಟಿ ಕಾರ್ಯಾಚರಣೆ ನಡೆಸಿ, ಬಾಲಕಿಯನ್ನು ರಕ್ಷಣೆ ಮಾಡಲಾಗಿದೆ. ಬಾಲಕಿಯನ್ನು ಬೆಂಗಳೂರಿನಿಂದ ಕರೆದುಕೊಂಡು ಬಂದು 25 ಲಕ್ಷ ರೂ.ಗೆ ಮಾರಾಟ ಮಾಡಲು ಯತ್ನಿಸಿದ್ದ ಓರ್ವ ಮಹಿಳೆ ಹಾಗೂ ಓರ್ವ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದು, ವಿಚಾರಣೆ ಆರಂಭಿಸಿದ್ದಾರೆ ಎಂದರು.

ಕರ್ನಾಟಕದಲ್ಲಿ ಮಳೆ ಆರ್ಭಟ; 8 ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್

ಬೆಂಗಳೂರು, ಸೆ.27– ಕರ್ನಾಟಕದಲ್ಲಿ ಮಳೆ ಮತ್ತೆ ಚುರುಕಾಗಿದ್ದು, ರಾಜ್ಯದಾದ್ಯಂತ ಭಾರಿ ಮಳೆಯಾಗುತ್ತಿದೆ. ರಾಜ್ಯದ ಬರೋಬ್ಬರಿ 8 ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಈ ಬಗ್ಗೆ ಹವಾಮಾನ ಇಲಾಖೆ ಮಾಹಿತಿ ನೀಡಿದ್ದು, ರಾಜ್ಯಾದ್ಯಂತ ಮುಂದಿನ 5 ದಿನಗಳವರೆಗೆ ಅಂದರೆ ಅಕ್ಟೋಬರ್ 2ರವರೆಗೂ ಮಳೆ ಮುಂದುವರೆಯಲಿದೆ. ಪ್ರಮುಖವಾಗಿ ಇಂದಿನಿಂದ ಎರಡು ದಿನಗಳ ಕಾಲ ಉತ್ತರ ಕರ್ನಾಟಕದಾದ್ಯಂತ ಭಾರಿ ಮಳೆಯಾಗಲಿದೆ. ಕರಾವಳಿ ಜಿಲ್ಲೆಗಳಲ್ಲೂ ಅ.1ರಿಂದ ಮಳೆ ಚುರುಕಾಗಲಿದ್ದು, ದಕ್ಷಿಣ ಒಳನಾಡಿನ ಸಾಕಷ್ಟು ಕಡೆಗಳಲ್ಲಿ ಸಾಧಾರಣ ಮಳೆಯಾಗಲಿದೆ. ಬಾಗಲಕೋಟೆ, ಬೀದರ್, ಗದಗ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

8 ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್: ಅಂತೆಯೇ ಬಳ್ಳಾರಿ, ಚಿಕ್ಕಮಗಳೂರು, ಶಿವಮೊಗ್ಗ, ವಿಜಯನಗರ, ದಕ್ಷಿಣ ಕನ್ನಡ, ಉತ್ತರಕನ್ನಡ, ಉಡುಪಿ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಿದ್ದು, ಧಾರವಾಡ, ಹಾವೇರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ತುಮಕೂರಿನಲ್ಲೂ ಸಾಧಾರಣ ಮಳೆಯಾಗಲಿದೆ.

ಮದ್ದೂರು ಗಲಭೆಗೆ ಜಿಲ್ಲಾಡಳಿತ, ಪೊಲೀಸರ ವೈಫಲ್ಯವೇ ಕಾರಣ

ಬಿಜೆಪಿ ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣಗೌಡ ನೇತೃತ್ವದ ಸತ್ಯಶೋಧನಾ ಸಮಿತಿ ವರದಿಯಲ್ಲಿ ಉಲ್ಲೇಖ

ಬೆಂಗಳೂರು, ಸೆ. 27– ಮದ್ದೂರಿನಲ್ಲಿ 34 ವರ್ಷಗಳಿಂದ ಗಣಪತಿ ಉತ್ಸವ ನಡೆಯುತ್ತಿದ್ದು, ಒಂದು ವರ್ಷವೂ ಘರ್ಷಣೆ ಆಗಿರಲಿಲ್ಲ; ಕಳೆದ ವರ್ಷ ಡಿಸೆಂಬರ್‌ನಲ್ಲಿ ಮಸೀದಿ ಅಕ್ರಮವಾಗಿ ನಿರ್ಮಾಣಗೊಂಡ ಬಳಿಕ ಗಲಾಟೆಗೆ ಕುಮ್ಮಕ್ಕು ಕೊಟ್ಟಿದ್ದಾರೆ ಎಂದು ಬಿಜೆಪಿ ರಾಜ್ಯ ಮುಖ್ಯ ವಕ್ತಾರ ಅಶ್ವತ್ಥನಾರಾಯಣ್‌ಗೌಡ ಆರೋಪಿಸಿದ್ದಾರೆ. ಅಕ್ರಮ ಮಸೀದಿ ವಿರುದ್ಧ ಕ್ರಮ ಜರುಗಿಸಬೇಕು, ಅಮಾನುಷವಾಗಿ ವರ್ತಿಸಿದ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು. ಗಾಯಾಳುಗಳಿಗೆ ಸರಕಾರ ಪರಿಹಾರ ಕೊಡಬೇಕೆಂದು ಒತ್ತಾಯಿಸಿದ್ದಾರೆ.

ಮಲ್ಲೇಶ್ವರಂನ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಸತ್ಯಶೋಧನಾ ಸಮಿತಿ ವರದಿ ಸಲ್ಲಿಸಿದ ಬಳಿಕ ಅವರು ಮಾಧ್ಯಮಗಳ ಜೊತೆ ಮಾತನಾಡಿದರು. ಗಲಭೆ ಮಾಡುವ ಉದ್ದೇಶದಿಂದ ಬೀದಿದೀಪ ನಂದಿಸಿದ್ದಾರೆ. ಪೊಲೀಸರು ಗಣಪತಿ ಮೆರವಣಿಗೆಗೆ ಯಾವುದೇ ರೀತಿ ಪೂರ್ವತಯಾರಿ ಇಲ್ಲದೇ ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದರು ಎಂದು ಟೀಕಿಸಿದರು. ಶಾಂತ ರೀತಿಯಲ್ಲಿ ತೆರಳುತ್ತಿದ್ದ ಮೆರವಣಿಗೆ ಮೇಲೆ ಪೊಲೀಸರು ಏಕಾಏಕಿ ಲಾಠಿಚಾರ್ಜ್ ಮಾಡಿದ್ದಾರೆ. ಜಿಲ್ಲಾಡಳಿತ–ಪೊಲೀಸ್ ಇಲಾಖೆಯ ವೈಫಲ್ಯವೇ ಇದಕ್ಕೆ ನೇರ ಕಾರಣ ಎಂದು ನುಡಿದರು.



ಮದ್ದೂರು ಗಲಭೆ ಸಂಬಂಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರಗೆ ಸತ್ಯಶೋಧನಾ ಸಮಿತಿಯ ವರದಿ ಸಲ್ಲಿಸಲಾಯಿತು.

ಮಂಡ್ಯ ಜಿಲ್ಲೆ ಮದ್ದೂರಿನ ರಾಮ್–ರಹೀಂ ನಗರದಲ್ಲಿ 34 ವರ್ಷಗಳಿಂದ ನಿರಂತರವಾಗಿ ಗಣಪತಿ ಪ್ರತಿಷ್ಠಾಪನೆ ಮಾಡಿ ವಿಸರ್ಜನೆ ನಡೆಯುತ್ತಿತ್ತು. ಸೆ.7ರಂದು ಇಲ್ಲಿನ ಹಿಂದೂ ಗಣಪತಿ ಉತ್ಸವದ ವಿಸರ್ಜನೆಗೆ ಹೊರಟಾಗ ಹೊಸದಾಗಿ ನಿರ್ಮಿಸಿದ ಮಸೀದಿ ಮುಂಭಾಗದಲ್ಲಿ ಮೆರವಣಿಗೆ ತೆರಳುವಾಗ ಮ್ಯೂಸಿಕ್, ಬ್ಯಾಂಡ್ ಸೆಟ್ ಬಾರಿಸದೇ ಇರಲು ಪೊಲೀಸರು ಕೋರಿದ್ದರು. ಅದರಂತೆ ಕಾರ್ಯಕರ್ತರು ನಿಶ್ಶಬ್ದವಾಗಿ ತೆರಳುತ್ತಿದ್ದರು. 7.20ಕ್ಕೆ ಅಲ್ಲಿದ್ದ ಹೈಮಾಸ್ಟ್ ಬೀದಿದೀಪ ಆರಿಸಿದ್ದರು ಎಂದು ಆರೋಪಿಸಿದರು.

ಏಕಾಏಕಿ ಮಸೀದಿ ಕಡೆಯಿಂದ ಕಲ್ಲು ತೂರಿದ್ದಾರೆ. ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಗಣಪತಿ ಉತ್ಸವದಲ್ಲಿ ತೆರಳುವ ಕಾರ್ಯಕರ್ತರ ಮೇಲೆ ಪೊಲೀಸರು ಏಕಾಏಕಿ ಲಾಠಿ ಪ್ರಹಾರ ಮಾಡಿದ್ದರು. ಗಣಪತಿ ವಿಗ್ರಹವನ್ನು ಪೊಲೀಸ್ ವಶಕ್ಕೆ ಪಡೆದಿದ್ದು, ಪೊಲೀಸರೇ ವಿಸರ್ಜನೆ ಮಾಡಿದ್ದಾರೆ.

ಹಾದಿ–ಬೀದಿಯಲ್ಲಿ ಹೋಗುವವರ ಮೇಲೂ ಲಾಠಿ ಚಾರ್ಜ್ ಮಾಡಿದ್ದು, ಮರುದಿನ ಕಾರ್ಯಕರ್ತರು ಮದ್ದೂರು ಬಂದ್‌ಗೆ ಕರೆ ನೀಡಿದ್ದರು. ಜಿಲ್ಲೆಯ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಬೇಜವಾಬ್ದಾರಿ ಹೇಳಿಕೆ ಕೊಟ್ಟಿದ್ದರು. ಈ ಎಲ್ಲ ಘಟನೆಗೆ ಬಿಜೆಪಿ ಕುಮ್ಮಕ್ಕೇ ಕಾರಣ. ಆರೆಸ್ಸೆಸ್, ಬಜರಂಗದಳ ಕಾರಣ ಎಂದು ಎಲ್ಲೋ ಕುಳಿತು ಹೇಳಿಕೆ ನೀಡಿದ್ದರು ಎಂದು ಟೀಕಿಸಿದರು.

ಬಳಿಕ ಸಾಮೂಹಿಕ ಗಣಪತಿ ವಿಸರ್ಜನೆಗೆ ಮುಂದಾದರು. ಆ ಮಸೀದಿಯ ಭಾಗವಾದ ಮುಸ್ಲಿಂ ಮುಖಂಡ ಆದಿಲ್ ಎಂಬುವರು ಈ ಘಟನೆಗೆ ನೇರವಾಗಿ ಮುಸ್ಲಿಂ ಯುವಕರೇ ಕಾರಣ ಎಂದು ಹೇಳಿಕೆ ಕೊಟ್ಟಿದ್ದರು. ಬಳಿಕ ಚಲುವರಾಯಸ್ವಾಮಿ ಅವರೂ ಮುಸ್ಲಿಮರ ತಪ್ಪೆಂದು ಹೇಳಿಕೆಕೊಟ್ಟರು. ಈ ರೀತಿ ಬೇಜವಾಬ್ದಾರಿಯಿಂದ ಸಚಿವರು ನಡೆದುಕೊಂಡಿದ್ದರು ಎಂದು ಆಕ್ಷೇಪಿಸಿದರು.

ನಾನು, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್, ವೆಂಕಟೇಶ್ ದೊಡ್ಡೇರಿ, ವಿಜಯಪ್ರಸಾದ್, ಡಾ.ಎನ್.ಎಸ್.ಇಂದ್ರೇಶ್, ಕು.ಮಂಜುಳಾ, ಮುಖಂಡ ಸ್ವಾಮಿಗೌಡ ಒಳಗೊಂಡ ಸತ್ಯಶೋಧನಾ ಸಮಿತಿಯನ್ನು ರಾಜ್ಯಾಧ್ಯಕ್ಷರು ರಚಿಸಿದ್ದರು. ನಾವು ಸ್ಥಳಕ್ಕೆ ಭೇಟಿ ಕೊಟ್ಟಿದ್ದೆವು ಎಂದರು.

ಮೂರು ದಿನಗಳ ಮೊದಲು ಈದ್ ಮಿಲಾದ್ ಆಚರಿಸಿದ್ದರು. ಉದ್ದೇಶಪೂರ್ವಕವಾಗಿ ಗಣೇಶನ ಪ್ರತಿಷ್ಠಾಪನೆ ಮಾಡಿದ್ದ ಶಾಮಿಯಾನದ ಮುಂದೆ ಮುಸ್ಲಿಂ ಯುವಕರು ಡ್ಯಾನ್ಸ್ ಮಾಡಿದ್ದಾರೆ. ಆದರೆ, ಹಿಂದೂ ಯುವಕರು ಘರ್ಷಣೆಗೆ ಅವಕಾಶ ಮಾಡಿರಲಿಲ್ಲ. ಶಾಂತ ರೀತಿಯಿಂದ ಸ್ಪಂದಿಸಿದ್ದರು. ಮಸೀದಿ ಮುಂದೆ ಬ್ಯಾಂಡ್ ಸೆಟ್ ಬಾರಿಸಬಾರದು; ಡ್ಯಾನ್ಸ್ ಮಾಡಬಾರದು, ಜಗಮಗಿಸುವ ಲೈಟ್ ಹಾಕಬಾರದು, ಡಿಜೆ ಹಾಕಬಾರದೆಂದು ಸಿದ್ದರಾಮಯ್ಯರ ಸರಕಾರ ಬಂದ ಮೇಲೆ ತಿಳಿಸುತ್ತಿದೆ. ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡುವ ಜ್ಯೋತಿ ಎಂಬ ಮಹಿಳೆಗೆ ಅಮಾನುಷವಾಗಿ ಹೊಡೆದಿದ್ದಾರೆ. ಪೊಲೀಸರು ಹಿಂದೂ ಕಾರ್ಯಕರ್ತರ ಮೇಲೆ ಐದು ಎಫ್‌ಐಆರ್ ದಾಖಲಿಸಿದ್ದಾರೆ. ವಿಚಾರಣೆಗೆ ಕರೆಯುತ್ತಿರುವುದು ತಪ್ಪು ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅಂತಿಮ ಹಂತದ ಭಾರ ಹೊರುವ ತಾಲೀಮು: ಮರದ ಅಂಬಾರಿ ಹೊತ್ತ ಧನಂಜಯ


ದಸರಾ ಗಜಪಡೆಯ ಧನಂಜಯನಿಗೆ ಶನಿವಾರ ಮರದ ಅಂಬಾರಿಯೊಂದಿಗೆ ಅಂತಿಮ ಹಂತದ ತಾಲೀಮು ನಡೆಸಲಾಯಿತು.

ಮೈಸೂರು, ಸೆ.27(ಎಂಟಿವೈ)– ಜಂಬೂ ಸವಾರಿ ಮೆರವಣಿಗೆಗೆ ಇನ್ನು ಕೇವಲ ಐದು ದಿನಗಳಿದ್ದು, ಗಜಪಡೆಗೆ ಮರದ ಅಂಬಾರಿಯೊಂದಿಗೆ ಭಾರ ಹೊರಿಸುವ ಕೊನೆಯ ತಾಲೀಮನ್ನು ಶನಿವಾರ ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ನಡೆಸಲಾಯಿತು.

ಈ ಸಾಲಿನ ದಸರಾ ಮಹೋತ್ಸವದ ಕೊನೆಯ ಭಾರ ಹೊರುವ ತಾಲೀಮಿನಲ್ಲಿ ಧನಂಜಯನ ಮೇಲೆ ಮರದ ಅಂಬಾರಿ ಕಟ್ಟಿ, ಮರಳು ಮೂಟೆಯಿಟ್ಟು ತಾಲೀಮಿಗೆ ಕರೆತರಲಾಯಿತು. ಗಾದಿ, ನಮ್ದಾ ಕಟ್ಟಿದ ಬಳಿಕ ಕುಮ್ಕಿ ಆನೆಗಳಾದ ಲಕ್ಷ್ಮಿ ಮತ್ತು ಹೇಮಾವತಿಯೊಂದಿಗೆ ಧನಂಜಯನನ್ನು ಪುಷ್ಪಾರ್ಚನೆ ತಾಲೀಮು ಬಳಿಕ ಸಂಜೆ 5.40ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಪಕ್ಕದ ಗೇಟ್‌ನಿಂದ ಅರಮನೆ ಹೊರಗೆ ಕರೆತರಲಾಯಿತು.

ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿಗಳಾದ ಆರ್.ಎನ್.ಬಿಂಧುಮಣಿ, ಸುಂದರ್‌ರಾಜ್ ಭದ್ರತೆಯ ಮೇಲು ಸ್ತುವಾರಿಯಲ್ಲಿ ಭಾರ ಹೊತ್ತು ತಾಲೀಮಿನಲ್ಲಿ ಹೆಜ್ಜೆ ಹಾಕಿದ ಧನಂಜಯ ನೇತೃತ್ವದ ಗಜಪಡೆ ಕೆ.ಆರ್.ವೃತ್ತ ಸಯ್ಯಾಜಿರಾವ್ ರಸ್ತೆ ಬಂಬೂ ಬಜಾರ್, ಹೈವೆ ವೃತ್ತ ನೆಲ್ಸನ್ ಮಂಡೇಲಾ ರಸ್ತೆ ಮೂಲಕ ಸಂಜೆ 7.05ಕ್ಕೆ ಪಂಜಿನ ಕವಾಯತು ಮೈದಾನ ತಲುಪಿತು.

ದಾರಿಯುದ್ದಕ್ಕೂ ಅಪಾರ ಸಂಖ್ಯೆಯ ಜನ ಗಜಪಡೆಯನ್ನು ಕಣ್ತುಂಬಿಕೊಳ್ಳಲು ನಿಂತಿದ್ದರು. ಗಜಪಡೆಯ ಸುತ್ತ ಬಿಗಿಬಂದೋಬಸ್ತ್‌ನಲ್ಲಿ ತೊಡಗಿದ್ದ ಪೊಲೀಸರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಆನೆಗಳ ಫೋಟೊ ತೆಗೆಯುವಾಗ ಫ್ಲಾಶ್ ಬಳಸದಂತೆ ಎಚ್ಚರಿಕೆ ನೀಡುತ್ತಿದ್ದರು.

ಪಂಜಿನ ಕವಾಯತು ಮೈದಾನದಲ್ಲಿ ಕೆಲ ಸಮಯ ವಿಶ್ರಾಂತಿ ಬಳಿಕ ಸಂಜೆ 7.30ಕ್ಕೆ ಅರಮನೆಯತ್ತ ಗಜಪಡೆಯನ್ನು ಪೊಲೀಸ್ ಬೆಂಗಾವಲಿನಲ್ಲಿ ವಾಪಸ್ ಕರೆದೊಯ್ಯಲಾಯಿತು. ಆನೆ ಸಾಗುವಾಗ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು.

ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಸ್ವಚ್ಛತೆ



ಮೈಸೂರು ದಸರಾ ಅಂಗವಾಗಿ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಸ್ವಚ್ಛತಾ ಶ್ರಮದಾನ ನಡೆಯಿತು.

ಮೈಸೂರು, ಸೆ.27(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ದಸರಾ ಸ್ವಚ್ಛತೆ ಮತ್ತು ವ್ಯವಸ್ಥೆ ಉಪಸಮಿತಿ ವತಿಯಿಂದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ(ಆಯಿಷ್) ಸಹಯೋಗದೊಂದಿಗೆ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಶನಿವಾರ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮ ನಡೆಸಲಾಯಿತು.

ನಗರಪಾಲಿಕೆ ಸ್ವಚ್ಛತಾ ಸಿಬ್ಬಂದಿಗಳೊಂದಿಗೆ ಭಾಗವಹಿಸಿದ್ದ ಆಯಿಷ್‌ನ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಪಾಲಿಕೆ ಸ್ವಚ್ಛತಾ ಸಿಬ್ಬಂದಿ, ಕುಕ್ಕರಹಳ್ಳಿ ಕೆರೆ ಆವರಣದಲ್ಲಿ 30ಕ್ಕೂ ಹೆಚ್ಚು ಚೀಲ ಪ್ಲಾಸ್ಟಿಕ್ ಕಸ ಸಂಗ್ರಹಿಸಿದರು. ಹಾಗೆಯೇ ವಾಯುವಿಹಾರಿಗಳಲ್ಲಿ ಸ್ವಚ್ಛತಾ ಅರಿವು ಮೂಡಿಸಿದರು. ಬಳಿಕ ಸ್ವಚ್ಛತೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳಿಗೆ ಪಾಲಿಕೆಯಿಂದ ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಯಿತು. ಈ ವೇಳೆ ಮೈಸೂರು ದಸರಾ ಸ್ವಚ್ಛತೆ ಮತ್ತು ವ್ಯವಸ್ಥೆ ಉಪಸಮಿತಿ ಉಪಾಧ್ಯಕ್ಷ ವಸಂತ್‌ಕುಮಾರ್, ನಗರ ಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಕ್‌ನ ಭಾರಿ ಸದ್ದು, ಕಣ್ಣು ಕೋರೈಸುವ ಲೈಟ್‌ನಿಂದ ಶ್ರೀಕಂಠ ಗಲಿಬಿಲಿ!

ಸಾಮಾಜಿಕ ಜಾಲತಾಣದಲ್ಲಿ ಎಐ ವಿಡಿಯೋ ಹರಿಬಿಟ್ಟರೆ ಕ್ರಮ; ಅರಣ್ಯ ಇಲಾಖೆ ಎಚ್ಚರಿಕೆ

ಮೈಸೂರು, ಸೆ.27(ಎಂಟಿವೈ)– ಅರಮನೆಯಲ್ಲಿ ರಾಜವಂಶಸ್ಥರು ನಡೆಸುವ ಧಾರ್ಮಿಕ ಕಾರ್ಯಗಳಿಗೆ ನಿಯೋಜಿಸಿರುವ ಪಟ್ಟದ ಆನೆ ಶ್ರೀಕಂಠ ಅರಮನೆ ಮುಂಭಾಗದ ವೇದಿಕೆ ಕಾರ್ಯಕ್ರಮದ ಮೈಕ್ ಶಬ್ದ ಮತ್ತು ಕಣ್ಣು ಕೋರೈಸುವ ಲೈಟ್ ಬೆಳಕಿಗೆ ಗಲಿಬಿಲಿ ಗೊಂಡಿದ್ದಾನೆ. ಈ ವಿಡಿಯೋ ವೈರಲ್ ಆಗಿದ್ದು, ಯಾರಾದರೂ ಗಜಪಡೆಯ ಎಐ ವಿಡಿಯೋ ಹರಿಬಿಟ್ಟು ಗೊಂದಲ ಸೃಷ್ಟಿಸಿದರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನು ಅರಣ್ಯ ಇಲಾಖೆ ನೀಡಿದೆ.


ಶ್ರೀಕಂಠ

ಸೆ.25ರಂದು ಸಂಜೆ ಅರಮನೆಯ ಆನೆಬಾಗಿಲಿನಿಂದ ಕೋಡಿ ಸೋಮೇಶ್ವರ ದೇವಾಲಯದ ಬಳಿ ದೇವರು ತರಲು ಹೋಗುತ್ತಿದ್ದ ವೇಳೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಯುವ ವೇದಿಕೆಗೆ ಅಳವಡಿಸಿದ್ದ ಮೈಕ್ ಸ್ಪೀಕರ್‌ನಿಂದ ದೊಡ್ಡ ಪ್ರಮಾಣದ ಶಬ್ದ ಏಕಾಏಕಿ ಬಂದಿದೆ. ಇದರೊಂದಿಗೆ ವೇದಿಕೆಗೆ ಅಳವಡಿಸಿರುವ ಬಣ್ಣ ಬಣ್ಣದ ಲೈಟ್ ಬೆಳಕು ಕಂಡ ಪಟ್ಟದ ಆನೆ ಶ್ರೀಕಂಠ ಗಲಿಬಿಲಿಗೊಳಗಾಗಿ ಜೋಡಣೆ ಮಾಡಲು ಇಟ್ಟಿದ್ದ ಬ್ಯಾರಿಕೇಡ್ ದಾಟಿ ಪಕ್ಕದ ಪಾರ್ಕ್ ಒಳಗೆ ನುಗ್ಗಿದ್ದಾನೆ. ಕೂಡಲೇ ಮಾವುತ ಅದನ್ನು ನಿಯಂತ್ರಣಕ್ಕೆ ತಂದಿದ್ದಾರೆ. ಶ್ರೀಕಂಠ ಪಕ್ಕಕ್ಕೆ ಸರಿದು ಹೋಗುವ 20 ಸೆಕೆಂಡ್ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಜನರನ್ನು ಕಂಡು ಓಡಿದ ಆನೆ ಎಂದು ವಿವರಣೆ ನೀಡಲಾಗಿದೆ.

ಈ ಕುರಿತು ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ ಪ್ರತಿಕ್ರಿಯೆ ನೀಡಿ, ಶ್ರೀಕಂಠ ಓಡಿ ಹೋಗಿಲ್ಲ. ಶಬ್ದಕ್ಕೆ ಅಂಜಿ ಪಕ್ಕಕ್ಕೆ ಸರಿದಿದೆ. ಕೆಲವರು ದಸರಾ ಗಜಪಡೆಯ ಎಐ ವಿಡಿಯೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ಜನರಲ್ಲಿ ಆತಂಕ ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುತ್ತದೆ. ಜನ ಆತಂಕಕ್ಕೆ ಒಳಗಾಗಬಾರದು. ದಸರಾ ಯಶಸ್ಸಿಗೆ ಅರಣ್ಯ ಇಲಾಖೆಯೊಂದಿಗೆ ಎಲ್ಲರೂ ಕೈಜೋಡಿಸಬೇಕು. ವದಂತಿಗೆ ಕಿವಿಗೊಡಬಾರದು ಎಂದು ಮನವಿ ಮಾಡಿದ್ದಾರೆ.

ದಸರಾ ಪುಸ್ತಕ ಮೇಳದಲ್ಲಿ ಮತ್ತೆ ನಾಲ್ಕು ಕೃತಿಗಳ ಬಿಡುಗಡೆ


'ದಸರಾ ಕನ್ನಡ ಪುಸ್ತಕ ಮೇಳ'ದಲ್ಲಿ ಶನಿವಾರ 4 ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು

ಮೈಸೂರು, ಸೆ.27(ಎಂಕೆ)– ಮೈಸೂರಿನ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಪುಸ್ತಕ ಮೇಳ ಉಪಸಮಿತಿ ವತಿಯಿಂದ ಆಯೋಜಿಸಿರುವ 'ದಸರಾ ಕನ್ನಡ ಪುಸ್ತಕ ಮೇಳ'ದಲ್ಲಿ ಶನಿವಾರ 4 ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಲೇಖಕರಾದ ಎಂ.ಆರ್.ಮಂಜುನಾಥ್ ರಚಿತ 'ಅಕ್ಷರಗಳ ಪಯಣ', ಅರ್ಚನಾ ಪಾಟೀಲ ರಚಿತ 'ಲಾಸ್ಟ್ ಚಾನ್ಸ್ ಬದಲಾಗೋಕೆ', ಡಾ.ಗುಣವಂತ ಮಂಜು ರಚಿತ 'ಪದ್ಯದಂಗಡಿ', ಪಿ.ಮಹೇಶ್ ಕುಮಾರ್ ರಚಿತ 'ಅವ್ಯಕ್ತ' ಕೃತಿಗಳನ್ನು ಜಾನಪದ ಸಾಹಿತಿ ಜನಹಳ್ಳಿ ಸಿದ್ದನಿಂಗಪ್ಪ ಬಿಡುಗಡೆ ಮಾಡಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಅಧ್ಯಕ್ಷತೆ ವಹಿಸಿದ್ದರು. ಉಪಸಮಿತಿ ಸದಸ್ಯರಾದ ಕವಯತ್ರಿ ಸುಚಿತ್ರಾ ಹೆಗಡೆ, ರಾಜಶೇಖರ ಕದಂಬ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರಿದ್ದರು.

ಬೆಂಗಳೂರು–ಮುಂಬೈ ನಡುವೆ ಹೊಸ ಸೂಪರ್‌ಫಾಸ್ಟ್ ರೈಲು ಘೋಷಣೆ

ಬೆಂಗಳೂರು, ಸೆ.27– ಬೆಂಗಳೂರು



ಮತ್ತು ಮುಂಬೈ ನಡುವೆ ಹೊಸ ಸೂಪರ್‌ಫಾಸ್ಟ್ ರೈಲಿಗೆ ಕೇಂದ್ರ ರೈಲ್ವೆ ಸಚಿವಾಲಯ ಅನುಮೋದನೆ ನೀಡಿದೆ. ಈ ಅನುಮೋದನೆಯಿಂದ ಎರಡೂ ನಗರಗಳ ನಾಗರಿಕರ 30 ವರ್ಷಗಳ ಬೇಡಿಕೆಯನ್ನು ಈಡೇರಿಸಲಾಗಿದೆ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದ್ದಾರೆ.

ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಬೆಂಗಳೂರು ಮತ್ತು ಮುಂಬೈ ನಡುವೆ ಶೀಘ್ರದಲ್ಲೇ ಸೂಪರ್‌ಫಾಸ್ಟ್ ರೈಲನ್ನು ಪ್ರಾರಂಭಿಸಲಿದ್ದೇವೆ ಎಂದು ಘೋಷಣೆ ಮಾಡಿದ್ದಾರೆ. ಎರಡೂ ನಗರಗಳು ಪ್ರಮುಖ ಆರ್ಥಿಕ ಕೇಂದ್ರಗಳಾಗಿದ್ದು, ಅವುಗಳ ನಿಲ್ದಾಣಗಳಲ್ಲಿನ ಸಾಮರ್ಥ್ಯದ ವಿಸ್ತರಣೆಯಿಂದಾಗಿ ಇದು ಈಗ ಸಾಧ್ಯವಾಗಿದೆ ಎಂದು ತೇಜಸ್ವಿ ಸ್ಪಷ್ಟಪಡಿಸಿದ್ದಾರೆ.

ಸಾಂಪ್ರದಾಯಿಕ ಉಡುಗೆಯಲ್ಲಿ ದಂಪತಿಗಳ ಪಾರಂಪರಿಕ ಟಾಂಗಾ ಸವಾರಿ

ನಮ್ಮ ಪಾರಂಪರಿಕತೆಯತ್ತ ಯುವ ಸಮೂಹ ಸೆಳೆಯಬೇಕಿದೆ: ಖ್ಯಾತ ನಟ ಪ್ರಕಾಶ್ ಅಭಿಮತ


ಮೈಸೂರು ಪುರಭವನ ಆವರಣದಲ್ಲಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯೋಜಿಸಿದ್ದ ಟಾಂಗಾ ಸವಾರಿಯಲ್ಲಿ ಸಾಂಪ್ರದಾಯಿಕ ಉಡುಗೆಯಲ್ಲಿ ದಂಪತಿಗಳು ಪಾಲ್ಗೊಂಡಿದ್ದರು.

ಮೈಸೂರು, ಸೆ.27(ಎಂಟಿವೈ)– ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಶನಿವಾರ ಆಯೋಜಿಸಿದ್ದ ಪಾರಂಪರಿಕ ಟಾಂಗಾ ಸವಾರಿಯಲ್ಲಿ ಸಾಂಪ್ರದಾಯಿಕ ಉಡುಗೆಯಲ್ಲಿ ದಂಪತಿಗಳು ಪಾಲ್ಗೊಂಡು ಗಮನ ಸೆಳೆದರು.

ಮೈಸೂರಿನ ಪುರಭವನದ ಆವರಣದಲ್ಲಿ ಇಂದು ಬೆಳಗ್ಗೆ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಟಾಂಗಾ ಸವಾರಿಯಲ್ಲಿ 40ಕ್ಕೂ ಹೆಚ್ಚು ಜೋಡಿಗಳು ಸಾಂಪ್ರದಾಯಿಕ ಉಡುಗೆಯಲ್ಲಿ ಪಾಲ್ಗೊಂಡು ಮೈಸೂರಲ್ಲಿರುವ ಪಾರಂಪರಿಕ ಕಟ್ಟಡಗಳನ್ನು ವೀಕ್ಷಿಸಿ, ಅವುಗಳ ಮಾಹಿತಿ ಪಡೆದರು.

ಟಾಂಗಾ ಸವಾರಿಗೆ 'ಸು ಫ್ರಂ ಸೋ' ಚಿತ್ರದ ನಟ ಮತ್ತು ನಿರ್ದೇಶಕ ಪ್ರಕಾಶ್ ತುಮಿನಾಡು ದಂಪತಿ ಟಾಂಗಾ ಸವಾರಿ ಮೂಲಕ ಚಾಲನೆ ನೀಡಿದರು.

ಈ ದಂಪತಿಗಳಲ್ಲಿ ಪುರುಷರು ಮೈಸೂರು ಪೇಟ, ಪಂಚೆ ಮತ್ತು ಶಲ್ಯ ಧರಿಸಿದ್ದರೆ, ಮಹಿಳೆಯರು ರೇಷ್ಮೆ ಸೀರೆ ಯುಟ್ಟು, ಮಲ್ಲಿಗೆ ಮುಡಿದಿದ್ದರು. ಹಳೆ ಮೈಸೂರು, ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ, ಕೊಡಗು ಸೇರಿದಂತೆ ಆಯಾಯ ಭಾಗದ ಪಾರಂಪರಿಕ ಶೈಲಿಯಲ್ಲಿ ದಂಪತಿ ಟಾಂಗ ಸವಾರಿ ಮಾಡಿದ್ದು ವಿಶೇಷವಾಗಿತ್ತು.

ಇದೇ ವೇಳೆ ನಟ ಪ್ರಕಾಶ್ ತುಮಿನಾಡು ಮಾತನಾಡಿ, ಮೈಸೂರು ದಸರಾ ಮಹೋತ್ಸವವು ವಿಶ್ವ ಮಟ್ಟದಲ್ಲಿ ಪ್ರಸಿದ್ಧಿಯಾಗಿದ್ದು, ಇಂದಿನ ಕಾರ್ಯಕ್ರಮವು ನಾಡಿನ ಆಚಾರ ಮತ್ತು ಸಾಂಸ್ಕೃತಿಕ ವಿಚಾರವನ್ನು ಸಾರುವುದರೊಂದಿಗೆ ನಮ್ಮ ಯುವ ಪೀಳಿಗೆಯನ್ನು ಸೆಳೆಯಲಿದೆ. ಪ್ರಸ್ತುತ ಸಂದರ್ಭದಲ್ಲಿ ದೇವಾಲಯಕ್ಕೆ ಹೋದಾಗ ಇಲ್ಲ ಸಭೆ, ಸಮಾರಂಭದಲ್ಲಿ ಮಾತ್ರ ನಮ್ಮ ಸಂಸ್ಕೃತಿಯನ್ನು ಬಿಂಬಿಸುವಂತಹ ಸಾಂಪ್ರದಾಯಿಕ ಉಡುಗೆ ತೊಟ್ಟಿರುವವರನ್ನು ಕಾಣುತ್ತೇವೆ. ನಮ್ಮದೇ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಟಾಂಗಾ ಸವಾರಿ: ಪುರಭವನದ ಆವರಣದಿಂದ ಆರಂಭವಾದ ಟಾಂಗಾ ಸವಾರಿ ದೊಡ್ಡ ಗಡಿಯಾರ, ಅರಮನೆ ಮುಂಭಾಗ, ಕೆ.ಆರ್.ವೃತ್ತ, ಲ್ಯಾನ್ಸ್‌ಡೌನ್ ಕಟ್ಟಡ, ಜಗನ್ಮೋಹನ ಅರಮನೆ, ಮೈಸೂರು ನಗರಪಾಲಿಕೆ ಮುಂಭಾಗ, ಸಂಸ್ಕೃತ ಪಾಠಶಾಲೆ, ಕಾಡಾ ಕಚೇರಿ, ಗನ್‌ಹೌಸ್ ವೃತ್ತ, ಬಿ.ಎನ್. ರಸ್ತೆ, ಹಾರ್ಡಿಂಜ್ ವೃತ್ತದಿಂದ ಮತ್ತೆ ಪುರಭವನ ತಲುಪಿತು.

ಈ ಸಂದರ್ಭದಲ್ಲಿ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ದೇವರಾಜು, ಇತಿಹಾಸ ತಜ್ಞ ಡಾ. ಎನ್.ಎಸ್.ರಂಗರಾಜು, ಡಾ. ಸೆಲ್ವಪಿಳ್ಳೆ ಅಯ್ಯಂಗಾರ್, ಪರಂಪರೆ ಇಲಾಖೆ ಉಪ ನಿರ್ದೇಶಕರಾದ ಡಾ. ಸಿ.ಎನ್. ಮಂಜುಳಾ, ತಾರಕೇಶ್, ಅಂಬರೀಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ದಸರಾ ಹಾಲು ಕರೆಯುವ ಸ್ಪರ್ಧೆ; ಆನೇಕಲ್‌ನ ಅಜಯ್ ಅವರ ಹಸು ಪ್ರಥಮ ಸ್ಥಾನ

ಮೈಸೂರು, ಸೆ.27(ಎಸ್‌ಪಿಎನ್)– ದಸರಾ ಮಹೋತ್ಸವ ಪ್ರಯುಕ್ತ ನಡೆದ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಬೆಂಗಳೂರು ಆನೇಕಲ್‌ನ ಅಜಯ್ ಎಂಬುವರ ಹಸು ಬೆಳಗ್ಗೆ– ಸಂಜೆ ಒಟ್ಟು 38 ಲೀಟರ್ 150 ಮಿ.ಲೀ ಹಾಲು ಕರೆದು ಪ್ರಥಮ ಸ್ಥಾನಕ್ಕೆ ಭಾಜನವಾಗಿದ್ದು, ಅದರ ಮಾಲೀಕರು ಒಂದು ಲಕ್ಷ ರೂ. ಬಹುಮಾನ ಪಡೆದರು.


ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಬೆಂಗಳೂರು ಆನೇಕಲ್‌ನ ಅಜಯ್ ಎಂಬುವರು ತಮ್ಮ ಹಸುವಿನಿಂದ ಒಟ್ಟು 38 ಲೀಟರ್ 150 ಮಿಲಿ ಹಾಲು ಕರೆದು ಒಂದು ಲಕ್ಷ ರೂ. ಬಹುಮಾನ ಪಡೆದರು.

ಮೈಸೂರು ಜೆ.ಕೆ.ಮೈದಾನದಲ್ಲಿ ರೈತ ದಸರಾ ಉಪ ಸಮಿತಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಶನಿವಾರ ಆಯೋಜಿಸಿದ್ದ ಹಾಲು ಕರೆಯುವ ಸ್ಪರ್ಧೆಯಲ್ಲಿ ರಾಜ್ಯದ ನಾನಾ ಜಿಲ್ಲೆಗಳಿಂದ 15 ಹಸುಗಳು ಭಾಗವಹಿಸಿದ್ದವು.

ಅಜಯ್ ಅವರ ಮಾಲೀಕತ್ವದ ಹಸು ಬೆಳಗ್ಗೆ 21.500 ಲೀ. ಹಾಗೂ ಸಂಜೆ 16.650 ಲೀ ಹಾಲು ಸೇರಿ ಒಟ್ಟು 38.150 ಲೀ ಹಾಲು ಕರೆದರು. ಪಿರಿಯಾಪಟ್ಟಣ ತಾಲೂಕಿನ ಚಿಟ್ಟೇನಹಳ್ಳಿ ಗ್ರಾಮದ ಸಂಜೀವ ಅವರ ಹಸು ಬೆಳಗ್ಗೆ 20.150 ಲೀ ಹಾಗೂ ಸಂಜೆ 17.00 ಲೀ ನೀಡಿದ್ದು, ಒಟ್ಟು 37.150 ಲೀ ಹಾಲು ನೀಡಿ 2ನೇ ಸ್ಥಾನ ಪಡೆದು 80 ಸಾವಿರ ರೂ. ಬಹುಮಾನ ಪಡೆದುಕೊಂಡಿತು.

ಬೆಂಗಳೂರಿನ ನಾಗರಬಾವಿ ಬೆಂಚ್ಕಲ್ ಪಾಳ್ಯ ನಿವಾಸಿ ಹರ್ಷಿತ್ ಗೌಡ ಅವರ ಹಸು ಬೆಳಗ್ಗೆ 19.00 ಲೀ, ಸಂಜೆ 18.100 ಲೀ ನೀಡಿದ್ದು ಒಟ್ಟು 37.100 ಲೀ ಹಾಲು ನೀಡುವ ಮೂಲಕ 3ನೇ ಸ್ಥಾನ ಪಡೆದು 60 ಸಾವಿರ ರೂ. ಬಹುಮಾನ ಪಡೆದುಕೊಂಡಿತು. ಶ್ರೀರಂಗಪಟ್ಟಣ ತಾಲೂಕಿನ ಗಂಜಾಂ ನಿವಾಸಿ ನಿಸಾಂತ್ ಶಿವರಾಮು ಅವರ ಹಸು ಬೆಳಗ್ಗೆ 17.800 ಲೀ. ಹಾಗೂ ಸಂಜೆ 19.050 ಲೀ ಸೇರಿ ಒಟ್ಟು 36.850 ಲೀ ಹಾಲು ನೀಡಿ 4ನೇ ಸ್ಥಾನ ಪಡೆದುಕೊಂಡು 40 ಸಾವಿರ ರೂ. ಪಡೆದುಕೊಂಡಿತು.

ಸಚಿವರಿಂದ ಬಹುಮಾನ ವಿತರಣೆ: ವಿಜೇತ ಹಸುಗಳ ಮಾಲೀಕರಿಗೆ ಬಹುಮಾನ ವಿತರಿಸಿದ ಮಾತನಾಡಿದ ಪಶುಸಂಗೋಪನೆ ಸಚಿವ ಕೆ.ವೆಂಕಟೇಶ್, ಹೈನುಗಾರಿಕೆಗೆ ರಾಜ್ಯ ಸರ್ಕಾರ ಎಲ್ಲಾ ನೆರವು ನೀಡಲು ಬದ್ಧವಾಗಿದೆ. ಸರ್ಕಾರದ ವಿವಿಧ ಸವಲತ್ತುಗಳನ್ನು ಬಳಸಿಕೊಳ್ಳುವಂತೆ ರೈತರಿಗೆ ಕರೆ ನೀಡಿದರು.


ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಉಳಿದ ಎಲ್ಲಾ ಹಸುಗಳ ಮಾಲೀಕರಿಗೆ ಹತ್ತು ಸಾವಿರ ಮತ್ತು ನೆನಪಿನ ಕಾಣಿಕೆ ನೀಡಿ ಪ್ರೋತ್ಸಾಹಿಸಲಾಯಿತು. ಕಾರ್ಯಕ್ರಮದಲ್ಲಿ ಪಶುಪಾಲನಾ ಇಲಾಖೆಯ ಉಪ ನಿರ್ದೇಶಕ ಡಾ.ನಾಗರಾಜು, ಡಾ.ಪೂರ್ಣಾನಂದ, ಕರ್ನಾಟಕ ರಾಜ್ಯ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ, ಜಯದೇವ ಹೃದ್ರೋಗ ಸಂಸ್ಥೆ ಆರ್ಥಿಕ ಸಲಹೆಗಾರರಾದ ಜೆ. ಚೈತ್ರಾ ಉಪಸ್ಥಿತರಿದ್ದರು.

ಹಸುಗಳನ್ನು ನೋಡಲು ಮುಗಿಬಿದ್ದ ಜನತೆ: ಹಾಲು ಕರೆಯುವ ಸ್ಪರ್ಧೆಯಲ್ಲಿ 15 ರಾಸುಗಳು ಭಾಗವಹಿಸಿದ್ದು, ಬೆಳಗ್ಗೆ ಮತ್ತು ಸಂಜೆ ಗರಿಷ್ಠ ಮಟ್ಟದಲ್ಲಿ ಹಾಲು ನೀಡಿದ್ದ ಹಸುಗಳನ್ನು ನೋಡಲು ನಗರದ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಕುತೂಹಲದಿಂದ ವೀಕ್ಷಿಸಿದರು. ಅಷ್ಟೇ ಅಲ್ಲದೇ, ರಾಸುಗಳ ಮಾಲೀಕರಿಂದ ಹಸು ಸಾಕಾಣಿ, ಅವುಗಳ ಪಾಲನೆ ಮತ್ತು ಮೇವಿನ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಂಡರು.

ದೇಶ – ವಿದೇಶ

ತಾಯಿ ಎದುರೇ 5 ವರ್ಷದ ಬಾಲಕನ ಶಿರಚ್ಛೇದ

ಧಾರ್: ತಾಯಿ ಎದುರೇ 5 ವರ್ಷದ ಪುಟ್ಟ ಬಾಲಕನ



ಶಿರಚ್ಛೇದ ಮಾಡಿರುವ ಭೀಕರ ಘಟನೆ ಮಧ್ಯಪ್ರದೇಶದ ಧಾರ್‌ನಲ್ಲಿ ನಡೆದಿದ್ದು, ದುರುಳನ ಅಟ್ಟಹಾಸಕ್ಕೆ ಬಲಿಯಾದ ಪುಟ್ಟ ಬಾಲಕನನ್ನು 5 ವರ್ಷದ ವಿಕಾಸ್ ಎಂದು ಗುರುತಿಸಲಾಗಿದೆ. ಬಾಲಕನ ಕೊಲೆಗೈದ ಆರೋಪಿಯನ್ನು 25 ವರ್ಷ ವಯಸ್ಸಿನ ಮಹೇಶ್ ಎಂದು ಹೇಳಲಾಗಿದೆ.


ಆರೋಪಿ ಮಹೇಶ್ ಸ್ಥಳೀಯ ನಿವಾಸಿ ಕಾಲೂಸಿಂಗ್ ಎಂಬುವರ ಮನೆ ಬಳಿ ಬೈಕ್‌ನಲ್ಲಿ ಬಂದು ಏಕಾಏಕಿ ಮನೆಗೆ ನುಗ್ಗಿ, ನೋಡ ನೋಡುತ್ತಲೇ ಮನೆಯಲ್ಲಿ ಬಿದ್ದಿದ್ದ ಗುದ್ದಲಿ ತೆಗೆದುಕೊಂಡು ಪುಟ್ಟ ಬಾಲಕ ವಿಕಾಸ್‌ನ ಶಿರಚ್ಛೇದ ಮಾಡಿದ್ದಾನೆ.

ಕೂಡಲೇ ಸ್ಥಳಕ್ಕೆ ಧಾವಿಸಿದ ಸ್ಥಳೀಯರು ಕಾಲೂಸಿಂಗ್ ಮನೆಯಲ್ಲಿ ನಡೆದ ಭೀಕರತೆಯನ್ನು ನೋಡಿ ಕೋಪದಿಂದ ಆರೋಪಿ ಮಹೇಶ್‌ನನ್ನು ಸೆರೆಹಿಡಿದು ಮನಸೋಇಚ್ಛೆ ಥಳಿಸಿದ್ದಾರೆ.

ಬಳಿಕ ಪೊಲೀಸರು ಬಂದಿದ್ದು ತೀವ್ರವಾಗಿ ಗಾಯಗೊಂಡಿದ್ದ ಆರೋಪಿ ಮಹೇಶ್‌ನನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ ಆತ ಮಾರ್ಗಮಧ್ಯೆಯೇ ಸಾವನ್ನಪ್ಪಿದ್ದಾನೆ.

ಮನೆಯಲ್ಲಿ ಹಣ ಕದಿಯುತ್ತಿದ್ದಳೆಂದು ಮಗಳನ್ನೇ ಕೊಂದ ತಂದೆ

ಲಕ್ನೋ: ಮನೆಯಲ್ಲಿ ಹಣ ಕದಿಯುತ್ತಿದ್ದಳೆಂದು




ತಂದೆಯೊಬ್ಬ ತನ್ನ 13 ವರ್ಷದ ಮಗಳನ್ನೇ ಕತ್ತು ಹಿಸುಕಿ ಕೊಂದಿರುವ ಘಟನೆ ಉತ್ತರ ಪ್ರದೇಶದ ಬುಲಂದ್‌ಶಹರ್ ಜಿಲ್ಲೆಯಲ್ಲಿ ನಡೆದಿದೆ.

ಶುಕ್ರವಾರ ಸಂಜೆ ಹೊತ್ತಿಗೆ ಶಾಲಾ ಸಮವಸ್ತ್ರದಲ್ಲಿದ್ದ ಬಾಲಕಿಯ ಮೃತದೇಹ ಪತ್ತೆಯಾಗಿದ್ದಾಗಿ ಬುಲಂದ್‌ಶಹರ್ ಪೊಲೀಸರಿಗೆ ಮಾಹಿತಿ ಬಂತು. ಕೊಲೆಗೀಡಾದ ಸೋಮನ್ ಗುರುವಾರ ಎಂದಿನಂತೆ ಶಾಲೆಗೆ ಹೋಗಿದ್ದಳು. ಪ್ರತಿದಿನ ಶಾಲೆ ಮುಗಿದ ಬಳಿಕ ಆಕೆಯ ನಾನೇ ಮನೆಗೆ ಕರೆದುಕೊಂಡು ಹೋಗ್ತಿದ್ದೆ. ಆದರೆ ಗುರುವಾರ ಆಕೆಯನ್ನು ಮನೆಗೆ ಕರೆದೊಯ್ಯುವ ಬದಲು ತನ್ನ ಹೊಲಕ್ಕೆ ಕರೆದುಕೊಂಡು ಹೋಗಿದ್ದೆ. ಅಲ್ಲೇ ಮಗಳಿಗೆ ಸ್ಕಾರ್ಫ್‌ನಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿದ್ದೇನೆ. ಬಳಿಕ ಶವವನ್ನು ಹತ್ತಿರದ ಕಾಲುವೆಗೆ ಎಸೆದಿದ್ದೇನೆ. ತನ್ನ ಮಗಳು ಮನೆಯಿಂದ ಹಣ ಕದಿಯುತ್ತಿದ್ದಳು. ಇದರಿಂದ ಗಂಡ, ಹೆಂಡ್ತಿ ನಡುವೆ ಪದೇ ಪದೇ ಜಗಳ ನಡೆಯುತ್ತಿತ್ತು. ಹಾಗಾಗಿ ನಾನೇ ಮಗಳನ್ನು ಕೊಂದೆ ಎಂದು ತಂದೆ ಒಪ್ಪಿಕೊಂಡಿದ್ದಾನೆ.

ವಿಶ್ವಸಂಸ್ಥೆಯಲ್ಲಿ ಇಸ್ರೇಲ್ ಪ್ರಧಾನಿಗೆ ಭಾರಿ ಮುಖಭಂಗ

ನ್ಯೂಯಾರ್ಕ್: ವಿಶ್ವಸಂಸ್ಥೆಯಲ್ಲಿ ಇಸ್ರೇಲ್ ಪ್ರಧಾನಿ



ಬೆಂಜಮಿನ್ ನೆತನ್ಯಾಹು ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲು ಸಭಾಂಗಣ ಪ್ರವೇಶಿಸಿದಾಗ ಹಲವಾರು ರಾಜತಾಂತ್ರಿಕರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಿಂದ ಹೊರನಡೆದರು. ಗಾಜಾದಲ್ಲಿ ತನ್ನ ಮಿಲಿಟರಿ ಕ್ರಮದಿಂದಾಗಿ ಇಸ್ರೇಲ್ ಜಾಗತಿಕವಾಗಿ ಟೀಕೆಗಳನ್ನು ಎದುರಿಸುತ್ತಿರುವಾಗ ಈ ವಾಕ್–ಔಟ್ ಪ್ರತಿಭಟನೆ ನಡೆಯಿತು. ಅಂತಾರಾಷ್ಟ್ರೀಯ ಕ್ರಿಮಿನಲ್ ನ್ಯಾಯಾಲಯದಿಂದ ಯುದ್ಧ ಅಪರಾಧಗಳ ಆರೋಪ ಎದುರಿಸುತ್ತಿರುವ ನೆತನ್ಯಾಹು, ಇಸ್ರೇಲ್ ಗಾಜಾದಲ್ಲಿ ಸಾಧ್ಯವಾದಷ್ಟು ಬೇಗ ತನ್ನ ಕೆಲಸವನ್ನು ಮುಗಿಸುತ್ತದೆ ಎಂದು ಘೋಷಿಸಿದರು. ತಮ್ಮ ಭಾಷಣಕ್ಕೂ ಮುನ್ನ, ಪ್ಯಾಲೆಸ್ಟೀನಿಯನ್ನರಿಗೆ ತಮ್ಮ ಹೇಳಿಕೆಗಳನ್ನು ಪ್ರಸಾರ ಮಾಡಲು ಗಾಜಾ ಪಟ್ಟಿಯ ಸುತ್ತಲೂ ಲೌಡ್ ಸ್ಪೀಕರ್‌ಗಳನ್ನು ಇರಿಸಲು ಅವರು ಇಸ್ರೇಲ್ ಸೈನ್ಯಕ್ಕೆ ಆದೇಶಿಸಿದರು.

ನೆತನ್ಯಾಹು ಭಾಷಣದ ವೇಳೆ ಅರಬ್ ಮತ್ತು ಮುಸ್ಲಿಂ ರಾಷ್ಟ್ರಗಳ ಬಹುತೇಕ ಎಲ್ಲಾ ಪ್ರತಿನಿಧಿಗಳು ಹೊರನಡೆದರು. ಹಲವಾರು ಆಫ್ರಿಕನ್ ರಾಷ್ಟ್ರಗಳು ಮತ್ತು ಕೆಲವು ಯುರೋಪಿಯನ್ ರಾಜ್ಯಗಳ ಪ್ರತಿನಿಧಿಗಳು ಕೂಡ ಹೊರನಡೆದರು. ಇದರಿಂದ ನೆತನ್ಯಾಹು ಮುಜುಗರಕ್ಕೀಡಾದರು.

ಅಮೆರಿಕ ತೆರಿಗೆ ಪರಿಣಾಮ ಮೋದಿ ಪುಟಿನ್‌ಗೆ ಕರೆ : ನ್ಯಾಟೋ ಮುಖ್ಯಸ್ಥ

ಲಂಡನ್: ಭಾರತದ ಮೇಲೆ ಶೇ.50ರಷ್ಟು ತೆರಿಗೆ ಹೇರಿದ್ದಕ್ಕೆ ರಷ್ಯಾ–ಉಕ್ರೇನ್ ಯುದ್ಧ ನಿಲ್ಲಿಸುವ ಉದ್ದೇಶದಿಂದ ಎಂದು ಅಮೆರಿಕ ಹೇಳುತ್ತಿರುವ ನಡುವೆಯೇ ಅಮೆರಿಕದ ತೆರಿಗೆಯಿಂದಾಗಿ ಭಾರತದ ಮೇಲೆ ಒತ್ತಡ ಹೆಚ್ಚಾಗಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾಧ್ಯಕ್ಷ ಪುಟಿನ್‌ಗೆ ನೇರವಾಗಿ ಕರೆ ಮಾಡಿ ಉಕ್ರೇನ್ ಜತೆಗಿನ ಯುದ್ಧದಲ್ಲಿ ಅವರ ಮುಂದಿನ ನಡೆಯೇನೆಂದು ವಿಚಾರಿಸಿದ್ದಾರೆ ಎಂದು ನ್ಯಾಟೋ ಮುಖ್ಯಸ್ಥ ಮಾರ್ಕ್ ರುಟ್ಟೆ ಹೇಳಿದ್ದಾರೆ.

ಸಂದರ್ಶನವೊಂದರಲ್ಲಿ ರಷ್ಯಾದ ಮೇಲೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇನ್ನಷ್ಟು ನಿರ್ಬಂಧಗಳನ್ನು ಹೇರುತ್ತಾರೆಯೇ? ಎಂಬ ಪ್ರಶ್ನೆಗೆ ಉತ್ತರಿಸಿದ ರುಟ್ಟೆ, ಟ್ರಂಪ್ ಈಗಾಗಲೇ ಆ ಕೆಲಸವನ್ನು ಮಾಡಿದ್ದಾರೆ. ಈ ನಿಟ್ಟಿನಲ್ಲಿ ಅವರು ಇಟ್ಟಿರುವ ದೊಡ್ಡ ಹೆಜ್ಜೆಯೆಂದರೆ ಭಾರತದ ಮೇಲೆ ಹೇರಲಾಗಿರುವ ತೆರಿಗೆ. ಅದು ಪರಿಣಾಮ ಬೀರಿದೆ. ಏಕೆಂದರೆ, ಮೋದಿಯವರು ಪುಟಿನ್‌ಗೆ ಕರೆ ಮಾಡಿ, ನಾವು ನಿಮ್ಮನ್ನು ಬೆಂಬಲಿಸುತ್ತಿದ್ದೇವೆ. ಆದರೆ ನಮ್ಮ ಮೇಲೆ ಶೇ.50ರಷ್ಟು ತೆರಿಗೆ ಹೇರಲಾಗಿದೆ. ಆದ್ದರಿಂದ ನಿಮ್ಮ ಯುದ್ಧತಂತ್ರವೇನೆಂದು ಹೇಳಬಹುದೇ?' ಎಂದು ಕೇಳಿದ್ದಾರೆ ಎಂದಿದ್ದಾರೆ.

ಇಸ್ರೇಲ್ ನಡೆಸಿದ ಪ್ರಮುಖ ದಾಳಿಯಲ್ಲಿ ಕನಿಷ್ಠ 32 ಪ್ಯಾಲೆಸ್ತೀನಿಯರು ಸಾವು

ಗಾಜಾ: ಇಸ್ರೇಲ್ ಗಾಜಾದಲ್ಲಿ ಬೃಹತ್ ವಾಯುದಾಳಿ ನಡೆಸಿದೆ. ಕಳೆದ ರಾತ್ರಿ ವಾಯುದಾಳಿಯಲ್ಲಿ ಕನಿಷ್ಠ 32 ಜನರು ಸಾವನ್ನಪ್ಪಿದ್ದಾರೆ ಎಂದು ಗಾಜಾ ಆರೋಗ್ಯ ಅಧಿಕಾರಿಗಳು ವರದಿ ಮಾಡಿದ್ದಾರೆ. ಕದನ ವಿರಾಮಕ್ಕಾಗಿ ಹೆಚ್ಚುತ್ತಿರುವ ಅಂತರರಾಷ್ಟ್ರೀಯ ಒತ್ತಡದ ಮಧ್ಯೆ ಈ ದಾಳಿಗಳು ನಡೆದಿವೆ. ಆದರೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಯುದ್ಧವನ್ನು ಮುಂದುವರೆಸುವ ಬಗ್ಗೆ ದೃಢವಾಗಿದ್ದಾರೆ.

ಶನಿವಾರ ಮುಂಜಾನೆ ಮಧ್ಯ ಮತ್ತು ಉತ್ತರ ಗಾಜಾದಲ್ಲಿ ನಡೆದ ವಾಯುದಾಳಿಗಳಲ್ಲಿ ಅವರ ಮನೆಗಳಲ್ಲಿ ಹಲವಾರು ಜನರು ಸಾವನ್ನಪ್ಪಿದರು. ನುಸೆರಾತ್ ನಿರಾಶ್ರಿತರ ಶಿಬಿರದಲ್ಲಿ ಒಂದೇ ಕುಟುಂಬದ ಒಂಬತ್ತು ಸದಸ್ಯರು ಸಾವನ್ನಪ್ಪಿದರು. ಶವಗಳನ್ನು ತಂದ ಅಲ್–ಅವ್ದಾ ಆಸ್ಪತ್ರೆಯ ಸಿಬ್ಬಂದಿ ಈ ಮಾಹಿತಿಯನ್ನು ನೀಡಿದ್ದಾರೆ.

ನ್ಯೂಯಾರ್ಕ್‌ನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ನೆತನ್ಯಾಹು, ತಮ್ಮ ದೇಶವು "ಹಮಾಸ್ ವಿರುದ್ಧದ ಕೆಲಸವನ್ನು ಸಂಪೂರ್ಣವಾಗಿ ಮುಗಿಸಲು" ಬಯಸುತ್ತದೆ ಎಂದು ಹೇಳಿದ ಕೆಲವೇ ಗಂಟೆಗಳ ನಂತರ ಈ ದಾಳಿಗಳು ಸಂಭವಿಸಿವೆ. ನೆತನ್ಯಾಹು ಅವರ ಹೇಳಿಕೆಯನ್ನು ದೇಶದ ಸಾರ್ವಜನಿಕರು ಮತ್ತು ಜಾಗತಿಕ ಸಮುದಾಯವನ್ನು ಉದ್ದೇಶಿಸಿ ಮಾತನಾಡಲಾಗಿತ್ತು. ಆದರೆ ಹಲವಾರು ದೇಶಗಳ ಪ್ರತಿನಿಧಿಗಳು ತಮ್ಮ ಭಾಷಣದ ಆರಂಭದಲ್ಲಿ ಸಭೆಯಿಂದ ಹೊರನಡೆದರು.

ಮೈಸೂರು ಮಿತ್ರ



ಭವಿಷ್ಯದಲ್ಲಿ ಕಾಶಿಯಂತೆ ಕಾವೇರಿ ಆರತಿ ಪ್ರಸಿದ್ಧಿ ಪಡೆಯಲಿದೆ

ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಭವಿಷ್ಯ

ಕೆಆರ್‌ಎಸ್, ಸೆ.27– ಉತ್ತರ ಭಾರತದ ಕಾಶಿ ಕ್ಷೇತ್ರ ಹೇಗೆ ಗಂಗಾರತಿಗೆ ಪ್ರಸಿದ್ಧಿ ಹೊಂದಿದೆಯೋ ಅದೇ ರೀತಿ ಮುಂದಿನ ದಿನಗಳಲ್ಲಿ ಈ ಕ್ಷೇತ್ರದಲ್ಲಿ ನಡೆಯಲಿರುವ 'ಕಾವೇರಿ ಆರತಿ' ಕೂಡ ಪ್ರಸಿದ್ಧಿಯಾಗಲಿದೆ ಎಂದು ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಭವಿಷ್ಯ ನುಡಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕಾವೇರಿ ಆರತಿ ಕಲ್ಪನೆಯೂ ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡುವುದರ ಜೊತೆಗೆ ಪ್ರವಾಸೋದ್ಯಮಕ್ಕೂ ಉತ್ತೇಜನ ಸಿಕ್ಕಂತಾಗಲಿದೆ. ಅವರ ಈ ವಿಶೇಷ ಕನಸು ನನಸು ಮಾಡುವ ಕಾರ್ಯಕ್ಕೆ ಈಗಾಗಲೇ ಚಾಲನೆ ನೀಡಲಾಗಿದ್ದು ಮುಂದಿನ ದಿನಗಳಲ್ಲಿ ಕಾವೇರಿ ಆರತಿ ಕಾಶಿ ಕ್ಷೇತ್ರದಂತೆ ಪ್ರಸಿದ್ಧಿ ಪಡೆಯಲಿದೆ ಎಂದು ಹೇಳಿದರು.

ಪಂಚಭೂತಗಳಲ್ಲಿ ಜಲದೇವತೆ ಕೂಡ ಒಂದು. ಕನ್ನಡ ನಾಡಿನ ಜೀವನದಿ ಕಾವೇರಿಗೆ ಕಾವೇರಿ ಆರತಿ ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡಿ ಪ್ರವಾಸೋದ್ಯಮಕ್ಕೆ ಆದ್ಯತೆ ನೀಡುವುದರ ಜೊತೆಗೆ ಕಾವೇರಿ ಕಲುಷಿತವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಕೂಡ ಎಲ್ಲರ ಮೇಲಿದೆ ಎಂದರು.

ಕಾವೇರಿ ಆರತಿಯಲ್ಲಿ ಜನಮನ ಸೆಳೆದ ಜನಪದ ನೃತ್ಯೋತ್ಸವ

ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡರ ಮಾತನಾಡಿ, ಕಾವೇರಿ ನಮ್ಮ ತಾಯಿ. ಕಾವೇರಿ ನಮ್ಮ ಉಸಿರು. ಕಾವೇರಿ ಆರತಿ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ನೆರವೇರಿಸಲಾಗುತ್ತಿದೆ. ದಕ್ಷಿಣ ಭಾರತದಲ್ಲೇ ಪ್ರಪ್ರಥಮವಾಗಿ ಕಾವೇರಿ ಆರತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ಕಾವೇರಿ ದಕ್ಷಿಣ ಭಾರತದ ಸಾಂಸ್ಕೃತಿಕ ತೊಟ್ಟಿಲು. ಈ ನಾಡಿನ ಜೀವನಾಡಿ. ಸಾಂಸ್ಕೃತಿಕ ಮತ್ತು ಧಾರ್ಮಿಕತೆಯ ಪ್ರತೀಕವಾಗಿರುವ ಕಾವೇರಿ ಕರ್ನಾಟಕದ ಜೀವನದಿ. ಕೋಟ್ಯಂತರ ಜನರ ದಾಹ ನೀಗಿಸಿ, ಲಕ್ಷಾಂತರ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಚಟುವಟಿಕೆಗೆ ಕಾರಣೀಭೂತಳಾಗಿದ್ದಾಳೆ. ಕಾವೇರಿ ವರ್ಷಪೂರ್ತಿ ತುಂಬಿ, ಈ ನಾಡು ಸಮೃದ್ಧಿಯಿಂದ ಕೂಡಿರಲೆಂದು ಕಾವೇರಿ ಆರತಿ ಆಯೋಜಿಸಲಾಗಿದೆ. ಸಾರ್ವಜನಿಕರು ಮತ್ತು ಪ್ರವಾಸಿಗರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ ಎಂದು ಹೇಳಿದರು.



ಜಿಲ್ಲಾಧಿಕಾರಿ ಡಾ. ಕುಮಾರ್ ಮಾತನಾಡಿ, ಕಾವೇರಿ ಆರತಿ ಹೊಸ ಪರಂಪರೆಯನ್ನು ಸೃಷ್ಟಿಸಿದೆ. ಕಾವೇರಿ ಮಾತೆಗೆ ಪೂಜೆ ಸಲ್ಲಿಸುವ ಕಾರ್ಯ ಅತ್ಯಂತ ಪವಿತ್ರ ಕಾರ್ಯ. ಬದುಕಿಗೆ ಹೊಸ ಭರವಸೆಯ ಬೆಳಕನ್ನು ಕಾವೇರಿ ಮೂಡಿಸುತ್ತಿದ್ದಾಳೆ. ಮನರಂಜನೆ ಜೊತೆಗೆ ಕಲಾವಿದರನ್ನು ಪ್ರೋತ್ಸಾಹಿಸಿ, ಉತ್ತೇಜಿಸುವ ಸಲುವಾಗಿ ಧಾರ್ಮಿಕ ಕಾರ್ಯಕ್ರಮದ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ರಮೇಶ್ ಬಾಬು ಬಂಡಿಸಿದ್ದೇಗೌಡ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾದ್ ಮನೋಹರ್, ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲ ದಂಡಿ ಸೇರಿದಂತೆ ಅನೇಕ ಗಣ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

ಜನಪದ ನೃತ್ಯೋತ್ಸವ: ಐತಿಹಾಸಿಕ ಕಾವೇರಿ ಆರತಿ ಕಾರ್ಯಕ್ರಮದ 2ನೇ ದಿನದಂದು ಬೃಂದಾವನದಲ್ಲಿ ಗ್ರಾಮೀಣ ಸೊಗಡಿನ ಜಾನಪದ ಕುಣಿತ, ಜನಪದ ಗಾಯನಗಳು ಜನಮನಸೆಳೆದವು. ಕಾವೇರಿ ಆರತಿಗೂ ಮುನ್ನ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಜಾನಪದ ಕಲಾತಂಡಗಳ ನೃತ್ಯ ಪ್ರವಾಸಿಗರ ಮನ ಸೆಳೆಯಿತು. ಮಂಡ್ಯ ಜಿಲ್ಲೆಯ ಸೊಗಡಿನ ಪೂಜಾಕುಣಿತ, ವೀರಭದ್ರ ವೀರಗಾಸೆ, ಡೊಳ್ಳು ಕುಣಿತ, ಕಂಸಾಳೆ, ಯಕ್ಷಗಾನ, ಕೋಲಾಟ, ನೃತ್ಯಗಳು ಈ ನಾಡಿನ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಸಾರಿದಂತಿತ್ತು. ಮಾದೇಶ್ವರನನ್ನು ಹಾಡಿ ಹೊಗಳಿದ ಕಂಸಾಳೆ ನೃತ್ಯ ಮತ್ತು ಜನಪದದ ವಾದನಕ್ಕೆ ಸಭಿಕರು ಮನಸೋತರು. ಕುಂತಲ್ಲೇ ಹಾಡನ್ನು ಗುನುಗಿದರು. 2ನೇ ದಿನದ ಕಾರ್ಯಕ್ರಮಗಳು ಉತ್ತರ ಮತ್ತು ದಕ್ಷಿಣ ಭಾರತ ಸಂಪ್ರದಾಯದ ಸಮ್ಮಿಲನದಲ್ಲಿ ಕೆಆರ್‌ಎಸ್‌ನ ಬೃಂದಾವನದ ಮುಖ್ಯ ವೇದಿಕೆಯಲ್ಲಿ ಕಾವೇರಿ ಆರತಿ ಕಾರ್ಯಕ್ರಮ ಎರಡನೇ ದಿನ ಬಹಳ ಅದ್ದೂರಿಯಾಗಿ ನೆರವೇರಿತು. ಮೊದಲಿಗೆ ದಕ್ಷಿಣ ಭಾರತ ಶೈಲಿಯಲ್ಲಿ ಕಾವೇರಿ ಆರತಿ ನಡೆಯಿತು. ಬಳಿಕ ವಾರಣಾಸಿ ತಂಡದಿಂದ ಆರತಿ ಪ್ರದರ್ಶನ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಟಿಎಪಿಸಿಎಂಎಸ್ ಮತದಾರರಿಂದ ಜೆಡಿಎಸ್–ಬಿಜೆಪಿ ಬೆಂಬಲಿಗರಿಗೆ ಉತ್ತಮ ಸ್ಪಂದನೆ

ಶಾಸಕ ಹೆಚ್.ಟಿ.ಮಂಜು ವಿಶ್ವಾಸ

ಕೆ.ಆರ್.ಪೇಟೆ, ಸೆ.27– ಸೆ.28 ರಂದು ನಡೆಯುವ ಟಿಎಪಿಸಿಎಂಎಸ್ ಚುನಾವಣೆಯು ಮಿನಿ ವಿಧಾನಸಭಾ ಚುನಾವಣೆಯಂತೆ ನಡೆಯುತ್ತಿದ್ದು, ಜೆಡಿಎಸ್–ಬಿಜೆಪಿ ಮೈತ್ರಿ ಕೂಟದಿಂದ ಸ್ಪರ್ಧೆ ಮಾಡಿರುವ ಎ.ವರ್ಗದ 6, ಬಿ.ವರ್ಗದ 8 ಅಭ್ಯರ್ಥಿಗಳು ಗೆಲ್ಲುವುದು ಖಚಿತವಾಗಿದೆ. ಹಾಗಾಗಿ ಕಾರ್ಯಕರ್ತರು ಪಕ್ಷದ ಬೆಂಬಲಿತ ಅಭ್ಯರ್ಥಿಗಳನ್ನು ಗೆಲ್ಲಿಸಲು ಶ್ರಮಿಸಬೇಕು ಎಂದು ಶಾಸಕ ಹೆಚ್.ಟಿ.ಮಂಜು, ಕಾರ್ಯಕರ್ತರು ಹಾಗೂ ಜೆಡಿಎಸ್ ಮುಖಂಡರಲ್ಲಿ ಮನವಿ ಮಾಡಿದರು.



ಜೆಡಿಎಸ್–ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಶಾಸಕ ಹೆಚ್.ಟಿ.ಮಂಜು ಭಾಗವಹಿಸಿ, ಮೈತ್ರಿ ಪಕ್ಷದ ಅಭ್ಯರ್ಥಿಗಳ ಪರವಾಗಿ ಮತಯಾಚನೆ ಮಾಡಿದರು.

ಅವರು ಕೆ.ಆರ್.ಪೇಟೆ ತಾಲೂಕಿನ ಅಕ್ಕಿಹೆಬ್ಬಾಳು, ಕಿಕ್ಕೇರಿ, ಬೂಕನಕೆರೆ ಹೋಬಳಿ ಕೇಂದ್ರಗಳಲ್ಲಿ ತಾಲೂಕು ಟಿಎಪಿಸಿಎಂಎಸ್ ಚುನಾವಣೆಯ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಜನತಾದಳ ಮತ್ತು ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿ, ಟಿಎಪಿಸಿಎಂಎಸ್ ಸಂಸ್ಥೆಯ ಚುನಾವಣೆಗೆ ಸ್ಪರ್ಧೆ ಮಾಡಿರುವ ಮೈತ್ರಿ ಪಕ್ಷದ ಅಭ್ಯರ್ಥಿಗಳ ಪರವಾಗಿ ಮತಯಾಚನೆ ಮಾಡಿ ಮಾತನಾಡಿದರು. ಎಲ್ಲಾ ಹೋಬಳಿಗಳಲ್ಲಿಯೂ ಜೆಡಿಎಸ್ ಕಾರ್ಯಕರ್ತರ ಸಭೆ ನಡೆಸಿದ್ದೇವೆ ಎಲ್ಲಾ ಕಡೆಯೂ ಉತ್ತಮ ಜನಸ್ಪಂಧನೆ ಕಂಡು ಬಂದಿದೆ ಟಿಎಪಿಸಿಎಂಎಸ್ ಸಂಸ್ಥೆಯ ಷೇರುದಾರ ಮತದಾರರು ಪ್ರಚಾರ ಸಭೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನಮ್ಮ ಪಕ್ಷಕ್ಕೆ ಬೆಂಬಲ ಸೂಚಿಸಿದ್ದಾರೆ ಈ ಜನ ಬೆಂಬಲವು ನಮ್ಮ ಗೆಲುವಿನ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸಿದೆ. ಆದರೂ ನಮ್ಮ ಜೆಡಿಎಸ್ ಕಾರ್ಯಕರ್ತರು ಮತ್ತು ಮುಖಂಡರು ಮೈಮರೆಯದೇ ತಮ್ಮ ತಮ್ಮ ಗ್ರಾಮಗಳಲ್ಲಿರುವ ಬಿ.ವರ್ಗದ ಷೇರುದಾರ ಮತದಾರರನ್ನು ಭೇಟಿ ಮಾಡಿ ಅಭ್ಯರ್ಥಿಗಳು ಗೆಲುವು ಸಾಧಿಸುವಂತೆ ನೋಡಿಕೊಳ್ಳಬೇಕು ಎಂದರು.

ರಾಜ್ಯ ಸಹಕಾರ ಮಹಾಮಂಡಲದ ಪ್ರಾದೇಶಿಕ ನಿರ್ದೇಶಕ ಚೋಳೇನಹಳ್ಳಿ ಪುಟ್ಟಸ್ವಾಮಿಗೌಡ, ಎಸ್.ಎಲ್.ಮೋಹನ್, ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ ಮಾಜಿ ಉಪಾಧ್ಯಕ್ಷ ಬೋಳಮಾರನಹಳ್ಳಿ ಮಂಜುನಾಥ್, ಜಿಲ್ಲಾ ದಿಶಾ ಸಮಿತಿ ಸದಸ್ಯ ನರಸನಾಯಕ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಆರ್.ರಘು, ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಕುರುಬಹಳ್ಳಿ ನಾಗೇಶ್, ನಿರ್ದೇಶಕ ಕೊರಟೀಕೆರೆ ದಿನೇಶ್, ಮುಖಂಡರಾದ ಹುಲ್ಲೇಗೌಡ, ಐನೋರ ಹಳ್ಳಿ ಮಲ್ಲೇಶ್, ಬಿ.ಎಂ.ಕಿರಣ್, ಎ.ಜೆ.ಕುಮಾರ್, ಕಿಕ್ಕೇರಿ ಕೃಷ್ಣೇಗೌಡ, ಕೆ.ಬಿ.ನಾಗೇಶ್, ಎಸ್.ಆರ್.ನವೀನ್‌ಕುಮಾರ್, ಸಾಮಿಲ್ ರವಿಕುಮಾರ್ ಅಭ್ಯರ್ಥಿಗಳು ಇದ್ದರು.

ಪುಟ್ಟಸ್ವಾಮೀಗೌಡ ನಿಧನ



ಭಾರತೀನಗರ, ಸೆ.27–ಇಲ್ಲಿಗೆ ಸಮೀಪದ ಮೆಣಸಗೆರೆ ಗ್ರಾಮದ ಗ್ರಾ.ಪಂ ಮಾಜಿ ಅಧ್ಯಕ್ಷ ಪುಟ್ಟಸ್ವಾಮೀಗೌಡ (62) ಅವರು ಶನಿವಾರ ಸಂಜೆ ನಿಧನರಾದರು.

ಮೃತರು ಪತ್ನಿ ಮೀನಾ, ಇಬ್ಬರು ಪುತ್ರಿಯರು, ಪುತ್ರ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮವಾದ ಮೆಣಸಗೆರೆ ಗ್ರಾಮದ ರುದ್ರಭೂಮಿಯಲ್ಲಿ ಸೆ.28ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಟಿಎಪಿಸಿಎಂಎಸ್ ಚುನಾವಣೆ: ಕಾಂಗ್ರೆಸ್ ಬೆಂಬಲಿತರ ಗೆಲ್ಲಿಸಲು ಹಾಲಿ ಅಧ್ಯಕ್ಷ ಬಿ.ಎಲ್.ದೇವರಾಜು ಮನವಿ

ಕೆ.ಆರ್.ಪೇಟೆ, ಸೆ.27– ಇದೇ ಸೆ28ರಂದು ನಡೆಯುವ ಕೆ.ಆರ್.ಪೇಟೆ ತಾಲೂಕು ಟಿಎಪಿಸಿಎಂಎಸ್ ಚುನಾವಣೆಯಲ್ಲಿ ಬಿ.ವರ್ಗದಿಂದ 8, ಎ.ವರ್ಗದಿಂದ 6 ಮಂದಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಟಿಎಪಿಸಿಎಂಎಸ್ ಸಂಸ್ಥೆಯಲ್ಲಿ ದಕ್ಷ ಹಾಗೂ ಪ್ರಾಮಾಣಿಕ ಆಡಳಿತ ನೀಡಲು ಅವಕಾಶ ನೀಡಬೇಕು ಎಂದು ಟಿಎಪಿಸಿಎಂಎಸ್ ಹಾಲಿ ಅಧ್ಯಕ್ಷ ಬಿ.ಎಲ್. ದೇವರಾಜು ಮತದಾರರಲ್ಲಿ ಮನವಿ ಮಾಡಿದರು.



ಬಿಲ್ಲೇನಹಳ್ಳೀ ಶ್ರೀ ಗವಿರಂಗನಾಥ ದೇವಾಲಯದ ಸಮುದಾಯ ಭವನದಲ್ಲಿ ಟಿಎಪಿಸಿಎಂಎಸ್ ಚುನಾವಣೆಯ ಪ್ರಚಾರ ಸಭೆಯಲ್ಲಿ ಬಿ.ಎಲ್.ದೇವರಾಜು ಮಾತನಾಡಿದರು.

ಅವರು ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಬಿಲ್ಲೇನಹಳ್ಳೀ ಶ್ರೀ ಗವಿರಂಗನಾಥ ದೇವಾಲಯದ ಸಮುದಾಯ ಭವನದಲ್ಲಿ ಟಿಎಪಿಸಿಎಂಎಸ್ ಚುನಾವಣೆಯ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಪ್ರಚಾರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ತಾವು ಒಟ್ಟು 8 ವರ್ಷ ಅಧ್ಯಕ್ಷನಾಗಿ ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಗೆ ಪ್ರಾಮಾಣಿಕ ವಾಗಿ ಕೆಲಸ ಮಾಡಿದ್ದೇನೆ. ಅದಕ್ಕೆ ಎಲ್ಲಾ ನಿರ್ದೇಶಕರು ಮತ್ತು ನೌಕರ ವೃಂದದವರ ಸಹಕಾರ ಪಡೆದು ಈ ಸಾಧನೆ ಮಾಡಿದ್ದೇನೆ ಎಂದರು. ಮತ್ತೊಮ್ಮೆ ನಮ್ಮ ತಂಡಕ್ಕೆ ಮತದಾರರು ಅಶೀರ್ವಾದ ಮಾಡಿದರೆ ಟಿಎಪಿಸಿ ಎಂಎಸ್ ಸಂಸ್ಥೆಯನ್ನು ಎಸ್.ಎಂ.ಲಿಂಗಪ್ಪ ಅವರ ಕಾಲಾವಧಿಯಲ್ಲಿ ನಂ.1ಸ್ಥಾನಕ್ಕೆ ಏರಿತ್ತು. ಮತ್ತೊಮ್ಮೆ ರಾಜ್ಯಕ್ಕೆ ಪ್ರಥಮ ಸ್ಥಾನಕ್ಕೆ ತೆಗೆದುಕೊಂಡು ಹೋಗುವುದೇ ನನ್ನ ಗುರಿಯಾಗಿದೆ ಎಂದ ಅವರು, ಕಾಂಗ್ರೆಸ್ ಬೆಂಬಲಿತ ಎಲ್ಲಾ ಅಭ್ಯರ್ಥಿ ಗಳನ್ನೂ ಗಿಲ್ಲಿಸಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ಮನ್‌ಮುಲ್ ನಿರ್ದೇಶಕರಾದ ಡಾಲು ರವಿ, ಎಂ.ಬಿ.ಹರೀಶ್, ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ನಾಗೇಂದ್ರ ಕುಮಾರ್, ಕೆಯುಐಡಿಎಫ್ ನಿಗಮದ ಮಾಜಿ ಅಧ್ಯಕ್ಷ ಎಂ.ಡಿ.ಕೃಷ್ಣಮೂರ್ತಿ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಕಬ್ಬಲಗೆರೆ ಪುರ ಪುಟ್ಟಸ್ವಾಮೀಗೌಡ ಮತ್ತಿತರರಿದ್ದರು.

ಒಂದನೇ ಪುಟದಿಂದ

ಹೆಲಿಕಾಪ್ಟರ್‌ಗಳ ಚಮತ್ಕಾರಕ್ಕೆ ಚಕಿತರಾದ ಪ್ರೇಕ್ಷಕರು!



ಏರ್ ಶೋನಲ್ಲಿ ಸಾರಂಗ್ ತಂಡದೊಂದಿಗೆ ಗಣ್ಯರು ಹಾಗೂ ಅಧಿಕಾರಿಗಳು ಇರುವುದನ್ನು ಚಿತ್ರದಲ್ಲಿ ಕಾಣಬಹುದು.

ಪಟಪಟ ಸದ್ದಿನೊಂದಿಗೆ ಮೈದಾನದ ಮುಖ್ಯದ್ವಾರದ ಕಡೆಯಿಂದ ಆಗಸದಲ್ಲಿ ಹಾರಿ ಬರುತ್ತಿದ್ದಂತೆ ಪ್ರೇಕ್ಷಕರ ಹರ್ಷೋದ್ಗಾರ ಮುಗಿಲು ಮುಟ್ಟಿತು.

ಡಾಲ್ಫಿನ್ ಸ್ಲೀಪ್, ಸಾರಂಗ್ ಸ್ಪ್ಲಿಟ್, ಹಾರ್ಟ್ ವಿನ್ಯಾಸ, ಆರೋಹೆಡ್ ಫಾರ್ಮೇಷನ್, ವೈನ್ ಗ್ಲಾಸ್ ಫಾರ್ಮೇಷನ್, ಡಬಲ್ ಆರೋಕ್ರಾಸ್, ಕ್ರಾಸ್ ಒವರ್ ಬ್ರೇಕ್ ಸೇರಿದಂತೆ 16 ವಿಧದ ವಿನ್ಯಾಸಗಳನ್ನು ಆಗಸದಲ್ಲಿ ಸುಮಾರು 25 ನಿಮಿಷಗಳ ಕಾಲ ಮೂಡಿಸಿ, ಪ್ರೇಕ್ಷಕರು ಉಸಿರು ಬಿಗಿಹಿಡಿದು ನೋಡುವಂತೆ ಮಾಡಿದವು. ಸಾರಂಗ್ ತಂಡದ ಪೈಲೆಟ್‌ಗಳ ಕಸರತ್ತುಗಳ ಮೂಲಕ ಹೆಲಿಕಾಪ್ಟರ್ ಹಾರಾಟದಲ್ಲಿ ಮೂಡಿದ ಕರಾಮತ್ತಿಗೆ ಪ್ರೇಕ್ಷಕರು ಬೆಕ್ಕಸಬೆರಗಾದರು.

ಅಬ್ಬರಿಸುತ್ತಿದ್ದ ಸಂಗೀತ ಆಲಿಸುತ್ತಾ ಆಕಾಸದತ್ತ ಕಣ್ಣು ಮಿಟುಕಿಸುತ್ತಾ ಕೂತಿದ್ದ ಪ್ರೇಕ್ಷಕರಿಗೆ ಮೈದಾನದ ಮುಖ್ಯದ್ವಾರದ ಕಡೆಯಿಂದ ಐದು ಹೆಲಿಕಾಪ್ಟರ್ ಹಾರಿ ಬರುವುದು ಕಂಡಿತು. ಮೊಟ್ಟಮೊದಲ ಈ ದೃಶ್ಯಕ್ಕೆ ಪುಳಕಿತಗೊಂಡು ಶಿಳ್ಳೆಯೊಂದಿಗೆ ಚಪ್ಪಾಳೆ ಮಳೆ ಸುರಿದರು.

ಜೊತೆಗೆ ಬಾನಿನಲ್ಲಿ ಹೆಲಿಕಾಪ್ಟರ್‌ಗಳ ಮಧ್ಯೆ ಬರುತ್ತಿದ್ದ ಮೂರು ಹೆಲಿಕಾಪ್ಟರ್‌ಗಳು ನೇರವಾಗಿ ಹಾರಿ ಹೋದವು. ಅವು ಎತ್ತ ಹೋದವೆಂದು ನೋಡುತ್ತಿದ್ದಂತೆ ಪಟಪಟ ಸದ್ದಿನ ಮೊರೆತದೊಂದಿಗೆ ಮೈದಾನದಲ್ಲಿ ಮತ್ತೆ ಪ್ರತ್ಯಕ್ಷವಾದವು.

ಎಲ್ಲಾ ಹೆಲಿಕಾಪ್ಟರ್‌ಗಳು ಮೈದಾನದಿಂದ ನಿರ್ಗಮಿಸಿ, ಕ್ಷಣಮಾತ್ರದಲ್ಲೇ ಎಲ್ಲವೂ ಮೈದಾನದ ಮುಖ್ಯದ್ವಾರದ ಕಡೆಯಿಂದ ಒಟ್ಟಾಗಿ ಬಂದು, ಮೋಡಗಳ ನಡುವೆ ಹೊಗೆಯ ಚಿತ್ತಾರ ಬರೆದು ಹೋದವು. ನಂತರ ಇಂಗ್ಲಿಷ್ ಅಕ್ಷರ 'ಐ' ಆಕಾರದಲ್ಲಿ ಐದು ಹೆಲಿಕಾಪ್ಟರ್‌ಗಳು ಸಾಗುವ ಮೂಲಕ ಸೊಗಸು ಮೂಡಿಸಿದವು. ಬಳಿಕ ಮತ್ತೊಂದು ವಿನ್ಯಾಸ ಬಾನಿನಲ್ಲಿ ಮೂಡಿದಾಗ, ಒಂದು ಹೆಲಿಕಾಪ್ಟರ್ ಕೆಂಪು ಹೊಗೆಯಲ್ಲಿ ರಂಗೋಲಿ ಬಿಡಿಸುತ್ತಿದ್ದರೆ, ಉಳಿದವು ಬಿಳಿ ಹೊಗೆಯಲ್ಲಿ ಚಿತ್ತಾರ ಬಿಡಿಸಿದವು. ನಂತರ ಒಂದು ಮಧ್ಯೆ ಕೆಂಪು ಹೊಗೆ ಸೂಸುತ್ತಾ ಹಾರಾಡಿದರೆ, ಉಳಿದವು ನಾಲ್ಕು ದಿಕ್ಕಿನತ್ತ ಹಾರಿ ಪ್ರೇಕ್ಷಕರಲ್ಲಿ ರೋಮಾಂಚನದೊಂದಿಗೆ ದಿಗಿಲು ಮೂಡಿಸಿದವು.

ಬಳುಕಾಟದ ವಿನ್ಯಾಸವೂ ನೋಡುಗರಲ್ಲಿ ಮಿಂಚಿನ ಸಂಚಾರ ಉಂಟು ಮಾಡಿತು. ಮತ್ತೆ ಕ್ಷಣಮಾತ್ರದಲ್ಲಿ ತಲಾ ಎರಡು ಹೆಲಿಕಾಪ್ಟರ್‌ಗಳು ಎದುರು–ಬದುರು ಶರ ವೇಗದಲ್ಲಿ ಹಾರಿ ಪ್ರೇಕ್ಷಕರಲ್ಲಿ ಸಂಚ ಲನ ಉಂಟು ಮಾಡಿದವು. ವಿರುದ್ಧ ದಿಕ್ಕಿನಲ್ಲಿ ಹೆಲಿಕಾಪ್ಟರ್‌ಗಳು ನಡೆಸಿದ ಲೆವೆಲ್ ಕ್ರಾಸಿಂಗ್ ಜನತೆಯ ಎದೆಬಡಿತ ಹೆಚ್ಚಿಸುವಷ್ಟು ರೋಚಕವಾಗಿತ್ತು. ಹೆಲಿಕಾಪ್ಟರ್‌ಗಳು ಹಾರಾಟದಲ್ಲಿ ಹೊಗೆ ಮೂಲಕ ಹೃದಯದ ಸಂಕೇತದ ಚಿತ್ರವನ್ನು ಬರೆದಾಗ ಪ್ರೇಕ್ಷಕರ ಸಂಭ್ರಮ ಮೇರೆ ಮೀರಿತು.

ಕೊನೆ ಮತ್ತು ಮುಖ್ಯ ಪ್ರದರ್ಶನ: ಗ್ರೂಪ್ ಕ್ಯಾಪ್ಟನ್ ಎಸ್.ಕೆ.ಮಿಶ್ರಾ ನೇತೃತ್ವದಲ್ಲಿ ಹತ್ತು ಪೈಲೆಟ್‌ಗಳ ನೀಡಿದ ಸೃಜನಾತ್ಮಕ ಪ್ರದರ್ಶನ ಪ್ರೇಕ್ಷಕರ ಮನತಣಿಸಿತು. ಈ ಸಾಲಿನ ದಸರಾ ಪ್ರಯುಕ್ತದ ಸಾರಂಗ್ ಟೀಮ್‌ನ ಕೊನೆ ಹಾಗೂ ಮುಖ್ಯ ಪ್ರದರ್ಶನ ಇದಾಗಿತ್ತು. ಸೆ.25ರಂದು ಈ ಟೀಮ್ ಇದೇ ಮೈದಾನದಲ್ಲಿ ರಿಹರ್ಸಲ್ ನಡೆಸಿತ್ತು. ಹೆಲಿಕಾಪ್ಟರ್‌ನ ಚಮತ್ಕಾರದ ಹಾರಾಟವನ್ನು ಜನತೆ ತಮ್ಮ ಮೊಬೈಲ್‌ಗಳಲ್ಲೂ ಸೆರೆ ಹಿಡಿದು ಸಂಭ್ರಮಿಸಿದರು. ಮಂಡಕಳ್ಳಿ ವಿಮಾನ ನಿಲ್ದಾಣದಿಂದ ಹಾರಿ ಬಂದು ಹೆಲಿಕಾಪ್ಟರ್‌ಗಳು ಪ್ರದರ್ಶನ ನೀಡಿದವು.

ಜಿಲ್ಲಾಡಳಿತ ಈ ಮೊದಲೇ ಪ್ರಕಟಣೆಯಲ್ಲಿ ತಿಳಿಸಿದಂತೆ ಪಾಸ್ ಇದ್ದವರಿಗೆ ಮಾತ್ರವೇ ಮೈದಾನದ ಒಳಾಂಗಣಕ್ಕೆ ಪ್ರವೇಶ ಕಲ್ಪಿಸಲಾಗಿತ್ತು. ಮೈದಾನದ ಹೊರಭಾಗದಲ್ಲೂ ಹತ್ತಿರದ ಕಟ್ಟಡಗಳ ಮೇಲೆ ಜನರ ಗುಂಪು ಪ್ರದರ್ಶನ ವೀಕ್ಷಿಸುತ್ತಿದ್ದ ದೃಶ್ಯ ಕಂಡು ಬಂದಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಚಿವ ಕೆ.ವೆಂಕಟೇಶ್, ಶಾಸಕರಾದ ತನ್ವೀರ್‌ಸೇಠ್, ಡಿ.ರವಿಶಂಕರ್, ಎಂಎಲ್‌ಸಿಗಳಾದ ಕೆ.ವಿವೇಕಾನಂದ, ಕೆ.ಶಿವಕುಮಾರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮತ್ತಿತರ ಗಣ್ಯರು ಹಾಜರಿದ್ದರು.

ಅದ್ಭುತ ನಿರೂಪಣೆ

ತಂಡದ ಫ್ಲೈಟ್ ಲೆಫ್ಟಿನೆಂಟ್ ಪಲ್ಲವಿ, ಅದ್ಭುತವಾಗಿ ನಿರೂಪಣೆ ನೀಡಿ, ಇಡೀ ಪ್ರದರ್ಶನದ ಹೆಲಿಕಾಪ್ಟರ್ ಹಾರಾಟದ ವಿನ್ಯಾಸಗಳ ಬಗ್ಗೆ ಮಾಹಿತಿ ಒದಗಿಸಿದರು. ಮ್ಯೂಸಿಕ್ ಜೊತೆಗೆ ಇಂಗ್ಲಿಷ್‌ನಲ್ಲಿ ವಿವರಣೆ ನೀಡುತ್ತಿದ್ದ ಅವರು, ಆಗಾಗ್ಗೆ ಕನ್ನಡದಲ್ಲೂ ಮಾತನಾಡಿ ಗಮನ ಸೆಳೆದರು. ಹರಿಯಾಣದ ಮೂಲದ ಅವರಿಗೆ ಕನ್ನಡ ಪೂರ್ಣ ಬಾರದಿದ್ದರೂ ತಕ್ಕಮಟ್ಟಿಗೆ ಮಾತನಾಡುತ್ತಿದ್ದರು. 'ಮೈಸೂರು ದಸರಾ ಎಷ್ಟೊಂದು ಸುಂದರ. ಈ ವರ್ಷದ ದಸರಾವನ್ನು ಮತ್ತಷ್ಟು ರಂಗೇರಿಸಲು ಸಾರಂಗ್ ತಂಡದ ನಾವು ಪ್ರಥಮ ಬಾರಿಗೆ ಮೈಸೂರಿಗೆ ಬಂದಿದ್ದೇವೆ' ಎಂದು ಹೇಳುವ ಮೂಲಕ ಅವರು ನಿರೂಪಣೆ ಆರಂಭಿಸಿದರು. 'ನಾವ್ ಬಂದ ಮೇಲೆ ಸಾರಂಗ್‌ದೇ ಹವಾ...', 'ನೋ ಚಾನ್ಸೇ ಇಲ್ಲ...' ಎಂಬಿತ್ಯಾದಿ ಕನ್ನಡದ ಪದ ಪುಂಜಗಳ ಬಳಸಿ ನಿರೂಪಣೆಯಲ್ಲಿ ಜಾಣ್ಮೆ ಮೆರೆದರು.

ಅ.1, ಸೂರ್ಯಕಿರಣ್ ಏರೋಬ್ಯಾಟಿಕ್ ತಂಡದಿಂದ ಏರ್ ಶೋ

ಸೂರ್ಯಕಿರಣ್ ಏರೋಬ್ಯಾಟಿಕ್ ತಂಡವು ತನ್ನ ವಿಶಿಷ್ಟ ಶೈಲಿಯ ಪ್ರದರ್ಶನದೊಂದಿಗೆ ಖ್ಯಾತನಾಮಗೊಂಡಿದೆ. ಆಕರ್ಷಕ 'ಕೆಂಪು–ಬಿಳಿ ಹಾಕ್ ಎಂಕೆ–132 ಜೆಟ್'ಗಳನ್ನು ಹಾರಿಸುವ ಈ ತಂಡವು ಬೆರಗುಗೊಳಿಸುವ ಹಾರಾಟದ ಸರಣಿಯನ್ನೇ ಪ್ರೇಕ್ಷಕರಿಗೆ ಉಣಬಡಿಸಲಿದೆ.

ಮನಮೋಹಕ ಲೂಪ್ ಮತ್ತು ರೋಮಾಂಚಕಾರಿ ಬ್ಯಾರೆಲ್ ರೋಲ್ ನಿಂದ ಹಿಡಿದು ಗುರುತ್ವಾಕರ್ಷಣೆಗೆ ಸವಾಲೊಡ್ಡುವ ತಲೆಕೆಳಗಾದ ಹಾರಾಟ ಮತ್ತು ಪ್ರೇಕ್ಷಕರ ಮೆಚ್ಚುಗೆಯ ಡಿಎನ್‌ಎ ಮ್ಯಾನೂವರ್‌ವರೆಗೆ ಪ್ರತಿಯೊಂದು ಪ್ರದರ್ಶನವೂ ಪೈಲಟ್‌ಗಳ ಅಪ್ರತಿಮ ಪರಿಣತಿ ಮತ್ತು ಸಮನ್ವಯತೆಗೆ ಸಾಕ್ಷಿಯೇ ಸರಿ. ಸೂರ್ಯಕಿರಣ್ ಏರೋಬ್ಯಾಟಿಕ್ ಟೀಮ್ (ಎಸ್‌ಕೆಎಟಿ) ಅನ್ನು 1996ರಲ್ಲಿ ಸ್ಥಾಪಿಸಲಾಯಿತು. ಏಷ್ಯಾದಲ್ಲಿ 9 ವಿಮಾನಗಳ ಏರೋಬ್ಯಾಟಿಕ್ ತಂಡವಾಗಿರುವ ಏಕೈಕ ತಂಡ ಇದಾಗಿದೆ. ಜಗತ್ತಿನ ಶ್ರೇಷ್ಠ ಏರೋಬ್ಯಾಟಿಕ್ ತಂಡಗಳಲ್ಲಿ ಒಂದಾಗಿದೆ ಎಂದೂ ಸಹ ಇದು ಗುರುತಿಸಲ್ಪಟ್ಟಿದೆ.



ಸೂರ್ಯಕಿರಣ್ ಏರೋಬ್ಯಾಟಿಕ್ ತಂಡ ಈಗಾಗಲೇ ಮೈಸೂರಿಗೆ ಆಗಮಿಸಿದ್ದು, ಸಂದೇಶ್ ದಿ ಪ್ರಿನ್ಸ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ. ಈ ವೇಳೆ ಅವರನ್ನು ಹೋಟೆಲ್ ಎಂಡಿ ಎನ್.ಸಂದೇಶ್ ಆತ್ಮೀಯವಾಗಿ ಸ್ವಾಗತಿಸಿದರು.

ಈ ತಂಡ ಭಾರತದಾದ್ಯಂತ 700ಕ್ಕಿಂತ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದು, ಚೀನಾ, ಶ್ರೀಲಂಕಾ, ಮ್ಯಾನ್ಮಾರ್, ಥೈಲ್ಯಾಂಡ್, ಸಿಂಗಪುರ ಮತ್ತು ಯುಎಇ ಮೊದಲಾದ ದೇಶಗಳಲ್ಲಿ ಅಂತರರಾಷ್ಟ್ರೀಯ ಏರ್ ಶೋಗಳಲ್ಲಿ ಭಾರತೀಯ ವಾಯುಪಡೆಯ ವೃತ್ತಿಪರತೆ ಪ್ರತಿನಿಧಿಸಿದೆ. ಈ ತಂಡವು ಹೆಚ್‌ಎಎಲ್‌ನಿಂದ ತಯಾರಿಸಲ್ಪಟ್ಟ 9 ಹಾಕ್ ಎಂಕೆ 132 ವಿಮಾನಗಳನ್ನು ಹೊಂದಿದ್ದು, ಈ ವಿಮಾನಗಳು ಐದು ಮೀಟರ್‌ಗಿಂದ ಕಡಿಮೆ ಅಂತರದ ಹತ್ತಿರದಲ್ಲಿ ಹಾರಾಟ ನಡೆಸುವ ಸಾಮರ್ಥ್ಯ ಹೊಂದಿವೆ. ಗ್ರೂಪ್ ಕ್ಯಾಪ್ಟನ್ ಅಜಯ್ ದಶರಥಿ ಅವರು ತಂಡದ ನಾಯಕರಾಗಿದ್ದಾರೆ.

ಕರೂರು ಪ್ರಚಾರ ರ‍್ಯಾಲಿಯಲ್ಲಿ ಕಾಲ್ತುಳಿತ; 38 ಮಂದಿ ಸಾವು

ಹಿನ್ನೆಲೆಯಲ್ಲಿ ಕಳೆದ ಒಂದೂವರೆ ವರ್ಷದ ಹಿಂದೆ ಟಿವಿಕೆ ಪಕ್ಷ ಆರಂಭಿಸಿದ ನಟ ವಿಜಯ್, ಕಳೆದ 3 ವಾರಗಳಿಂದ ಪ್ರತಿ ಶನಿವಾರ ಪ್ರಚಾರ ರ‍್ಯಾಲಿ ನಡೆಸುತ್ತಿದ್ದಾರೆ. ಇಂದು ನಾಮಕ್ಕಲ್ ಮತ್ತು ಕರೂರು ಜಿಲ್ಲಾ ಕೇಂದ್ರಗಳಲ್ಲಿ ರ‍್ಯಾಲಿ ಹಮ್ಮಿಕೊಂಡಿದ್ದರು. ಕರೂರಿನ ರ‍್ಯಾಲಿಯಲ್ಲಿ ಸುಮಾರು 10 ಸಾವಿರ ಮಂದಿ ಜಮಾಯಿಸುತ್ತಾರೆ ಎಂದು ಟಿವಿಕೆ ವತಿಯಿಂದ ಪೊಲೀಸರಿಗೆ ಲಿಖಿತವಾಗಿ ತಿಳಿಸಲಾಗಿತ್ತು. ನಾಮಕ್ಕಲ್ ರ‍್ಯಾಲಿ ಮುಗಿಸಿಕೊಂಡು 2 ಗಂಟೆ ತಡವಾಗಿ ಸಂಜೆ 7 ಗಂಟೆಗೆ ವಿಜಯ್ ಕರೂರಿಗೆ ಆಗಮಿಸಿದಾಗ ಮಹಿಳೆಯರು, ಮಕ್ಕಳು ಸೇರಿದಂತೆ 50 ಸಾವಿರಕ್ಕೂ ಅಧಿಕ ಮಂದಿ ಜಮಾಯಿಸಿದ್ದರು. ವಿಜಯ್ ಪ್ರಚಾರ ವಾಹನ ಬರುತ್ತಿದ್ದಂತೆಯೇ ನೂಕು ನುಗ್ಗಲು ಉಂಟಾಗಿದೆ. ಅವರು ಮಾತನಾಡುತ್ತಿದ್ದಾಗಲೇ ಕೆಲವರು ನೂಕು ನುಗ್ಗಲಿನಿಂದ ಉಸಿರುಗಟ್ಟಿ ಅಸ್ವಸ್ಥಗೊಂಡಿದ್ದು, ಅದನ್ನು ಗಮನಿಸಿದ ವಿಜಯ್, ತಮ್ಮ ವಾಹನದಿಂದಲೇ ಅವರತ್ತ ನೀರಿನ ಬಾಟಲ್‌ಗಳನ್ನು ಎಸೆದು ಸಂತೈಸುವಂತೆ ಬೆಂಬಲಿಗರಿಗೆ ಮನವಿ ಮಾಡದ್ದಲ್ಲದೇ, ಆಂಬುಲೆನ್ಸ್‌ಗಳನ್ನು ಕರೆಸಿ ಎಂದು ಪೊಲೀಸರು ಹಾಗೂ ಆಂಬುಲೆನ್ಸ್‌ಗೆ ಸ್ಥಳಾವಕಾಶ ಮಾಡಿಕೊಡಿ ಎಂದು ಅಭಿಮಾನಿಗಳಲ್ಲಿ ಮನವಿ ಮಾಡಿದರು.

ಹಲವರು ನಾಪತ್ತೆ: ಆದರೆ, ಪರಿಸ್ಥಿತಿ ಕೈಮೀರಿ ಕಾಲ್ತುಳಿತ ಸಂಭವಿಸಿ, ಒಂಭತ್ತು ಮಕ್ಕಳು, 16 ಮಹಿಳೆಯರು ಸೇರಿದಂತೆ 38 ಮಂದಿ ಸಾವನ್ನಪ್ಪಿದ್ದಾರೆ. ಅಸ್ವಸ್ಥಗೊಂಡವರನ್ನು ಆಸ್ಪತ್ರೆಗೆ ಸಾಗಿಸಲು ಸ್ಥಳಕ್ಕೆ ಆಂಬುಲೆನ್ಸ್‌ಗಳು ಸರಾಗವಾಗಿ ಬರಲು ಭಾರೀ ಜನಸಂದಣಿ, ಅಸ್ತವ್ಯಸ್ತತೆಯಿಂದಾಗಿ ಸಾಧ್ಯವಾಗಿಲ್ಲ. ಈ ಘಟನೆಯಲ್ಲಿ ಹಲವಾರು ಮಹಿಳೆಯರು ಮತ್ತು ಮಕ್ಕಳು ನಾಪತ್ತೆಯಾಗಿದ್ದಾರೆ. ಅವರಿಗಾಗಿ ಪೋಷಕರು ಹುಡುಕಾಟ ನಡೆಸಿದ್ದಾರೆ. ಗಾಯಾಳುಗಳು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ನಾಪತ್ತೆಯಾಗಿರುವವರಿಗಾಗಿ ಸಂಬಂಧಿಕರು ಆಸ್ಪತ್ರೆಗಳಿಗೆ ಎಡತಾಕುತ್ತಿದ್ದಾರೆ.

ಮಾಜಿ ಸಚಿವರಾದ ಸೆಂದಿಲ್ ಬಾಲಾಜಿ ಮತ್ತು ವಿಜಯಭಾಸ್ಕರ್ ಗಾಯಾಳುಗಳ ಚಿಕಿತ್ಸೆಯ ಉಸ್ತುವಾರಿ ವಹಿಸಿದ್ದಾರೆ. ಸಚಿವರಾದ ಎಂ.ಸುಬ್ರಮಣಿಯನ್ ಮತ್ತು ಅನ್ಬಿಲ್ ಮಹೇಶ್‌ರನ್ನು ಕರೂರಿಗೆ ತೆರಳುವಂತೆ ಸಿಎಂ ಸ್ಟಾಲಿನ್ ಸೂಚಿಸಿದ್ದಾರೆ. ಸೇಲಂ ಮತ್ತು ತಿರುಚ್ಚಿಯಿಂದ 44 ವೈದ್ಯರು ಕರೂರಿಗೆ ದೌಡಾಯಿಸಿದ್ದಾರೆ. ಕರೂರು ದುರಂತಕ್ಕೆ ಸಂಭವಿಸಿದಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಎಐಸಿಸಿ ನಾಯಕ ರಾಹುಲ್ ಗಾಂಧಿ, ಕರ್ನಾಟಕ ಸಿಎಂ ಸಿದ್ದರಾಮಯ್ಯ, ತಮಿಳುನಾಡು ಮಾಜಿ ಸಿಎಂ ಯಡಪ್ಪಾಡಿ ಪಳನಿಸ್ವಾಮಿ, ರಾಜ್ಯಸಭಾ ಸದಸ್ಯರೂ ಆದ ನಟ ಕಮಲ ಹಾಸನ್, ಸೂಪರ್ ಸ್ಟಾರ್ ರಜನಿಕಾಂತ್ ಸೇರಿದಂತೆ ಹಲವರು ಸಾಮಾಜಿಕ ಜಾಲತಾಣದಲ್ಲಿ ಸಂತಾಪ ಸೂಚಿಸಿದ್ದಾರೆ.

ತಮಿಳುನಾಡು ಸಿಎಂ ಸ್ಟಾಲಿನ್ ದುರಂತದಲ್ಲಿ ಸಾವನ್ನಪ್ಪಿದವರ ಕುಟುಂಬದವರಿಗೆ ತಲಾ 10 ಲಕ್ಷ ರೂ. ಹಾಗೂ ಗಾಯಾಳುಗಳಿಗೆ ತಲಾ ಲಕ್ಷ ರೂ. ಪರಿಹಾರ ಘೋಷಿಸಿದ್ದು, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ವಿಚಾರಣಾ ಆಯೋಗ ರಚಿಸಿದ್ದಾರೆ. ಅದೇ ವೇಳೆ ಘಟನೆ ಬಗ್ಗೆ ವರದಿ ನೀಡುವಂತೆ ತಮಿಳುನಾಡು ಸರ್ಕಾರವನ್ನು ಕೇಂದ್ರ ಸರ್ಕಾರ ಕೇಳಿದೆ.

ಕಾಂಗ್ರೆಸ್ ಕಾರ್ಯಕರ್ತರಲ್ಲಿ ಅಸಮಾಧಾನ

ಅಪಮಾನ ಮಾಡಿದ್ದಾರೆ. ಈ ಗೊಂದಲ ಸರಿಪಡಿಸಿ ಕಾರ್ಯಕರ್ತರಿಗೆ ಸಲ್ಲಬೇಕಾದ ಸ್ಥಾನ ನೀಡಿ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಒತ್ತಾಯಿಸಿದ್ದಾರೆ. ಅಸಮಾಧಾನಿತ ಕಾರ್ಯಕರ್ತರು ಡಿ.ಕೆ.ಶಿವಕುಮಾರ್ ಅವರ ನಿವಾಸಕ್ಕೆ ತೆರಳಿ ಎಲ್ಲೆಲ್ಲಿ ಲೋಪವಾಗಿದೆ ಎಂಬುದನ್ನು ಗಮನಕ್ಕೆ ತಂದಿದ್ದಾರೆ. ಒಬ್ಬರಿಗೆ ಒಂದೇ ಹುದ್ದೆ ಬೇಡ. ನಾವು ಪಕ್ಷ ಕಟ್ಟಲು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡಿದ್ದೇವೆ. ಚುನಾವಣೆಯಲ್ಲಿ ಸ್ಪರ್ಧಿಸಲು ನಮಗೆ ಅವಕಾಶ ನೀಡಲಿಲ್ಲ. ಪಕ್ಷ ಅಧಿಕಾರಕ್ಕೆ ಬಂದಾಗಲೂ ನ್ಯಾಯ ಒದಗಿಸದಿದ್ದರೆ ಹೇಗೆ ಎಂದು ಪ್ರಶ್ನಿಸಿದ್ದಾರೆ. ಕೆಪಿಸಿಸಿ ಶಿಫಾರಸಿನ ಮೇರೆಗೆ ಎಐಸಿಸಿ ನಿಗಮ–ಮಂಡಳಿ ಪಟ್ಟಿಗೆ ಹಸಿರು ನಿಶಾನೆ ನೀಡಿದೆ, ಅದರಲ್ಲೂ ಸಣ್ಣ–ಪುಟ್ಟ ದೋಷಗಳಾಗಿವೆ. ನಂತರ ಹೆಚ್ಚುವರಿಯಾಗಿ ಅಧ್ಯಕ್ಷ, ಉಪಾಧ್ಯಕ್ಷರ ನೇಮಕಾತಿಗೆ ಪಕ್ಷ ಅನುಮತಿ ನೀಡಿತ್ತೇ ಎಂದು ಶಿವಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಕೆಲವು ವಿಚಾರಗಳಲ್ಲಿ ಪಕ್ಷವನ್ನು ಕಡೆಗಣಿಸಿ ಸರ್ಕಾರ, ತೆರೆಮರೆಯಲ್ಲೇ ಪ್ರಮುಖ ಸಂಸ್ಥೆಗಳಿಗೆ ನೇಮಕಾತಿ ಕಾರ್ಯ ನಡೆದಿದೆ, ಹೀಗಾದರೆ ನಮ್ಮ ಗತಿ ಏನು ಎಂದಿದ್ದಾರೆ. ಯಾವುದಾದರೂ ಕೆಲಸ, ಕಾರ್ಯಗಳಿಗೆ ಸಚಿವರ ಬಳಿಗೆ ತೆರಳಿದರೆ, ನಮ್ಮನ್ನು ಕತ್ತೆತ್ತಿಯೂ ನೋಡುವುದಿಲ್ಲ, ಕುರ್ಚಿ ಹಾಕಲು, ಬಾವುಟ ಕಟ್ಟಲು ನಾವು ಬೇಕು, ಅಧಿಕಾರ ಮಾತ್ರ ಅವರಿಗೆ ಎಂದಿದ್ದಾರೆ. ಕಾರ್ಯಕರ್ತರ ಅಹವಾಲನ್ನು ಸೌಮ್ಯವಾಗಿ ಆಲಿಸಿದ ಶಿವಕುಮಾರ್ ಕೆಲವು ಸಂಗತಿಗಳನ್ನು ನನ್ನ ಗಮನಕ್ಕೆ ತಂದಿದ್ದೀರಿ, ನಿಮ್ಮ ಜೊತೆ ಪಕ್ಷದ ಕಚೇರಿಯಲ್ಲಿ ಕುಳಿತು ಮತ್ತೊಮ್ಮೆ ಚರ್ಚೆ ಮಾಡುವೆ ಎನ್ನುವ ಮೂಲಕ ಯಾವುದೇ ಭರವಸೆ ನೀಡದೆ, ತೆರಳಿದರು.

ಸರ್ಕಾರದ ಉದ್ದೇಶ

ಮಾತನಾಡಲು ಆಗುವುದಿಲ್ಲ. ಪ್ರಕರಣದ ವರದಿ ಬಂದ ನಂತರ ಮುಖ್ಯಮಂತ್ರಿ ಅಥವಾ ಗೃಹ ಸಚಿವರು ಅಧಿಕೃತ ಹೇಳಿಕೆ ನೀಡಬೇಕು, ಆನಂತರ ನಾನು ಮಾತನಾಡುವೆ. ಧರ್ಮಸ್ಥಳ ವಿಚಾರ ಕುರಿತು ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಹಾಕಿದ್ದು, ಅದು ವಜಾಗೊಂಡಿದ್ದು, ಸ್ಥಳೀಯವಾಗಿ ತನಿಖೆ ಮಾಡಲಿ ಎಂಬುದಾಗಿ ಅರ್ಜಿದಾರರಿಗೆ ಕೋರ್ಟ್ ಛೀಮಾರಿ ಹಾಕಿ ಕಳುಹಿಸಿದ್ದು ಎಲ್ಲವೂ ಗೊತ್ತಿದೆ.

ಸುಪ್ರೀಂಕೋರ್ಟ್ ನಿರ್ದೇಶನ ಏನಿದೆ ಎಂಬ ಕುರಿತು ಯಾರೂ ಮಾತನಾಡುತ್ತಿಲ್ಲ. ದೆಹಲಿಗೆ ಬುರುಡೆ ತೆಗೆದುಕೊಂಡು ಹೋದ ಬಗ್ಗೆಯೂ ಮಾಹಿತಿ ಇದೆ, ತನಿಖಾ ತಂಡದಿಂದ ಅಧಿಕೃತವಾಗಿ ವರದಿ ಬರಲಿ ಎಂದರು.

ಮಾಹಿತಿ ನೀಡುವುದು ಕಡ್ಡಾಯವಲ್ಲ

ಹೈಕೋರ್ಟ್ ಮಧ್ಯಂತರ ಆದೇಶದಲ್ಲಿ ಏನು ಹೇಳಿತ್ತು: ಕರ್ನಾಟಕ ಹೈಕೋರ್ಟ್ ಹೊರಡಿಸಿದ್ದ ಮಧ್ಯಂತರ ಆದೇಶದಲ್ಲಿ, ಸಮೀಕ್ಷೆಯಲ್ಲಿ ಪಾಲ್ಗೊಳ್ಳುವುದು ಕಡ್ಡಾಯವಲ್ಲ ಎಂದು ಸ್ಪಷ್ಟಪಡಿಸಿತ್ತು. ಸಮೀಕ್ಷಕರಿಗೆ ಮಾಹಿತಿಯನ್ನು ಪಡೆಯಲು ಬಲವಂತ ಮಾಡುವಂತಿಲ್ಲ ಹಾಗೂ ಸಂಗ್ರಹಿಸಲಾದ ಮಾಹಿತಿಯನ್ನು ಸಂಪೂರ್ಣ ಗೌಪ್ಯವಾಗಿಡಬೇಕು ಎಂದು ನ್ಯಾಯಾಲಯ ಸೂಚಿಸಿತ್ತು. ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಈ ಆದೇಶದ ಅನುಸರಣೆ ಕುರಿತು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕಾಗಿದೆ. ಸಮೀಕ್ಷೆ ಕುರಿತು ಸಾರ್ವಜನಿಕರಲ್ಲಿ ವಿಶ್ವಾಸ ಮೂಡಿಸುವ ಸಲುವಾಗಿ ಹಾಗೂ ಹೈಕೋರ್ಟ್ ಮಧ್ಯಂತರ ಆದೇಶದ ಪಾಲನೆ ದೃಷ್ಟಿಯಿಂದ ಆಯೋಗದಿಂದ ಈ ಪ್ರಕಟಣೆ ಹೊರಬಿದ್ದಿದೆ.

ನೇಮಕಾತಿಗೆ ತರಬೇತಿ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರವು ಬ್ಯಾಂಕಿಂಗ್ ಮತ್ತು ಕೇಂದ್ರ ಸರ್ಕಾರದ ಹುದ್ದೆಗಳ ನೇಮಕಾತಿ ಪರೀಕ್ಷೆಗಳಿಗೆ 50 ದಿನಗಳ ವಿಶೇಷ ಕಾರ್ಯಕ್ರಮ ಆಯೋಜಿಸಿದೆ. ಯಾವುದೇ ಪದವಿ ಪೂರ್ಣಗೊಳಿಸಿದ ಆಸಕ್ತರು ತರಬೇತಿಗೆ ನೋಂದಾಯಿಸಿಕೊಳ್ಳಬಹುದು. ನೋಂದಣಿ ಸಮಯ ಬೆಳಗ್ಗೆ 10ರಿಂದ ಸಂಜೆ 4ರವರೆಗೆ. ಸೆ.30 ನೋಂದಣಿಗೆ ಕೊನೆಯ ದಿನ. ಮಾಹಿತಿಗೆ ದೂ.ಸಂ: 0821–2515944/ 9964760090 ಸಂಪರ್ಕಿಸಬಹುದು

ಮೈಸೂರು ದಸರಾ ಮಹೋತ್ಸವ-2025

ಬಾಲಿವುಡ್ ಗಾಯಕಿ ಸುನಿಧಿ ಚೌಹಾಣ್ ಗಾನ ಮೋಡಿ; ಪ್ರತಿ ಹಾಡಿಗೂ ನಿಂತಲ್ಲೇ ಸ್ಟೆಪ್ ಹಾಕಿ ಸಂಭ್ರಮಪಟ್ಟ ಅಪಾರ ಜನ

ದಸರಾದ ಮೆಗಾ ಇವೆಂಟ್

ಯುವ ದಸರಾಗೆ ವರ್ಣರಂಜಿತ ತೆರೆ

ಒಂದನೇ ಪುಟದಿಂದ

'ಫನಾ' ಚಿತ್ರದ 'ಮೇರೆ ಹಾತ್ ಮೇ', 'ತೇರಿ ಮೇರಿ ಇಸ್ಕು ಸೇ', 'ಮೇರಿ ಕಮಲಿ ಕಮಲಿ', ಪುಷ್ಪ ಚಿತ್ರದ 'ಸಾಮಿ ಸಾಮಿ' ಹಾಡುಗಳನ್ನು ಹಾಡಿ ಯುವ ದಸರಾ ಅದ್ಧೂರಿ ಸಂಭ್ರಮಕ್ಕೆ ಸಾಕ್ಷಿಯಾದರು.

ಕನ್ನಡಿಗರು ಫಿದಾ: ಮುಂಗಾರು ಮಳೆ ಚಿತ್ರದ 'ಕುಣಿದು ಕುಣಿದು ಬಾರೇ' ಹಾಗೂ ಜೋಗಿ ಚಿತ್ರದ 'ಚಿಕು ಬುಕು ರೈಲು ನಿಲ್ಲೋದಿಲ್ಲ ಎಲ್ಲೂ', 'ರಾ.. ರಾ... ರಾಕಮ್ಮ' ಹಾಡು ಹಾಡುತ್ತಲೇ ಇಡೀ ಮೈದಾನದಲ್ಲಿ ನೆರೆದಿದ್ದ ಪ್ರೇಕ್ಷಕರು ತಾವು ಕೂಡ ಧ್ವನಿಗೂಡಿಸಿ ಶಿಳ್ಳೆ, ಕೇಕೆ ಹಾಕಿ ಕುಣಿದು ಕುಪ್ಪಳಿಸಿದರು. ತುಂತುರು ಮಳೆಯಲ್ಲೂ ಯುವಕ, ಯುವತಿಯರು ಹುಚ್ಚೆದ್ದು ಕುಣಿದು ಯುವ ದಸರಾವನ್ನು ಸಂಭ್ರಮಿಸಿದರು.

ಬೆಸ್ಟ್ ಕೆಪ್ಟ್ ಸೀಕ್ರೆಟ್ ಬ್ಯಾಂಡ್: ಬೆಸ್ಟ್ ಕೆಪ್ಟ್ ಸೀಕ್ರೆಟ್ ಬ್ಯಾಂಡ್ ಯುವ ದಸರಾ ವೇದಿಕಯಲ್ಲಿ ಇಂಗ್ಲಿಷ್ ಆಲ್ಬಂ ಹಾಡುಗಳನ್ನು ಸಾದರಪಡಿಸಿದರು. ಹಾಲಿವುಡ್‌ನ ಮರೂನ್-5 ಅವರ 'ಗರ್ಲ್ಸ್ ಲೈಕ್ ಯೂ' ಸೇರಿದಂತೆ ಹಲವು ಇಂಗ್ಲಿಷ್ ಹಾಡುಗಳ ಮೂಲಕ ರಂಜಿಸಿದರು. ಇಂಗ್ಲಿಷ್ ಆಲ್ಬಂ ಹಾಡುಗಳಿಗೆ ಪ್ರೇಕ್ಷಕ ಮಹೋದಯರು ಮುಳುಗಿ ಹೋದರು. ಬಾಲಿವುಡ್ ನಟ ಹೃತಿಕ್ ರೋಷನ್ ಅವರ ಬ್ಯಾಂಗ್ ಬ್ಯಾಂಗ್ ಹಾಡಿಗೆ ನೆರೆದಿದ್ದವರು ಖುರ್ಚಿಯಿಂದ ಮೇಲೆದ್ದು, ಕೈ ಬೀಸುತ್ತಾ, ಹುಚ್ಚೆದ್ದು ಕುಣಿದು ಕುಪ್ಪಳಿಸಿದರು.

ಅಪಾರ ಜನಸ್ತೋಮ: ಅಂತಿಮ ದಿನದ ಯುವ ದಸರಾ ಕಾರ್ಯಕ್ರಮ ನೋಡಲು ಉತ್ತನಹಳ್ಳಿಗೆ ಜನಸಾಗರವೇ ಹರಿದುಬಂದಿತು. ವೀಕೆಂಡ್ ಎಫೆಕ್ಟ್‌ನಿಂದಾಗಿ ಉಳಿದ ದಿನಕ್ಕಿಂತ ಇಂದು ವೀಕ್ಷಕರ ಸಂಖ್ಯೆ ಹೆಚ್ಚಾಗಿತ್ತು. ಹಿರಿಯರು, ಕಿರಿಯರು, ಜೋಡಿಗಳು, ತಂಡೋಪತಂಡವಾಗಿ ಬಂದ ಯುವ ಸಮೂಹ ಯುವ ದಸರಾದಲ್ಲಿ ಭರ್ಜರಿ ಸ್ಟೆಪ್ಸ್ ಹಾಕಿ ಕೊನೆಯ ದಿನದ ಸಂಭ್ರಮವನ್ನು ಆನಂದಿಸಿದರು.



ಕಮಲಿ.. ಕಮಲಿ ಹಾಡಿನೊಂದಿಗೆ ಸಮೂಹ ನೃತ್ಯ ಮಾಡಿದ ಗಾಯಕಿ ಸುನಿಧಿ ಚೌಹಾಣ್



ಯುವ ದಸರಾದಲ್ಲಿ ಕುಣಿದು ಕುಪ್ಪಳಿಸಿದ ಪ್ರೇಕ್ಷಕ ವರ್ಗ



ಯುವ ದಸರಾ ವೇದಿಕೆಯಲ್ಲಿ ಸುನಿಧಿ ಚೌಹಾಣ್ ಮೋಡಿ

ರಾಜ್ಯಮಟ್ಟದ ಪಂಜ ಕುಸ್ತಿಗೆ ಚಾಲನೆ



ವಿಶೇಷಚೇತನ ಮಹಿಳೆಯರು ಪಂಜ ಕುಸ್ತಿಯಲ್ಲಿ ತೋಳ್ಬಲ ಪ್ರದರ್ಶಿಸುವ ಮೂಲಕ ಎಲ್ಲರ ಗಮನ ಸೆಳೆದರು.

ಮೈಸೂರು,ಸೆ.27(ಜಿಎ)- ದಸರಾ ಶ್ರೀ, ದಸರಾ ಕುಮಾರಿ, ವಿಶೇಷಚೇತನ ಮತ್ತು ನವಚೇತನ ತಾರೆ ಕಪ್ ಪಡೆದುಕೊಳ್ಳಲು ಪಂಜ ಕುಸ್ತಿಯಲ್ಲಿ ಸ್ಪರ್ಧಾಳುಗಳು ತೋಳ್ಬಲ ಪ್ರದರ್ಶಿಸಿದರು. ವಿಶೇಷಚೇತನರ ಪಂದ್ಯಗಳು ಎಲ್ಲರ ಗಮನ ಸೆಳೆಯಿತು.

ದಸರಾ ಮಹೋತ್ಸವದ ಕುಸ್ತಿ ಉಪಸಮಿತಿ ವತಿಯಿಂದ ಡಿ.ದೇವರಾಜ ಅರಸ್ ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಪಂಜ ಕುಸ್ತಿಗೆ ಡಿಐಜಿಪಿ ಡಾ.ಎಂ.ಬಿ. ಬೋರಲಿಂಗಯ್ಯ ಅವರು ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಲ್.ನಾಗೇಶ್ ಅವರೊಂದಿಗೆ ಪಂಜ ಕುಸ್ತಿ ಆಡುವ ಮೂಲಕ ರಾಜ್ಯಮಟ್ಟದ ಪಂಜ ಕುಸ್ತಿಗೆ ಚಾಲನೆ ನೀಡಿದರು.

ಬೆಂಗಳೂರು, ದಾವಣಗೆರೆ, ಮೈಸೂರು, ಚಿಕ್ಕಮಗಳೂರು, ಹಾಸನ, ಬೆಳಗಾವಿ, ಧಾರವಾಡ, ಗುಲ್ಬರ್ಗ, ರಾಯಚೂರು, ವಿಜಯಪುರ ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ 300ಕ್ಕೂ ಹೆಚ್ಚು ಸ್ಪರ್ಧಿಗಳು ಪಾಲ್ಗೊಂಡಿದ್ದರು. ತೂಕಕ್ಕೆ ಅನುಗುಣವಾಗಿ ಪುರುಷರ 11 ತಂಡ, ಮಹಿಳೆಯರ 8 ತಂಡ, ವಿಶೇಷಚೇತನರ ಪುರುಷ 4 ತಂಡ, ಮಹಿಳೆ 4 ತಂಡ ಮಾಡಲಾಗಿತ್ತು.

ಹೊಸ ಹೂಗಳ ಮರುಜೋಡಣೆ; ದಸರಾ ಫಲ-ಪುಷ್ಪ ಪ್ರದರ್ಶನಕ್ಕೆ ಮತ್ತಷ್ಟು ಮೆರುಗು



ಮೈಸೂರು, ಸೆ.27(ಎಂಕೆ)- ಮೈಸೂರು ದಸರಾ ಜನಾಕರ್ಷಣೆಯ ಫಲಪುಷ್ಪ ಪ್ರದರ್ಶನದಲ್ಲಿ ಹೊಸ ಹೂಗಳ ಮರುಜೋಡಣೆ ಕಾರ್ಯ ನಡೆಯುತ್ತಿದ್ದು, ನಾಳೆ(ಸೆ.28)ಯಿಂದ ಗಾಂಧಿ ಮಂಟಪ ಪಿಂಕ್ ಬಣ್ಣದಲ್ಲಿ ಕಣ್ಮನ ಸೆಳೆಯಲಿದೆ.

ಮೈಸೂರಿನ ಕುಪ್ಪಣ್ಣ ಪಾರ್ಕ್‌ನಲ್ಲಿ ಆಯೋಜಿಸಿರುವ ದಸರಾ ಫಲಪುಷ್ಪ ಪ್ರದರ್ಶನಕ್ಕೆ ಪ್ರವಾಸಿಗರು ತಂಡೋಪತಂಡವಾಗಿ ಆಗಮಿಸುತ್ತಿದ್ದು, ಕಳೆದ 6 ದಿನಗಳಿಂದ ಪ್ರಕಾಶಿಸಿ ಮಂಕಾಗಿರುವ ಕಲಾಕೃತಿಗಳಿಗೆ ಹೊಸ ಹೂಗಳನ್ನು ಜೋಡಿಸಲಾಗುತ್ತಿದೆ.

ಫಲಪುಷ್ಪ ಪ್ರದರ್ಶನದ ಪ್ರಮುಖ ಆಕರ್ಷಣೆಯಾದ ಗಾಜಿನ ಮನೆಯಲ್ಲಿರುವ ಗಾಂಧಿ ಮಂಟಪ ಹೊಸ ರೂಪ ಪಡೆಯಲಿದ್ದು, ಪೀಚ್(ಕಿತ್ತಳೆ, ಹಳದಿ ಮತ್ತು ಸ್ವಲ್ಪ ಗುಲಾಬಿ ಬಣ್ಣದ ಮಿಶ್ರಣ) ಬಣ್ಣದಿಂದ ಪಿಂಕ್‌ಮಯವಾಗಲಿದೆ.

ಸುಮಾರು ಎರಡೂವರೆಯಿಂದ ಮೂರು ಲಕ್ಷ ಹೂಗಳನ್ನು ಬಳಸಿ, ಕಲಾಕೃತಿಗಳನ್ನು ವಿನ್ಯಾಸಗೊಳಿಸಿದ್ದು, ಶನಿವಾರ ಇಡೀ ರಾತ್ರಿ ಹೊಸ ಹೂಗಳ ಮರುಜೋಡಣೆ ಕಾರ್ಯ ನಡೆಯಲಿದೆ ಎಂದು ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರಾದ ಹಬೀಬಾ ನಿಶಾತ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಗಾಂಧಿ ಮಂಟಪದಲ್ಲಿ ಬಾಡಿರುವ ಹೂಗಳನ್ನು ಬದಲಾಯಿಸಿ, ಹೊಸ ಹೂಗಳನ್ನು ಜೋಡಿಸಲಾಗುವುದು. ದಸರಾ ಫಲಪುಷ್ಪ ಪ್ರದರ್ಶನ ಉಳಿದ ದಿನಗಳು ಗಾಂಧಿ ಮಂಟಪ ಪಿಂಕ್ ಬಣ್ಣದಿಂದ ಆಕರ್ಷಣೆ ಮಾಡಲಿದೆ. ಅಲ್ಲದೆ ಎಲ್ಲಾ ಕಲಾಕೃತಿಗಳಿಗೂ ಹೊಸ ಹೂಗಳನ್ನು ಜೋಡಿಸಲಾಗುವುದು ಎಂದು ಮಾಹಿತಿ ನೀಡಿದರು.

ಅರಮನೆ ಅಂಗಳದಲ್ಲಿ ಸಂಗೀತ, ನೃತ್ಯ ಸಮ್ಮಿಳಿತದ ಕಲಾತಾಣ ನಿರ್ಮಾಣ

ಮಂತ್ರಮುಗ್ಧರಾದ ನೆರೆದ ಸಹಸ್ರಾಸಹಸ್ರ ಸಂಗೀತ ಪ್ರೇಮಿಗಳು

ಮೈಸೂರು,ಸೆ.27(ಎಸ್‌ಬಿಡಿ)- ಅಂಬಾವಿಲಾಸ ಅರಮನೆ ಅಂಗಳದ ದಸರಾ ಸಾಂಸ್ಕೃತಿಕ ಪ್ರಧಾನ ವೇದಿಕೆಯಲ್ಲಿ ಶನಿವಾರ ಗೀತಗಾಯನ, ವಾದ್ಯ ಸಂಗೀತ ಹಾಗೂ ನೃತ್ಯರೂಪಕ ಸಮ್ಮಿಳಿತಗೊಂಡು ಸುಂದರ ಕಲಾಪ್ರಪಂಚವೇ ಸೃಷ್ಟಿಯಾಗಿತ್ತು.

ವಿದುಷಿ ಅನುಷಾ ರಾಘವೇಂದ್ರ ಅವರು ಜನಾರ್ಧನ್, ಶಿವಲಿಂಗ, ಜಗದೀಶ್, ಸಾಯಿವಂಶಿ ಅವರ ವಾದ್ಯ ಸಹಕಾರದೊಂದಿಗೆ 'ಭಕ್ತಿ ಸಂಗೀತ ಮತ್ತು ದಾಸವಾಣಿ' ಪ್ರಸ್ತುತಪಡಿಸಿ, ನೆರೆದಿದ್ದವರಲ್ಲಿ ಭಕ್ತಿ ಸಂಚಲನ ಮೂಡಿಸಿದರು. 'ವಿಠ್ಠಲ ವಿಠ್ಠಲ ಪಾಂಡುರಂಗ..', 'ರಂಗಾ ಕೃಪಾಂಗ ಶ್ರೀರಂಗ...' ಸೇರಿದಂತೆ ಹಲವು ರಚನೆಗಳನ್ನು ಸುಶ್ರಾವ್ಯವಾಗಿ ಹಾಡಿದರು.

ಭಾವ ಸಿಂಚನ: ಮೈಸೂರಿನ ಸೊಸೆಯಾಗಿರುವ ಉತ್ತರಕರ್ನಾಟಕ ಮೂಲದ ಸಿಂಚನ್ ದೀಕ್ಷಿತ್ ಅವರ 'ಭಾವಲಹರಿ ಗೀತಗಾಯನ'ಕ್ಕೆ ಪ್ರೇಕ್ಷಕರು ಮನಸೋತರು. ಕನ್ನಡ, ತೆಲುಗು, ಹಿಂದಿ ಸೇರಿದಂತೆ 12 ಭಾಷೆಗಳಲ್ಲಿ ಹಾಡುವ ಮೂಲಕ ಹಲವು ಪ್ರಶಸ್ತಿಗಳಿಗೆ ಭಾಜನರಾಗಿರುವ ಹಾಗೂ ಜನಪದ, ಭಕ್ತಿಗೀತೆ, ಸುಗಮ ಸಂಗೀತ ಇನ್ನಿತರ ಎಲ್ಲಾ ಪ್ರಾಕಾರದ ಗಾಯನದಲ್ಲೂ ಸೈ ಎನಿಸಿಕೊಂಡಿರುವ ಸಿಂಚನ್, ಪ್ರೇಕ್ಷಕರನ್ನು ಅಕ್ಷರಶಃ ಮಂತ್ರಮುಗ್ಧಗೊಳಿಸಿದರು.

ಆಲಾಪದೊಂದಿಗೆ ವೇದಿಕೆಗೆ ಆಗಮಿಸಿದ ಅವರು 'ಕಾಯೌ ಶ್ರೀಗೌರಿ...' ಮೈಸೂರು ಆಸ್ಥಾನ ಗೀತೆಯನ್ನು ಆಧುನಿಕ ವಾದ್ಯ ಮೇಳದೊಂದಿಗೆ ಪ್ರಸ್ತುತಪಡಿಸಿದಾಗ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೆಸರನ್ನೂ ಸೇರಿಸಿದ್ದು ವಿಶೇಷವಾಗಿತ್ತು. 'ಐಗಿರಿ ನಂದಿನಿ ನಂದಿತ ಮೇದಿನಿ, ವಿಶ್ವ ವಿನೋದಿನಿ...' ಗೀತೆಯನ್ನು ವೇಗವಾಗಿ ತಮ್ಮದೇ ಶೈಲಿಯಲ್ಲಿ ಹಾಡಿ ತಾಯಿ ಚಾಮುಂಡೇಶ್ವರಿ ಸ್ಮರಿಸಿದರು. 'ದೇವ ಶ್ರೀ ಗಣೇಶ...' ಹಾಗೂ 'ಸೋಜುಗಾದ ಸೂಜಿ ಮಲ್ಲಿಗೆ ಮಹದೇವ ನಿಮ್ಮ ಮಂಡೆ ಮೇಲೆ ದುಂಡು ಮಲ್ಲಿಗೆ...' ಗೀತೆಗಳನ್ನು ವಿಶಿಷ್ಟ ಶೈಲಿಯಲ್ಲಿ ಹಾಡಿ, ಭಕ್ತಿ ಸಿಂಚನ ಹರಿಸಿದರು. ಮಹದೇಶ್ವರನ ಸ್ಮರಣೆ ವೇಳೆ 'ಡೆನ್ನಾನ ಡೆನ್ನಾನ.. ಎಂದು ತುಳುನಾಡ ದೈವಸ್ಮರಣೆ ಮಾಡಿದರು. ಯುವಸಮೂಹ ಒನ್ಸ್‌ಮೋರ್ ಎಂದು ಒತ್ತಾಯಿಸಿ, ಮತ್ತೊಮ್ಮೆ ಹಾಡಿಸಿದರು.


'ಒಳ್ಳೇದವ್ವ ನಿನ್ನ ಪಿರುತಿ...ಎಲ್ಲಿ ಕಾಣ್ ಎಲ್ಲಿ ಕಾಣೆನೆ ನಮ್ಮವ್ವ...' ಹಾಡುವಾಗ ಪ್ರೇಕ್ಷಕರು ಚಪ್ಪಾಳೆ ತಾಳ ಸೇರಿಸಿ, ಸಂಭ್ರಮಿಸಿದರು. ಮೈಸೂರು ಅನಂತಸ್ವಾಮಿ ಅವರು ರಾಗ ಸಂಯೋಜಿಸಿ ಹಾಡಿರುವ 'ಎದೆ ತುಂಬಿ ಹಾಡುವೆನು ಇಂದು ನಾನು...' ಸಾಲುಗಳನ್ನು ಹಾಡಿ, ಎಲ್ಲರನ್ನೂ ಭಾವಯಾನದಲ್ಲಿ ತೇಲಿಸಿದರು. ವೇದಿಕೆಯಿಂದ ಕೆಳಗಿಳಿದು ಪ್ರೇಕ್ಷಕರ ಬಳಿ ಬಂದು 'ಬಾಳ ಬಂಗಾರ ನೀನು, ಹಣೆಯ ಸಿಂಗಾರ ನೀನು.' ಗೀತೆಯನ್ನು ಹಾಡಿದಾಗ ಪ್ರೇಕ್ಷಕರ ಉದ್ಗಾರ ಮುಗಿಲುಮುಟ್ಟಿತ್ತು. 'ಬೊಂಬೆ ಹೇಳುತೈತೆ...' ಹಾಡಿನ ಮೂಲಕ ದಿವಂಗತ ಪುನೀತ್ ರಾಜ್‌ಕುಮಾರ್ ಅವರನ್ನು ನೆನೆದರು. 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು... ಕಲಿಯೋಕೆ ಕೋಟಿಭಾಷೆ ಆಡೋಕೆ ಒಂದೆ ಭಾಷೆ ಕನ್ನಡ ಕನ್ನಡ....' ಸಾಲುಗಳ ಮೂಲಕ ಗಾಯನಯಾನಕ್ಕೆ ವಿರಾಮ ನೀಡಿದರು.

ಇದೇ ವೇಳೆ ಎರಡೂವರೆ ದಶಕಗಳಿಂದ ನಾನು ಹಲವು ವೇದಿಕೆಗಳಲ್ಲಿ ಹಾಡಿದ್ದೇನೆ. ಆದರೆ ಈಗ ದೇವರ ಕೃಪೆಯಿಂದ ಅರಮನೆ ಮುಂಭಾಗದ ವೇದಿಕೆಯಲ್ಲಿ ಹಾಡುವ ಅವಕಾಶ ಸಿಕ್ಕಿದೆ ಎಂದು ಸಂತಸ ವ್ಯಕ್ತಪಡಿಸಿದ ಸಿಂಚನ್, ಗಾಯನಕ್ಕೆ ಅತ್ಯಮೋಘವಾಗಿ ವಾದ್ಯ ಸಹಕಾರ ನೀಡಿದ ವೆಂಕಿ, ಮಹೇಂದ್ರ, ಕೃಷ್ಣ, ನವೀನ್, ರಾನಿ, ವರುಣ್ ಪ್ರದೀಪ್, ಅಶ್ವಿನ್, ನೀತು ಅವರನ್ನು ಪ್ರೇಕ್ಷಕರಿಗೆ ಪರಿಚಯಿಸಿದರು.

ಸಿತಾರ್ ಮೋಡಿ: ಅಂತಾರಾಷ್ಟ್ರೀಯ ಖ್ಯಾತಿಯ ನೀಲಾದ್ರಿ ಕುಮಾರ್ ಅವರ ಸಿತಾರ್ ಫ್ಯೂಷನ್ ಪ್ರಸ್ತುತಿ ಸಂಗೀತ ಲೋಕವನ್ನೇ ಸೃಷ್ಟಿಸಿತ್ತು. ಮಿಂಚಿನ ವೇಗದ ಬೆರಳುಗಳ ನರ್ತನದಿಂದ ಹೊರಹೊಮ್ಮಿದ ಸಂಗೀತ ಕಾರಂಜಿ ಕೇಳುಗರಿಗೆ ಮುದ ನೀಡಿತು. ಲೂಯಿಜ್ ಬ್ಯಾಂಕ್ಸ್, ಸತ್ಯಜಿತ್ ತಲ್ವಾಲ್ಕರ್, ಹೃಷಿಕೇಶ್ ಮಜುಂದಾರ್, ಶಿಖರ್‌ನಾಥ್ ಖುರೇಶಿ ವಾದ್ಯ ಸಹಕಾರ ನೀಡಿದರು. ಡ್ರಮ್ಸ್, ತಬಲ, ಬಾನ್ಸುರಿ, ಪಿಯಾನೋ ಕೀಬೋರ್ಡ್ ಇನ್ನಿತರ ವಾದ್ಯ ಸಂಗೀತದೊಂದಿಗೆ ನೀಲಾದ್ರಿ ಕುಮಾರ್ ಅವರ ಸಿತಾರ್ ವಾದನದಿಂದ ಚಿಮ್ಮಿದ ಸಂಗೀತ ಕಾರಂಜಿಯನ್ನು ಕಲಾಪ್ರೇಮಿಗಳು ಅತ್ತಿತ್ತ ಕದಲದೆ ಆಸ್ವಾದಿಸಿದರು. ಇದಕ್ಕೂ ಮುನ್ನ ವಿದ್ವಾನ್ ಜಗದೀಶ್ ನೇತೃತ್ವದ ನಾದಸ್ವರ ಪ್ರಸ್ತುತಿ ಹಾಗೂ ಬೆಂಗಳೂರಿನ ಬೆನಕ ನಾಟ್ಯ ಮಂದಿರ ತಂಡದ ನೃತ್ಯರೂಪಕ ಅತ್ಯಾಕರ್ಷಕವಾಗಿತ್ತು. ಚಂದನ ವಾಹಿನಿಯ ಶ್ರೀನಿವಾಸ್ ಹಾಗೂ ಅನುಷಾ ಇಂದಿನ ಕಾರ್ಯಕ್ರಮ ನಿರೂಪಿಸಿದರು.



ಅರಮನೆ ಆವರಣದಲ್ಲಿ ಶನಿವಾರ ಸಂಗೀತ ಪ್ರೇಮಿಗಳಿಗೆ ಸಂಗೀತ ರಸದೌತಣ ನೀಡಿದ ನೀಲಾದ್ರಿ ಕುಮಾರ್ ಅವರ ಸಿತಾರ್ ಫ್ಯೂಷನ್ ಪ್ರಸ್ತುತಿ.



ಸಿಂಚನ್(ಫೈಲ್‌ಚಿತ್ರ)

ಮಕ್ಕಳು, ಹಿರಿಯರ ಬಗ್ಗೆ ನಿಗಾ ಇರಲಿ...

ಅರಮನೆ ಆವರಣದಲ್ಲಿ ಶನಿವಾರ ಜನಸಾಗರವೇ ನೆರೆದಿತ್ತು. ಜನಸಂದಣಿಯಲ್ಲಿ ಎರಡೂವರೆ ವರ್ಷದ ಪುಟ್ಟ ಮಗು, ಚಾಮರಾಜನಗರದ ಸುಮಾರು 10 ವರ್ಷದ ಬಾಲಕಿ ಅಮೀನಾ, ಹಿರಿಯರಾದ ಲಕ್ಷ್ಮೀ ಹಾಗೂ ಹೊರರಾಜ್ಯದ ಗೌರಿಗುಪ್ತಾ ಎಂಬುವವರು ತಮ್ಮವರಿಂದ ಬೇರ್ಪಟ್ಟಿದ್ದರು. ಆತಂಕದಲ್ಲಿದ್ದ ಪೊಲೀಸರ ನೆರವು ಕೇಳಿದಾಗ ಅವರನ್ನು ವೇದಿಕೆ ಬಳಿ ಕರೆತಂದು ನಿರೂಪಕರ ಮೂಲಕ ಪ್ರಕಟಣೆ ಮಾಡಿಸಲಾಯಿತು. ನಂತರ ಅವರ ಕುಟುಂಬದವರು ಬಂದು ಕರೆದುಕೊಂಡು ಹೋದರು. ಆದರೆ ರಸ್ತೆಯಲ್ಲೋ ಅಥವಾ ಬೇರೆ ಯಾವುದೋ ಸ್ಥಳದಲ್ಲಿ ಈ ರೀತಿ ಬೇರ್ಪಟ್ಟರೆ ತುಂಬಾ ಕಷ್ಟವಾಗುತ್ತದೆ. ಅತೀವ ವಾಹನ ದಟ್ಟಣೆ, ಜನಸಂದಣಿಯಲ್ಲಿ ದಿಕ್ಕು ತೋಚದಂತಾಗಿ ಕಣ್ಣೀರಿಡಬೇಕಾಗುತ್ತದೆ. ಆದ್ದರಿಂದ ಹಿರಿಯರು ಹಾಗೂ ಮಕ್ಕಳ ಬಗ್ಗೆ ನಿಗಾ ವಹಿಸುವುದು ಒಳ್ಳೆಯದು.

ಯೋಗದ ಮಹತ್ವ ಸಾರಿದ ಸಾವಿರಾರು ಯೋಗ ಪಟುಗಳು

ಯೋಗವನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಿದ ಕೀರ್ತಿ ಮೈಸೂರಿಗೆ

ಮೈಸೂರು,ಸೆ.27(ಜಿಎ)-ಯೋಗ ದಸರಾ ಉಪ ಸಮಿತಿ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ವಿವಿಧ ವಯೋಮಾನದ 2 ಸಾವಿರ ಸ್ಪರ್ಧಿಗಳು ಭಾಗವಹಿಸುವ ಮೂಲಕ ಯೋಗದ ಮಹತ್ವ ಸಾರಿದರು.

ಮೈಸೂರಿನ ವಸ್ತುಪ್ರದರ್ಶನದ ಆವರಣದಲ್ಲಿರುವ ಪಿ.ಕಾಳಿಂಗರಾವ್ ಸಭಾಂಗಣದಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆಗೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಯೋಗವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಸ್ತಾರಗೊಳಿಸಿದ ಕೀರ್ತಿ ಮೈಸೂರಿಗೆ ಸಲ್ಲುತ್ತದೆ. ದಕ್ಷಿಣ ಭಾರತದ ಮೈಸೂರು ವಿಶ್ವ ರಾಜಧಾನಿ ಎಂದು ಗುರುತಿಸಲ್ಪಟ್ಟಿದೆ. ರಾಜಮನೆತನದ ಗತಕಾಲವನ್ನು ಹೊಂದಿರುವ ಮೈಸೂರು ನಗರವು ಯೋಗ ಅಭ್ಯಾಸವನ್ನು ಮಾಡಲು ಬರುವ ಯೋಗ ಆಸಕ್ತರಿಗೆ ಜನಪ್ರಿಯ ತಾಣವಾಗಿದೆ. ಯೋಗವನ್ನು ನಾನು ಅಭ್ಯಾಸ ಮಾಡುತ್ತಿದ್ದೇನೆ ಮುಂದಿನ ದಸರಾದಲ್ಲಿ ಯೋಗ ಪ್ರದರ್ಶನ ಮಾಡಲು ಪ್ರಯತ್ನಿಸುತ್ತೇನೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಯೋಗ ದಸರಾ ಉಪ ಸಮಿತಿಯ ಅಧ್ಯಕ್ಷ ಎನ್. ನಾಗೇಶ್ ಮಾತನಾಡಿ, ದಸರಾ ರಾಜ್ಯ ಮಟ್ಟದ ಯೋಗ ಸ್ಪರ್ಧೆಯಲ್ಲಿ 2000 ಸ್ಪರ್ಧಾರ್ಥಿಗಳು ಭಾಗವಹಿಸಿದ್ದಾರೆ. ಯೋಗ ಮಾಡುವುದು ದೇಹದ ಕಸರತ್ತಿಗಲ್ಲ. ಬದಲಾಗಿ ಮಾನಸಿಕ ನೆಮ್ಮದಿ ಹಾಗೂ ಏಕಾಗ್ರತೆ, ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ. ಯೋಗ ದಸರಾ ಸ್ಪರ್ಧೆ ಕೇವಲ ಸ್ಪರ್ಧೆಯಾಗಿರುವುದಿಲ್ಲ ಉತ್ತಮ ಆರೋಗ್ಯ ಸಮತೋಲನ ಕಾಪಾಡಿಕೊಳ್ಳುವ ಸಂದೇಶವನ್ನು ಸಾರುತ್ತದೆ ಎಂದು ತಿಳಿಸಿದರು.

2 ಸಾವಿರ ಯೋಗಪಟುಗಳು : ಸ್ಪರ್ಧೆಯಲ್ಲಿ 10 ರಿಂದ 12 ವರ್ಷದ ವಯೋಮಿತಿಯಲ್ಲಿ 385 ಸ್ಪರ್ಧಿಗಳು, 12 ರಿಂದ 14 ವರ್ಷದ ವಯೋಮಿತಿಯಲ್ಲಿ 361 ಸ್ಪರ್ಧಿಗಳು, 14 ರಿಂದ 18 ವರ್ಷದ ವಯೋಮಿತಿಯಲ್ಲಿ 219 ಸ್ಪರ್ಧಿಗಳು, 21 ರಿಂದ 32 ವರ್ಷ ವಯೋಮಿತಿಯಲ್ಲಿ 94 ಸ್ಪರ್ಧಿಗಳು, 35 ರಿಂದ 45 ವರ್ಷದ ವಯೋಮಿತಿಯಲ್ಲಿ 138 ಸ್ಪರ್ಧಿಗಳು, 45 ರಿಂದ 50 ವರ್ಷದ ವಯೋಮಿತಿಯಲ್ಲಿ 106 ಸ್ಪರ್ಧಿಗಳು, 55 ರಿಂದ 65 ವರ್ಷದ ವಯೋಮಿತಿಯಲ್ಲಿ 49 ಸ್ಪರ್ಧಿಗಳು, 65 ವರ್ಷ ಮೇಲ್ಪಟ್ಟವರು 42 ಸ್ಪರ್ಧಿಗಳು, ವಿಶೇಷಚೇತನ ವಿಭಾಗದಲ್ಲಿ 27 ಸ್ಪರ್ಧಿಗಳು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಸಮಿತಿಯ ಉಪ ವಿಶೇಷಾಧಿಕಾರಿ ಕೆ.ರಮ್ಯ, ಸಮಿತಿಯ ಕಾರ್ಯಾಧ್ಯಕ್ಷ ನಿರೂಪ್ ವೆಸ್ಲಿ, ಸಹ ಕಾರ್ಯಾಧ್ಯಕ್ಷೆ ಶಿಲ್ಪ, ರೇಣುಕಾದೇವಿ, ಉಪ ಸಮಿತಿಯ ಉಪಾಧ್ಯಕ್ಷರುಗಳಾದ ಪ್ರಸಾದ್ ನಾಡನಹಳ್ಳಿ, ನಂಜುಂಡಸ್ವಾಮಿ, ಕೆ.ಜಿ.ದೇವರಾಜ್, ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.



ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಯೋಗದ ಮಹತ್ವ ಸಾರಿದ ಮಕ್ಕಳು

ಮೈಸೂರು ಮಿತ್ರ ಭಾನುವಾರ 28 ಸೆಪ್ಟೆಂಬರ್ 2025

ಚೌಟಿಮಾರಿಯಮ್ಮ ದೇವಾಲಯದ ವಾರ್ಷಿಕೋತ್ಸವ



ಶ್ರೀ ಚೌಟಿಮಾರಿಯಮ್ಮ ದೇವಾಲಯದ ವಾರ್ಷಿಕೋತ್ಸವವು ಶ್ರದ್ಧಾಭಕ್ತಿಯಿಂದ ಜರುಗಿತು.

ಮಡಿಕೇರಿ, ಸೆ.27–ನಗರದ ನಾಲ್ಕು ಶಕ್ತಿ ದೇವತೆಗಳಲ್ಲಿ ಒಂದಾದ ಕುಂದುರುಮೊಟ್ಟೆ ಶ್ರೀ ಚೌಟಿಮಾರಿಯಮ್ಮ ದೇವಾಲಯದ ಪುನರ್ ಪ್ರತಿಷ್ಠಾಪನೆಯ 22ನೇ ವಾರ್ಷಿಕೋತ್ಸವವು ಶ್ರದ್ಧಾಭಕ್ತಿಯಿಂದ ಜರುಗಿತು.

ಮುಂಜಾನೆಯಿಂದ ಚಂಡಿಕಾ ಹೋಮ, ಮಧ್ಯಾಹ್ನ ಪೂರ್ಣಾಹುತಿ ಹಾಗೂ ಮಹಾ ಮಂಗಳಾರತಿ ಹಾಗೂ ತೀರ್ಥಪ್ರಸಾದ ವಿನಿಯೋಗ ನೆರವೇರಿತು. ಸಂಜೆ ವಾರ್ಷಿಕೋತ್ಸವ ಪ್ರಯುಕ್ತ ಗುರು ಗಣಪತಿ ಪೂಜೆ, ಪುಣ್ಯಾಹ, ಸಂಕಲ್ಪ, ಕಳಶಸ್ಥಾಪನೆ, ದೀಪಾರಾಧನೆ, ಅಷ್ಠಾವಧಾನ ಸೇವೆ ಹಾಗೂ ತೀರ್ಥಪ್ರಸಾದ ವಿತರಿಸಲಾಯಿತು. ನಂತರ ಗುರುಗಣಪತಿ ಪೂಜೆ, ಪುಣ್ಯಾಹ, ಗಣಪತಿ ಹೋಮ, ಕಲಾಹೋಮ, ತತ್ವಹೋಮ, ತತ್ವ ಶಾಂತಿ ಹೋಮ, ದುರ್ಗಾ ಹೋಮ, ತತ್ವಕಲಶಾಭಿಷೇಕ, ಮಹಾಪೂಜೆ, ತೀರ್ಥ ಪ್ರಸಾದ ವಿನಿಯೋಗ ನಡೆಯಿತು.

ಪಶ್ಚಿಮಘಟ್ಟದ ಜೀವವೈವಿಧ್ಯತೆ ಉಳಿಸಿ–ಬೆಳೆಸಿ



ಸಂಶೋಧನಾ ಸಂಸ್ಥೆಯ ಮಾಹಿತಿ ಅಧಿಕಾರಿ ರೆನಿಟಮೆಥ್ಯೆಯಿಸ್ ಮಾತನಾಡುತ್ತಿರುವುದು

ಮಡಿಕೇರಿ, ಸೆ.27–ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಗೆ ಕೈಜೋಡಿಸುವ ಮೂಲಕ ಪಶ್ಚಿಮಘಟ್ಟದ ಜೀವವೈವಿಧ್ಯತೆಯನ್ನು ಉಳಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕೆಂದು ರಾಜ್ಯ ಪರಿಸರ ನಿರ್ವಹಣೆ ಹಾಗೂ ನೀತಿಶಾಸ್ತ್ರ ಸಂಶೋಧನಾ ಸಂಸ್ಥೆಯ ಮಾಹಿತಿ ಅಧಿಕಾರಿ ರೆನಿಟ ಮೆಥ್ಯೆಯಿಸ್ ತಿಳಿಸಿದ್ದಾರೆ.

ನಗರದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜ್‌ನಲ್ಲಿ ಪ್ರಾಣಿಶಾಸ್ತ್ರ ವಿಭಾಗ ಮತ್ತು ಕರ್ನಾಟಕ ಪರಿಸರ ನಿರ್ವಹಣೆ ಹಾಗೂ ನೀತಿ ಶಾಸ್ತ್ರ ಸಂಶೋಧನಾ ಸಂಸ್ಥೆಯ ಸಹಯೋಗದಲ್ಲಿ 'ಹವಮಾನ ಬದಲಾವಣೆ ಮತ್ತು ಪಶ್ಚಿಮ ಘಟ್ಟದ ಜೀವವೈವಿಧ್ಯತೆ' ಕುರಿತು ನಡೆದ ಕಾರ್ಯಾಗಾರ ಉದ್ಘಾಟಿಸಿದ ಅವರು, ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆಗೆ ಮುಂದಾಗಿ ಇತರರಲ್ಲೂ ಜಾಗೃತಿ ಮೂಡಿಸಬೇಕು. ಪರಿಸರದ ಬಗ್ಗೆ ಹೆಚ್ಚಿನ ಅರಿವು ಮೂಡಿಸಿ ಪರಿಸರ ರಾಯಭಾರಿಗಳನ್ನಾಗಿ ಮಾಡಬೇಕು ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಮೇಜರ್ ಬಿ.ರಾಘವ ಮಾತನಾಡಿ ಮಾನವನು ಆಧುನಿಕತೆಯ ಹೆಸರಿನಲ್ಲಿ ಹಲವು ಕಾರಣಗಳನ್ನು ನೀಡಿ ನಿಸರ್ಗವನ್ನು ಅತಿಕ್ರಮಣ ಮಾಡುತ್ತಿದ್ದಾನೆ. ವಿವಿಧ ಯೋಜನೆಗಳು, ರೆಸಾರ್ಟ್, ಸಂಸ್ಕೃತಿ, ವಾಣಿಜ್ಯ ಬೆಳೆಗಳ ಸಂರಕ್ಷಣೆಗಾಗಿ ಬಳಸುವ ವಿಷಕಾರಿ ಕೀಟನಾಶಕಗಳು, ಪ್ಲಾಸ್ಟಿಕ್ ಬಳಕೆ, ವಸತಿ ಪ್ರದೇಶಗಳ ವಿಸ್ತರಣೆಗಳೆಲ್ಲವೂ ಪರಿಸರ ಮತ್ತು ಜೀವ ವೈವಿಧ್ಯತೆಯ ನಾಶಕ್ಕೆ ಕಾರಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡಿದ್ದ ಮೈಸೂರು ಹಸಿರು ಹೆಜ್ಜೆ ಸಂಸ್ಥೆಯ ಮನು ಕೃಷ್ಣಮೂರ್ತಿ ಮಾತನಾಡಿ, ಪಶ್ಚಿಮಘಟ್ಟದ ಕಾಡುಗಳು, ಅಲ್ಲಿನ ಜೀವ ವೈವಿಧ್ಯತೆ, ಮಳೆ ಮತ್ತು ನೀರಿನ ಚಕ್ರದ ಬದಲಾವಣೆ, ಕಾಡುಗಳ ನಾಶ, ಸಸ್ಯ ಹಾಗೂ ಪ್ರಾಣಿಗಳ ಸಂತಾನೋತ್ಪತ್ತಿ ಬದಲಾವಣೆ, ಭೌಗೋಳಿಕ ಅಸಮತೋಲನ, ಪರಿಸರ ಮತ್ತು ಸ್ಥಳೀಯ ಪ್ರಬೇಧಗಳ ಸಂರಕ್ಷಣೆ ಕುರಿತು ಜಾಗೃತಿಯ ಸಂದೇಶ ನೀಡಿದರು.

ಕಾರ್ಯಕ್ರಮದ ಸಂಯೋಜಕ ಡಾ.ಎಂ.ವಿ.ಕೃಷ್ಣ, ಬೋಧಕ, ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕೆಸರಿನಲ್ಲಿ ಬಸ್: ಪ್ರಯಾಣಿಕರ ಪರದಾಟ



ಮಡಿಕೇರಿ,ಸೆ.27–ಮಳೆಯಿಂದ ಉಂಟಾದ ಕೆಸರಿನಲ್ಲಿ ಖಾಸಗಿ ಬಸ್ ಒಂದು ಸಿಲುಕಿಕೊಂಡು ಒಳಗಿದ್ದ ಪ್ರಯಾಣಿಕರು ಪರದಾಡಿದ ಘಟನೆ ಮಡಿಕೇರಿ–ಕತ್ತಲೆಕಾಡು–ಮರಗೋಡು ರಸ್ತೆಯಲ್ಲಿ ನಡೆದಿದೆ.

ಈ ರಸ್ತೆಯಲ್ಲಿ ಮೋರಿ ನಿರ್ಮಿಸಲೆಂದು ರಸ್ತೆಯನ್ನು ಅಗೆಯಲಾಗಿತ್ತು. ನಿನ್ನೆ ರಾತ್ರಿ ಮಳೆ ಸುರಿದ ಹಿನ್ನೆಲೆಯಲ್ಲಿ ರಸ್ತೆ ಕೆಸರಿನ ಕೊಂಪೆಯಾಗಿತ್ತು. ಇದರ ಅರಿವಿಲ್ಲದೆ ಚಾಲಕರು ಈ ರಸ್ತೆಯಲ್ಲಿ ಬಂದ ಪರಿಣಾಮ ಮೋರಿ ಅಳವಡಿಸಲು ರಸ್ತೆ ಅಗೆದ ಜಾಗದಲ್ಲೇ ಮುಂದಿನ ಚಕ್ರ ಹುದುಗಿ ಕೊಂಡಿದ್ದು, ಚಾಲಕ ಎಷ್ಟೇ ಪ್ರಯತ್ನ ಮಾಡಿದರೂ ಬಸ್ ಮಾತ್ರ ಮೇಲೆ ಬರಲಿಲ್ಲ. ಇದರಿಂದ ಬಸ್‌ನಲ್ಲಿದ್ದ ಪ್ರಯಾಣಿಕರು ತಮ್ಮ ಕೆಲಸ ಕಾರ್ಯಗಳಿಗೆ ತೆರಳಲಾಗದೆ ಪರದಾಡುವಂತಾಯಿತು. ಮಾತ್ರವಲ್ಲದೇ ಈ ರಸ್ತೆಯಲ್ಲಿ ಬೇರೆ ಯಾವುದೇ ವಾಹನಗಳು ಓಡಾಡಲು ಸಾಧ್ಯವಾಗದೇ ರಸ್ತೆ ಸಂಚಾರ ಬಂದ್ ಆಗಿತ್ತು ಬಳಿಕ ಪಿಕ್‌ಅಪ್ ಜೀಪ್ ಸಹಾಯದಿಂದ ಬಸ್ ಅನ್ನು ಮೇಲೆತ್ತಲಾಯಿತು.

ಮಹಿಳಾ ಸಮಾಜದ ವಾರ್ಷಿಕ ಮಹಾಸಭೆ



ವಾರ್ಷಿಕ ಮಹಾಸಭೆ ಉಪಸ್ಥಿತರಿದ್ದ ಸದಸ್ಯರು.

ನಾಪೋಕ್ಲು, ಸೆ.27– ಸ್ಥಳೀಯ ಸಹಕಾರ ಮಹಿಳಾ ಸಮಾಜ ವಾರ್ಷಿಕ ಮಹಾಸಭೆ ಸಮಾಜದ ಅಧ್ಯಕ್ಷ ಕುಂಚೆಟ್ಟಿರ ರೇಷ್ಮಾ ಉತ್ತಪ್ಪ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ನಮ್ಮಲ್ಲಿ ಒಟ್ಟು 350 ಸದಸ್ಯರಿದ್ದು ಸಂಬಂಧಿಸಿದ ಇಲಾಖೆಗಳ ನಿರ್ದೇಶನಗಳನ್ನು ಪಾಲಿಸಿಕೊಂಡು ನೂತನ ಸದಸ್ಯರನ್ನು ಸೇರ್ಪಡೆಗೊಳ್ಳಲಾಗುತ್ತಿದೆ. ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಎಲ್ಲರ ಸಲಹೆ ಸಹಕಾರ ಅವಶ್ಯ. ಈ ನಿಟ್ಟಿನಲ್ಲಿ ಎಲ್ಲರೂ ಸಹಕರಿಸುವಂತೆ ಮಹಿಳಾ ಸಮಾಜದ ಅಧ್ಯಕ್ಷ ಕುಂಚೆಟ್ಟಿರ ರೇಷ್ಮಾ ಉತ್ತಪ್ಪ ಹೇಳಿಕೊಂಡರು. ಸಮಾಜದ ಸದಸ್ಯರಿಗೆ ಮನರಂಜನೆ ಹಾಗೂ ಸ್ಪರ್ಧಾ ಕಾರ್ಯಕ್ರಮ ಏರ್ಪಡಿಸಿ ನೆನಪಿನ ಕಾಣಿಕೆ ನೀಡಿ ಶುಭ ಹಾರೈಸಲಾಯಿತು.

ಕಾರ್ಯಕ್ರಮದಲ್ಲಿ ಸಹಕಾರ ಮಹಿಳಾ ಸಮಾಜ ಉಪಾಧ್ಯಕ್ಷೆ ಬೊಪ್ಪಂಡ ಶೈಲಾ ಬೋಪಯ್ಯ, ನಿರ್ದೇಶಕರಾದ ಬಿದ್ದಾಟಂಡ ಗಿರಿಜಾ ಬೋಪಣ್ಣ, ಕೇಟೋಳಿರ ಶಾರದಾ ಪಳಂಗಪ್ಪ, ಬೊಪ್ಪಂಡ ಬೊಳ್ಳಮ್ಮ ನಾಣಯ್ಯ, ಕುಂಡ್ಯೋಳಂಡ ಕವಿತಾ ಮುತ್ತಣ್ಣ, ಅಪ್ಪಾರಂಡ ಡೇಸಿ ತಿಮ್ಮಯ್ಯ, ಪುಲ್ಲೆರ ಪದ್ಮಿನಿ ಭೀಮಯ್ಯ, ಕಾರ್ಯದರ್ಶಿ ಕೆ ಎಚ್ ರಾಜೇಶ್ವರಿ ಲೋಕೇಶ್ ಹಾಗೂ ಸಮಾಜದ ಸದಸ್ಯರು ಉಪಸ್ಥಿತರಿದ್ದರು.

ಮಾಲೀಕರ ಸಂಘದಿಂದ ಆಯುಧ ಪೂಜೆ



ಆಟೋ ಚಾಲಕರ ಮತ್ತು ಮಾಲೀಕರ ಸಂಘದ ಅಧ್ಯಕ್ಷ ಟಿ.ಪಿ ಸುಕುಮಾರ್ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು

ನಾಪೋಕ್ಲು, ಸೆ.27– ನಾಲ್ಕು ನಾಡು ಆಟೋ ಚಾಲಕರ ಮತ್ತು ಮಾಲೀಕರ ಸಂಘ ಹಾಗೂ ವಾಹನ ಚಾಲಕರ ಸಂಘದ ವತಿಯಿಂದ 33ನೇ ವರ್ಷದ ಅದ್ದೂರಿ ಆಯುಧ ಪೂಜೆ ಸಮಾರಂಭವನ್ನು ಅ. ಒಂದರಂದು ಮಾರುಕಟ್ಟೆ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ನಾಲ್ಕು ನಾಡು ಆಟೋ ಚಾಲಕರ ಮತ್ತು ಮಾಲೀಕರ ಸಂಘದ ಅಧ್ಯಕ್ಷ ಟಿ.ಪಿ ಸುಕುಮಾರ್ ಹೇಳಿದರು.

ಆಯುಧ ಪೂಜೆ ಅಂಗವಾಗಿ ಮಧ್ಯಾಹ್ನ 2 ಗಂಟೆಗೆ ಹಳೆ ತಾಲೂಕಿನಿಂದ ಅಲಂಕೃತ ವಾಹನಗಳ ಮೆರವಣಿಗೆ ನಡೆಯಲಿದೆ. ನಾಲ್ಕು ಗಂಟೆಗೆ ಮಾರುಕಟ್ಟೆ ಆವರಣದಲ್ಲಿ ವಾಹನಗಳ ಸಾಮೂಹಿಕ ಆಯುಧ ಪೂಜೆ ನಡೆಯಲಿದೆ ಎಂದರು. ಸೈಕಲ್, ದ್ವಿಚಕ್ರ, ತ್ರಿಚಕ್ರ, ನಾಲ್ಕು ಚಕ್ರ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಸ್ಪರ್ಧೆ ಆಯೋಜಿಸಲಾಗಿದ್ದು ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನವನ್ನು ಸಂಘದ ವತಿಯಿಂದ ವಿತರಿಸಲಾಗುವುದು ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಂಜೆ 6 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದೆ. ನಾಲ್ಕು ನಾಡು ಆಟೋ ಚಾಲಕರ ಮತ್ತು ಮಾಲೀಕರ ಸಂಘದ ಅಧ್ಯಕ್ಷ ಟಿ.ಪಿ ಸುಕುಮಾರ್ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದ್ದು ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು, ಶಾಸಕರು ಆಗಿರುವ ಎ.ಎಸ್. ಪೊನ್ನಣ್ಣ, ಗ್ರಾಪಂ ಅಧ್ಯಕ್ಷೆ ವನಜಾಕ್ಷಿ ರೇಣುಕೇಶ್ ಸೇರಿದಂತೆ ಇನ್ನಿತರ ಹಲವಾರು ಗಣ್ಯರು ಉಪಸ್ಥಿತರಿರುವರು ಎಂದರು.

ಸಭಾ ಕಾರ್ಯಕ್ರಮದ ಬಳಿಕ ಭದ್ರಾವತಿ ಬ್ರದರ್ಸ್ ಸೌಂಡ್ಸ್ ಲೈಟಿಂಗ್ಸ್ ಅಂಡ್ ಈವೆಂಟ್ಸ್ ವತಿಯಿಂದ ಮನೋರಂಜನಾ ಕಾರ್ಯಕ್ರಮ ಹಾಗೂ ಉತ್ತಮ ಸೇವೆ ಸಲ್ಲಿಸಿದ ಆಟೋ ಚಾಲಕರಿಗೆ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಸತೀಶ್, ಖಜಾಂಚಿ ಚೇತನ್, ಗೌರವ ಅಧ್ಯಕ್ಷ ರಜಾಕ್ ಸದಸ್ಯರಾದ ಮಿಥುನ್, ದೀಪು, ಸೋಮಣ್ಣ ಉಪಸ್ಥಿತರಿದ್ದರು.

ಬಸ್ ಕಾರ್ಮಿಕರ ಸಂಘದಿಂದ ಸಾಮೂಹಿಕ ಆಯುಧ ಪೂಜೆ



ಕುಂಬೇಯಂಡ ಸುರೇಶ್‌ದೇವಯ್ಯ ಪತ್ರಿಕಾಗೋಷ್ಠಿನ್ನುದ್ದೇಶಿಸಿ ಮಾತನಾಡಿದರು

ವಿರಾಜಪೇಟೆ, ಸೆ.27– ಕೊಡಗು ಖಾಸಗಿ ಬಸ್ ಕಾರ್ಮಿಕರ ಸಂಘದಿಂದ 18ನೇ ವರ್ಷದ ಆಯುಧ ಪೂಜೆ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮವನ್ನು ಅ. 4 ರಂದು ನಡೆಸಲಾಗುವುದು ಎಂದು ಸಂಘದ ಅಧ್ಯಕ್ಷ ಕುಂಬೇಯಂಡ ಸುರೇಶ್‌ದೇವಯ್ಯ ಹೇಳಿದರು.

ಪ್ರತಿವರ್ಷ ಸಾಮೂಹಿಕ ಆಯುಧ ಪೂಜೆಯನ್ನು 8 ವರ್ಷದಿಂದ ಅದ್ದೂರಿಯಾಗಿ ಆಚರಣೆ ಮಾಡಲಾಗುತ್ತಿದ್ದು, ಪೂರ್ವಾಹ್ನ 10 ಗಂಟೆಗೆ ಸಂಘದ ಕಚೇರಿಯಲ್ಲಿ ಸಾಮೂಹಿಕ ಆಯುಧ ಪೂಜೆ, 10.30 ಗಂಟೆಗೆ ಸ್ಥಳೀಯ ಪ್ರತಿಭೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. 1 ಗಂಟೆಗೆ ಸಾರ್ವಜನಿಕ ಅನ್ನ ಸಂತರ್ಪಣೆ, 3 ಗಂಟೆಗೆ ಪ್ರಖ್ಯಾತ ಬೈಕ್ ಸವಾರರಿಂದ ಸಾಹಸ ಪ್ರದರ್ಶನ, ವಿರಾಜಪೇಟೆ ನಾಟ್ಯಾಂಜಲಿ ನೃತ್ಯ ಮಂಡಳಿಯವರಿಂದ ಭಜನೆ ಹಾಗೂ ಕುಣಿತ, 6.30 ಸಂಗೀತ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. ಸಂಜೆ 7 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಸಮಾರೋಪ ಸಮಾರಂಭದಲ್ಲಿ ಹಿರಿಯ ಬಸ್‌ಕಾರ್ಮಿಕರು, ಸಮಾಜ ಸೇವಕರು ಹಾಗು ಪ್ರತಿಭಾವಂತ ಬಸ್ ಕಾರ್ಮಿಕರ ಮಕ್ಕಳನ್ನು ಸನ್ಮಾನಿಸಲಾಗುವುದು ಎಂದು ಕಾರ್ಯದರ್ಶಿ ವಿನೋದ್ ಜೆ.ಸಿ.ಬಿ ತಿಳಿಸಿದರು.

ಗೋಷ್ಠಿಯಲ್ಲಿ ಖಜಾಂಚಿ ದಿನೇಶ್ ನಾಯರ್ ಉಪಸ್ಥಿತರಿದ್ದರು.

ಅ.7, ಮಹರ್ಷಿ ವಾಲ್ಮೀಕಿ ಜಯಂತಿ

ಮಡಿಕೇರಿ, ಸೆ.27– ಜಿಲ್ಲಾಡಳಿತ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿಯು ಅ.7 ರಂದು ನಗರದ ಗಾಂಧಿ ಭವನದಲ್ಲಿ ನಡೆಯಲಿದೆ.



ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಮುಂತಾದ ಗಣ್ಯರು ಭಾಗವಹಿಸಲಿದ್ದಾರೆ ಎಂದು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಸಮನ್ವಯಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೆಸಿಬಿ – ಸಾರಿಗೆ ಬಸ್ ಡಿಕ್ಕಿ: 7 ಮಂದಿ ಹೋಂ ಗಾರ್ಡ್‌ಗಳಿಗೆ ಗಾಯ

ಮಡಿಕೇರಿ: ಮಡಿಕೇರಿ–ಕುಶಾಲನಗರ ಹೆದ್ದಾರಿಯ ಸೈರಸ್ ಆಸ್ಪತ್ರೆ ಮುಂಭಾಗ ಜೆಸಿಬಿ ಹಾಗೂ ಸಾರಿಗೆ ಬಸ್ ನಡುವೆ ಮುಖಾಮುಖಿ ಅಪಘಾತ ಸಂಭವಿಸಿ ಹೋಂ ಗಾರ್ಡ್‌ಗಳು ಸೇರಿದಂತೆ ಹಲವು ಮಂದಿ ಗಾಯಗೊಂಡಿರುವ ಘಟನೆ ನಡೆದಿದೆ.



ಮಡಿಕೇರಿಯತ್ತ ತೆರಳುತ್ತಿದ್ದ ಸಾರಿಗೆ ಬಸ್‌ಗೆ ಕುಶಾಲನಗರದತ್ತ ಬರುತ್ತಿದ್ದ ಜೆಸಿಬಿಗೆ ಡಿಕ್ಕಿ ಹೊಡೆದಿದೆ. ಘಟನೆಯಲ್ಲಿ ಬಸ್‌ನ ಚಾಲಕ, ನಿರ್ವಾಹಕ, 7 ಮಂದಿ ಹೋಂ ಗಾರ್ಡ್ ಸೇರಿದಂತೆ ಮಹಿಳೆಯರಿಗೆ ಗಾಯಗಳಾಗಿದೆ.

ಅಪಘಾತವಾದಾಗ ಜೆಸಿಬಿ ಹಿಂದೆಯೇ ಬರುತ್ತಿದ್ದ ಸ್ಕೂಟಿಗೆ ಜೆಸಿಬಿಯ ಬಕೆಟ್ ತಗುಲಿ ಮುಂಭಾಗ ಜಖಂಗೊಂಡಿದೆ. ಗಾಯಾಳುಗಳಿಗೆ ಇಲ್ಲಿನ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಲಾಯಿತು. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ. ರಸ್ತೆಯಲ್ಲಿ ಬರುತ್ತಿದ್ದ ಜೆಸಿಬಿಯ ಮುಂಬದಿ ಚಕ್ರ ಏಕಾಏಕಿ ಜಾಮ್ ಆಗಿದ್ದೇ ಈ ಘಟನೆಗೆ ಕಾರಣ ಎನ್ನಲಾಗಿದೆ.

4ಜಿ ಸ್ಯಾಚುರೇಷನ್ ಸೇವೆಗೆ ಪ್ರಧಾನಿ ವರ್ಚುವೆಲ್ ಚಾಲನೆ



ಬಿ.ಎಸ್.ಎನ್.ಎಲ್. 4ಜಿ ಸೇವೆಗಳಿಗೆ ಚಾಲನೆ ನೀಡಿದ ಪ್ರಧಾನಿ ಮೋದಿಯವರ ವರ್ಚ್ಯುವಲ್ ಸಭೆಯನ್ನು ಶಾಸಕ ಎ.ಆರ್ ಕೃಷ್ಣಮೂರ್ತಿ, ಜಿಲ್ಲಾಧಿಕಾರಿ ಶಿಲ್ಪಾನಾಗ್ ವೀಕ್ಷಿಸಿದರು.

ಚಾಮರಾಜನಗರ, ಸೆ. 27– ಜಿಲ್ಲೆಯ 18 ತಾಣಗಳಲ್ಲಿ ಸ್ಯಾಚುರೇಷನ್ ಬಿ.ಎಸ್.ಎನ್.ಎಲ್. ಹೊಸ 4ಜಿ ಸೇವೆಗಳಿಗೆ ಇಂದು ಚಾಲನೆ ದೊರೆತಿದೆ.

ಪ್ರಧಾನಿ ನರೇಂದ್ರಮೋದಿ ಶನಿವಾರ ಒಡಿಶಾದ ಬೆರ್ಹಾಂಪುರದಿಂದ ದೇಶದ ವಿವಿಧ ಭಾಗಗಳಿಗೆ 4ಜಿ ಸ್ಯಾಚುರೇಷನ್ ಯೋಜನೆಯಡಿ ಹೊಸ ಸ್ವದೇಶಿ ತಂತ್ರಜ್ಞಾನದ 4ಜಿ ಸೇವೆಗಳಿಗೆ ವರ್ಚುವೆಲ್ ಮೂಲಕ ಚಾಲನೆ ನೀಡಿದ್ದು, ಇದರಲ್ಲಿ ಜಿಲ್ಲೆಯ 18 ತಾಣಗಳು ಸೇರಿವೆ. ಕೊಳ್ಳೇಗಾಲ ತಾಲೂಕಿನ ಅರೆಪಾಳ್ಯದಲ್ಲಿ ಬಿ.ಎಸ್.ಎನ್.ಎಲ್. 4ಜಿ ಸ್ಯಾಚುರೇಷನ್ ಸೇವೆಗೆ ಚಾಲನೆ ನೀಡುವ ವರ್ಚುವೆಲ್ ಕಾರ್ಯಕ್ರಮವನ್ನು ವೀಕ್ಷಣೆ ಮಾಡಲಾಯಿತು. ಸ್ಥಳೀಯವಾಗಿಯೂ ನಡೆದ ಕಾರ್ಯಕ್ರಮದಲ್ಲಿ ಶಾಸಕ ಎ.ಆರ್. ಕೃಷ್ಣಮೂರ್ತಿ 4ಜಿ ಸ್ಯಾಚುರೇಷನ್ ಉದ್ಘಾಟನಾ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಬಿ.ಎಸ್.ಎನ್.ಎಲ್ 4ಜಿ ಹೊಸ ಸ್ಯಾಚುರೇಷನ್ ಸೇವೆಯು ಇಂದು ಜಿಲ್ಲೆಯ ಕುಂಭೇಶ್ವರ ಕಾಲೋನಿ, ಮುರಟಿಪಾಳ್ಯ, ಸೊತ್ತನಹುಂಡಿ, ನಾಗಪಟ್ಟಣ, ರಂಗನಾಥಪುರ, ಎಲಚೆಟ್ಟಿ, ದಡದಹಳ್ಳಿ, ಬಂಡೀಪುರ, ಹಾಲಹಳ್ಳಿ, ನಾಗನತ್ತ, ದಿನ್ನಹಳ್ಳಿ, ಹೊಗ್ಯಂ, ಮೀಣ್ಯಂ ಎ ಬೀಟ್, ಗೋಪಿನಾಥಂ ಬೀಟ್, ಅರಬಗೆರೆ, ಗುಂಡಾಲ್ ಎಬೀಟ್, ಬೂದಿಗುಪ್ಪ, ಅರೆಪಾಳ್ಯದಲ್ಲಿ ಹೆಚ್ಚಿನ ವೇಗದ ಮೊಬೈಲ್ ಇಂಟರ್‌ನೆಟ್‌ಗೆ ಅನುವಾಗಲಿದೆ. 4ಜಿ ಸ್ಯಾಚುರೇಷನ್ ಯೋಜನೆಯಡಿ ಈ ಎಲ್ಲವೂ ಸಾಧ್ಯವಾಗಲಿದೆ 4ಜಿ ಸ್ಯಾಚುರೇಷನ್ ಸೇವೆಯಿಂದ ತುರ್ತು ಸಂದರ್ಭಗಳಲ್ಲಿ ಜನರಿಗೆ ಅನುಕೂಲವಾಗಲಿದೆ. ವೈದ್ಯಕೀಯ, ಅಗ್ನಿಶಾಮಕ ಸೇವೆ, ಪೊಲೀಸ್, ಡಿಜಿಟಲ್ ಶಿಕ್ಷಣದಂತಹ ಅನುಕೂಲ ಪಡೆಯಬಹುದಾಗಿದೆ. ಸೇವೆಯು ಗ್ರಾಮೀಣ ಭಾಗಗಳಿಗೆ ಹೆಚ್ಚು ಉಪಯುಕ್ತವಾಗಲಿದೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಮಾತನಾಡಿ ಗ್ರಾಮೀಣ ಪ್ರದೇಶಗಳಲ್ಲಿ ಬಿ.ಎಸ್.ಎನ್.ಎಲ್ 4ಜಿ ಸ್ಯಾಚುರೇಷನ್ ಸೇವೆಯಿಂದ ಆರೋಗ್ಯ, ಶಿಕ್ಷಣ, ವಿಪತ್ತು ನಿರ್ವಹಣೆಯಂತಹ ಕ್ಷೇತ್ರಗಳಲ್ಲಿ ಸೇವೆಗೆ ಅನುಕೂಲವಾಗಲಿದೆ. ಪ್ರಸ್ತುತ ನಡೆಯುತ್ತಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಕಾರ್ಯಕ್ಕೂ ಇಂಟರ್‌ನೆಟ್ ಸೇವೆ ಅಗತ್ಯವಾಗಿರುವುದರಿಂದ ಸಮೀಕ್ಷಾ ಕಾರ್ಯಕ್ಕೂ ನೆರವಾಗಲಿದೆ ಜಿಲ್ಲೆಯಲ್ಲಿ ಬಿ.ಎಸ್.ಎನ್.ಎಲ್ ಟವರ್ ನಿರ್ಮಾಣಕ್ಕಾಗಿ ಬಂದ ಪ್ರಸ್ತಾವನೆಗಳಿಗೆ ಜಿಲ್ಲಾಡಳಿತ ಆದ್ಯ ಗಮನ ನೀಡಿದೆ. ಟವರ್ ನಿರ್ಮಾಣಕ್ಕೆ ಅಗತ್ಯವಿರುವ ಜಾಗದ ಸಮಸ್ಯೆಯನ್ನು ಪರಿಹರಿಸಿದ್ದೇವೆ. ಅರೆಪಾಳ್ಯದಲ್ಲಿಯೂ 4ಜಿ ಸ್ಯಾಚುರೇಷನ್ ಟವರ್ ಉದ್ಘಾಟಿಸಲಾಗಿದೆ. ಇದಲ್ಲದೇ ಜಿಲ್ಲೆಯ ಇನ್ನೂ 17 ಕಡೆ ಹೊಸ ಸ್ಯಾಚುರೇಷನ್ 4ಜಿ ಸೇವೆ ಲಭ್ಯವಾಗುತ್ತಿದೆ. ಈ ಎಲ್ಲಾ ಸೇವೆಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಅವರು ಸಲಹೆ ಮಾಡಿದರು.

ಬಿ.ಎಸ್.ಎನ್.ಎಲ್ ಜನರಲ್ ಮ್ಯಾನೇಜರ್ ರಾಜೇಂದ್ರಕುಮಾರ್ ಸಿಂಗ್, ನಿರ್ದೇಶಕ ಬ್ರಹ್ಮಯ್ಯ, ಡಿ.ವೈ.ಎಸ್.ಪಿ. ಸ್ನೇಹರಾಜು, ಡೆಪ್ಯೂಟಿ ಜನರಲ್ ಮ್ಯಾನೇಜರ್ ರವಿಶಂಕರ್, ಗ್ರಾಮ ಪಂಚಾಯಿತಿ ಸದಸ್ಯರಾದ ಲಕ್ಷ್ಮಮ್ಮ, ನಾಗರಾಜು, ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ರಾಜೇಂದ್ರ, ಕೊಳ್ಳೇಗಾಲ ನಗರಸಭೆ ಅಧ್ಯಕ್ಷ ರೇಖಾ ರಮೇಶ್, ತಹಶೀಲ್ದಾರ್ ಬಸವರಾಜು, ಎ.ಪಿ.ಎಂ.ಸಿ. ಮಾಜಿ ಅಧ್ಯಕ್ಷ ಸೋಮಣ್ಣ, ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಮರಿಸ್ವಾಮಿ, ಮುಖಂಡರಾದ ರಾಜು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಿಪ್ ಉಲ್ಲಂಘಿಸಿದ್ದ ಬಿಜೆಪಿಯ 10 ಮಂದಿ ಸದಸ್ಯರ ಉಚ್ಛಾಟನೆ

ಚಾಮರಾಜನಗರ, ಸೆ.27–ಕೊಳ್ಳೇಗಾಲ ನಗರಸಭೆಯ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳೊಂದಿಗೆ ಕೈಜೋಡಿಸಿ, ಪಕ್ಷದ ವಿಪ್ ಉಲ್ಲಂಘಿಸಿದ್ದಾರೆಂಬ ಆರೋಪಕ್ಕೊಳಗಾದ ನಗರದ ಒಬ್ಬರು ಹಾಗೂ ಕೊಳ್ಳೇಗಾಲದ 10 ಮಂದಿ ನಗರಸಭೆ ಸದಸ್ಯರನ್ನು ಬಿಜೆಪಿ ಪಕ್ಷದಿಂದ ಉಚ್ಛಾಟನೆ ಮಾಡಿದೆ.

ಚಾಮರಾಜನಗರ ನಗರಸಭೆಯ ಬಿಜೆಪಿ ಸದಸ್ಯರಾದ ಮಹದೇವಯ್ಯ ಹಾಗೂ ಕೊಳ್ಳೇಗಾಲ ನಗರಸಭೆಯ ಬಿಜೆಪಿ ಸದಸ್ಯರಾದ ಜೆ.ಪಿ. ಶಿವಕುಮಾರ್, ನಾಗೇಂದ್ರ, ಧರಣೇಶ್, ಪ್ರಕಾಶ್, ರಾಮಕೃಷ್ಣ, ನಾಸಿರ್ ಷರೀಫ್, ಮಾನಸ ಪ್ರಭುಸ್ವಾಮಿ, ಶ್ರೀಮತಿ ಪವಿತ್ರ, ನಾಗಸುಂದ್ರಮ್ಮ ಜಗದೀಶ್, ಕವಿತಾ ಅವರನ್ನು ತತ್‌ಕ್ಷಣದಿಂದಲೇ 6 ವರ್ಷಗಳ ಕಾಲ ಪಕ್ಷದಿಂದ ಉಚ್ಛಾಟನೆ ಮಾಡಲಾಗಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಸಿ.ಎಸ್. ನಿರಂಜನ್‌ಕುಮಾರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆಗಿದ್ದೇನು: 2024ರ ಸೆ. 9ರಂದು ನಡೆದ ಚಾಮರಾಜನಗರ ನಗರಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನದ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ನಗರಸಭೆ ಸದಸ್ಯ ಮಹದೇವಯ್ಯ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಿದ್ದರು.

2024 ಸೆ.5ರಂದು ನಡೆದ ಕೊಳ್ಳೇಗಾಲ ನಗರಸಭೆ ಚುನಾವಣೆಯಲ್ಲಿಯೂ ಬಿಜೆಪಿ ಸದಸ್ಯರು ಪಕ್ಷದ ಸೂಚನೆಗೆ ವಿರುದ್ಧವಾಗಿ ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಕಾರಣರಾಗಿದ್ದರು. ಈ ಹಿನ್ನೆಲೆಯಲ್ಲಿ ಎಲ್ಲಾ 11 ಸದಸ್ಯರ ವಿರುದ್ಧವಾಗಿ ಪಕ್ಷದ ರಾಜ್ಯದ ವರಿಷ್ಠರ ಗಮನಕ್ಕೆ ತರಲಾಗಿತ್ತು. ಬಳಿಕ ಈ ಬಗ್ಗೆ ಪರಿಶೀಲಿಸಿ ಬಳಿಕ ಪಕ್ಷದ ರಾಜ್ಯ ಶಿಸ್ತು ಸಮಿತಿಯ ಸೂಚನೆಯ ಮೇರೆಗೆ ಎಲ್ಲಾ ಸದಸ್ಯರನ್ನು 6 ವರ್ಷಗಳ ಕಾಲ ಪಕ್ಷದಿಂದ ಉಚ್ಛಾಟನೆ ಮಾಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಬೌದ್ಧಧರ್ಮ ವಿರುದ್ಧದ ಅರುಣ್ ಕುಮಾರ್ ಹೇಳಿಕೆಗೆ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ನಂಜಯ್ಯ ಖಂಡನೆ



ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ನಂಜಯ್ಯ ಮಾತನಾಡಿದರು.

ಚಾಮರಾಜನಗರ, ಸೆ.27–ಬೌದ್ಧಧರ್ಮ ನೇಪಾಳದಲ್ಲಿ ಜನಿಸಿದ್ದು ಎಂದು ವಕೀಲ ಅರುಣ್ ಕುಮಾರ್ ನೀಡಿರುವ ಹೇಳಿಕೆ ಖಂಡನೀಯ ಎಂದು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ನಂಜಯ್ಯ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು, ಭಾರತವು ಬುದ್ಧ ಹುಟ್ಟಿದ ನಾಡು. ಬಿಹಾರದ ಬುದ್ದಗಯಾದಲ್ಲಿ ಜನಿಸಿ ಸಾರನಾಥದಲ್ಲಿ ಪರಿನಿಬ್ಬಾಣ ಹೊಂದಿದ್ದರು ಆ ಇತಿಹಾಸ ತಿಳಿಯದೆ ಅರುಣ್ ಕುಮಾರ್ ಮಾತನಾಡುವುದು ಸರಿಯಲ್ಲ ಅಂಬೇಡ್ಕರ್ ಸೇರಿದಂತೆ ಅನೇಕರು ಬೌದ್ಧ ಧರ್ಮವನ್ನು ಸ್ವೀಕರಿಸಿದ್ದಾರೆ. ಇಂತಹ ಹೇಳಿಕೆ ನೀಡಿ ಸಮುದಾಯವನ್ನು ದಿಕ್ಕುತಪ್ಪಿಸಬಾರದು ಎಂದು ಪತ್ರಿಕಾಗೋಷ್ಠಿಯಲ್ಲಿ ಅಭಿಪ್ರಾಯಿಸಿದರು

ಮಾದಿಗ ಜನಾಂಗಕ್ಕೆ ಸರಿಯಾದ ಮಾರ್ಗ ತೋರಿಸಬೇಕು. ವಕೀಲ ವೃತ್ತಿಯಲ್ಲಿ ಮುಂದುವರಿಯಲು ಅರುಣ್ ಕುಮಾರ್ ನೈತಿಕತೆ ಕಳೆದುಕೊಂಡಿದ್ದು ಕೂಡಲೇ ಬಾರ್ ಕೌನ್ಸಿಲ್ ಅವರ ಲೈಸೆನ್ಸ್ ರದ್ದುಪಡಿಸುವಂತೆ ಆಗ್ರಹಿಸಿ ದೂರುನೀಡಲಾಗುವುದು ಎಂದರು.

ಕಾನೂನು ಹೋರಾಟ : ಜಾತಿಗಣತಿ ಸಮೀಕ್ಷೆ ಬಗ್ಗೆ ತಕರಾರಿದ್ದರೆ ಸರ್ಕಾರಕ್ಕೆ ಮನವಿ ಕೊಡಿ. ಅದನ್ನು ಬಿಟ್ಟು ಬೌದ್ಧ ಧರ್ಮದ ಬಗ್ಗೆ ಅಪಪ್ರಚಾರ ಮಾಡುವುದು ಸರಿಯಲ್ಲ. ಪರಿಶಿಷ್ಟ ಜನಾಂಗದವರು ಬೌದ್ಧ ಧರ್ಮವನ್ನು ಸ್ವೀಕರಿಸಬಹುದು ಎಂದು ಕೇಂದ್ರ ಸರ್ಕಾರವೇ ಗೆಜೆಟ್ ಹೊರಡಿಸಿದೆ. ಮುಂದಿನ ದಿನಗಳಲ್ಲಿ ಈ ರೀತಿಯ ಹೇಳಿಕೆ ನೀಡಿದರೆ ಕಾನೂನು ಕ್ರಮ ಹೋರಾಟ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ವಕೀಲರಾದ ಮಂಜುನಾಥಸ್ವಾಮಿ, ನಾಗಮ್ಮ, ಸವಿತಾ ಹಾಜರಿದ್ದರು.

ಮತಮೋಸದಿಂದ ಬಿಜೆಪಿ ದೇಶದಲ್ಲಿ ಅಧಿಕಾರ ಹಿಡಿದಿದೆ : ಶಾಸಕ ಸಿ.ಪುಟ್ಟರಂಗಶೆಟ್ಟಿ ಆರೋಪ

ಯುವ ಕಾಂಗ್ರೆಸ್ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ



ರಾಹುಲ್ ಗಾಂಧಿ ಹೋರಾಟಕ್ಕೆ ಬೆಂಬಲವಾಗಿ ಹಮ್ಮಿಕೊಂಡಿದ್ದ ಸಹಿ ಸಂಗ್ರಹ ಅಭಿಯಾನಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಚಾಮರಾಜನಗರ, ಸೆ.27– ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಮತಮೋಸದಿಂದ ದೇಶದಲ್ಲಿ ಅಧಿಕಾರ ಹಿಡಿದಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಆರೋಪಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ನಡೆದ ರಾಹುಲ್ ಗಾಂಧಿಯವರು ನಡೆಸುತ್ತಿರುವ ಮತಗಳ್ಳತನದ ವಿರುದ್ಧ ಜನಜಾಗೃತಿ ಹೋರಾಟಕ್ಕೆ ಬೆಂಬಲವಾಗಿ ಹಮ್ಮಿಕೊಂಡಿದ್ದ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ಮತವಂಚನೆ, ಮೋಸ ಮಾಡುವ ಮೂಲಕ ದೇಶದಲ್ಲಿ ಅಧಿಕಾರ ಹಿಡಿದಿದೆ. ಅದನ್ನು ವಿರೋಧಿಸಿ ನಮ್ಮ ನಾಯಕ ರಾಹುಲ್ ಗಾಂಧಿ ದೇಶವ್ಯಾಪಿ ಹೋರಾಟ ಹಮ್ಮಿಕೊಂಡಿದ್ದಾರೆ. ಆ ಹೋರಾಟಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ. ಬಿಜೆಪಿ ಅವರು ಮಾಡುವ ತಪ್ಪುಗಳನ್ನು ಎತ್ತಿ ಹಿಡಿಯುವ ಕೆಲಸವನ್ನು ದೇಶದಲ್ಲಿ ರಾಹುಲ್ ಗಾಂಧಿ ಅವರು ಮಾಡುತ್ತಿದ್ದಾರೆ. ಅವರ ಹೋರಾಟಕ್ಕೆ ಜಯ ದೊರೆತು ತಪ್ಪಿತಸ್ಥರ ವಿರುದ್ಧ ಕ್ರಮವಾಗಲಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಸಿ.ಯೋಗೇಂದ್ರ ಮಾತನಾಡಿ, ದೇಶದ ಪ್ರಜಾಪ್ರಭುತ್ವದ ಆಶಯಕ್ಕೆ ವಿರುದ್ಧವಾದ ಮತಗಳ್ಳತನದ ವಿರುದ್ಧ ಯುವಜನತೆಯ ಜಾಗೃತಿ ಮತ್ತು ಒಗ್ಗೂಡಿ ಹೋರಾಟ ಮಾಡುವುದು ಅತ್ಯವಶ್ಯಕವಾಗಿದೆ. ಈ ಸಹಿ ಸಂಗ್ರಹ ಅಭಿಯಾನದ ಮೂಲಕ ಜನರಲ್ಲಿ ಅರಿವು ಮೂಡಿಸುವ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಪದಾಧಿಕಾರಿಗಳು ಹಾಜರಿದ್ದರು.

ಇಂದು ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ತುರ್ತು ನಿರ್ವಹಣೆ ಹಿನ್ನೆಲೆಯಲ್ಲಿ ನಗರದ ಕೆಲವು ಭಾಗಗಳಲ್ಲಿ ಭಾನುವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ವಿದ್ಯುತ್ ಪೂರೈಕೆ ಇರುವುದಿಲ್ಲ.

ಪಟ್ಟಣದ ಹೊಸ ಹಾಗೂ ಹಳೆ ಹೌಸಿಂಗ್ ಬೋರ್ಡ್ ಕಾಲೋನಿ, ವಿವೇಕ ನಗರ, ಬುದ್ದ ನಗರ, ಸಿದ್ಧಾರ್ಥ ನಗರ, ರಾಮಸಮುದ್ರ ಕರಿನಂಜನಪುರ, ನ್ಯಾಯಾಲಯ ರಸ್ತೆ, ಜಿಲ್ಲಾಧಿಕಾರಿ ಕಚೇರಿ, ಭ್ರಮರಾಂಬ ಬಡಾವಣೆ ಹಾಗೂ ಶಂಕರಪುರ ಬಡಾವಣೆಯ ಕೆಲವು ಭಾಗಗಳು, ತಾಲೂಕು ಕಚೇರಿ ಸುತ್ತಮತ್ತ, ಭಗೀರಥ ನಗರ, ಬಿ ರಾಚಯ್ಯ ಜೋಡಿ ರಸ್ತೆ ಮತ್ತಿತರ ಕಡೆಗಳಲ್ಲಿ ವಿದ್ಯುತ್ ಪೂರೈಕೆ ಇರುವುದಿಲ್ಲ.

ರೈತರಿಂದ 5 ಕೋಟಿ ರೂ. ಸಾಲಕ್ಕೆ ಬೇಡಿಕೆ



ಯಳಂದೂರು ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆದ ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಎಂ.ಪಿ. ನಿರಂಜನಮೂರ್ತಿ ಮಾತನಾಡಿದರು.

ಯಳಂದೂರು, ಸೆ.27– ರೈತರಿಂದ 5 ಕೋಟಿ ರೂ. ಸಾಲದ ಬೇಡಿಕೆ ಇದೆ. ಇದನ್ನು ಕೊಡಿಸಲು ಮುಂದಿನ ದಿನಗಳಲ್ಲಿ ಕ್ರಮ ವಹಿಸಲಾಗುವುದು ಎಂದು ಯಳಂದೂರು ತಾಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷ ಎಂ.ಪಿ. ನಿರಂಜನಮೂರ್ತಿ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆದ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. ಸಂಘದಲ್ಲಿ ಹಿಂದೆ ನಷ್ಟವಾಗಿತ್ತು. ಇದನ್ನು ಸರಿದೂಗಿಸಿ, ಹೊಸ ಸಾಲವನ್ನು ತರಬೇಕಿದೆ. ಇದಕ್ಕೆ ಸಾಲ ತೆಗೆದುಕೊಂಡಿರುವ ರೈತರು ಸಾಲವನ್ನು ಮರುಪಾವತಿ ಮಾಡಬೇಕು. ಆಗ ಇನ್ನಷ್ಟು ಹಣವನ್ನು ಸಂಘಕ್ಕೆ ತರಬಹುದು. ಈ ನಿಟ್ಟಿನಲ್ಲಿ ಈಗಾಗಲೇ ಕ್ರಮ ವಹಿಸಲಾಗಿದೆ. ನಮ್ಮ ಸಂಘವು ಇಡೀ ಜಿಲ್ಲೆಯಲ್ಲೇ ಸಾಲ ವಸೂಲಾತಿಯಲ್ಲಿ ಸತತ ಐದು ವರ್ಷಗಳಿಂದಲೂ ಪ್ರಥಮ ಸ್ಥಾನದಲ್ಲಿದೆ ಎಂದರು.

ಇದೇ ಸಂದರ್ಭದಲ್ಲಿ ಸಂಘದ ವಾರ್ಷಿಕ ವರದಿಯನ್ನು ಪ್ರಭಾರ ವ್ಯವಸ್ಥಾಪಕ ಜಿ.ಎಸ್. ಮಹದೇವಸ್ವಾಮಿ ಓದಿದರು. ಸಂಘದ ಉಪಾಧ್ಯಕ್ಷ ವೈ.ಎಸ್. ಭೀಮಪ್ಪ, ನಿರ್ದೇಶಕರಾದ ಗೌರಮ್ಮ, ಕೆ.ಲಿಂಗರಾಜು, ಎಚ್.ಪಿ.ಮಲ್ಲಣ್ಣ, ರಾಜಶೇಖರ, ರಾಜಮ್ಮ, ಎಸ್.ರಶ್ಮಿ, ಜಿ.ಸತೀಶ್, ವಿ.ಸೋಮಣ್ಣ, ಕೆ.ಎಂ. ಶಿವಣ್ಣ, ಸಿದ್ದಪ್ಪಸ್ವಾಮಿ, ಪಿ. ವೃಷಭೇಂದ್ರ, ಚಂಗಚಹಳ್ಳಿ ಮಹದೇವಸ್ವಾಮಿ ಜಿಪಂ ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್ ಸೇರಿದಂತೆ ಅನೇಕರು ಇದ್ದರು.

ಮೈಸೂರು ಮಿತ್ರ

ಭಾನುವಾರ 28-09-2025

ವಾರದ ಮಿತ್ರ

ಸಾಪ್ತಾಹಿಕ ಪುರವಣಿ

ಆಯುರ್ವೇದ ಮತ್ತು ನಮ್ಮ ಸಂಸ್ಕೃತಿಯಲ್ಲಿ 6 ಋತುಗಳಿಗೆ ಅನುಸಾರವಾಗಿ ಆಹಾರ-ವಿಹಾರ, ದೇವ-ದೇವಿಯರ ಆಚರಣೆಗಳು, ಹಬ್ಬ-ಹರಿದಿನಗಳು ಆಚರಿಸಲ್ಪಡುತ್ತವೆ. ಹೇಮಂತ, ಶಿಶಿರ, ವಸಂತ, ಗ್ರೀಷ್ಮ, ವರ್ಷ ಮತ್ತು ಶರದ್ ಋತುಗಳಲ್ಲಿ ಶಿಶಿರ, ವಸಂತ, ಗ್ರೀಷ್ಮ ಋತುಗಳು ಉತ್ತರಾಯಣ ಮತ್ತು ಆದಾನ ಕಾಲದಲ್ಲಿದ್ದರೆ; ದಕ್ಷಿಣಾಯನ ವಿಸರ್ಗ ಕಾಲದಲ್ಲಿ; ವರ್ಷ, ಶರದ್ ಮತ್ತು ಹೇಮಂತ ಋತುಗಳಿರುತ್ತವೆ. ಈ ಋತುಗಳಿಗನುಸಾರವಾಗಿ, ಆಯುರ್ವೇದ ಪದ್ಧತಿಯಲ್ಲಿ ಋತು, ಚರ್ಯ, ದಿನಚರ್ಯ, ಆಹಾರ-ವಿಹಾರಗಳನ್ನು ಉಲ್ಲೇಖಿಸಿರುವುದನ್ನು ನಾವು ನೋಡಬಹುದು. ಹಾಗೆಯೇ ಆಶ್ವೀಯುಜ, ಕಾರ್ತಿಕ ಮಾಸಗಳನ್ನು ಒಳಗೊಂಡಂತೆ ಪ್ರಸ್ತುತ ಈ ವರ್ಷ ಸೆಪ್ಟೆಂಬರ್ 22 ರಿಂದ ಪ್ರಾರಂಭವಾಗಿರುತ್ತದೆ. ನವೆಂಬರ್ ತಿಂಗಳಿನವರೆಗಿರುತ್ತದೆ. ಈ ಶರದೃತುವಿನಲ್ಲಿ ನಮ್ಮ ಹಿಂದೂ ಸಂಸ್ಕೃತಿಯಲ್ಲಿ ಹಲವಾರು ಮುಖ್ಯ ಹಬ್ಬ ಹರಿದಿನಗಳ ಆಚರಣೆಯೂ ನಮ್ಮ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿದೆ. ಅದರಲ್ಲಿಯೂ ನಮ್ಮೆಲ್ಲರ ವಿಶ್ವವಿಖ್ಯಾತ ಶರನ್ನವರಾತ್ರಿಯು ಮುಖ್ಯವಾದದ್ದು.



ನವರಾತ್ರಿ ಮತ್ತು ಆಯುರ್ವೇದ

ನವರಾತ್ರಿಯ 9 ದಿನಗಳಲ್ಲಿ 9 ದೇವತಾ ಸ್ವರೂಪಗಳನ್ನು ಪೂಜಿಸುವ ಜೊತೆಗೆ ನಮಗರಿವಿಲ್ಲದಂತೆಯೇ ಜೀವದಾಯಿನೀ, ಆರೋಗ್ಯದಾಯಿನೀ ಮೂಲಿಕೆಗಳನ್ನು ಪೂಜಿಸಲಾಗುತ್ತದೆ. ಈ ನವರಾತ್ರಿಯ ಸಮಯದಲ್ಲಿ ಆಚರಿಸುವ ಉಪವಾಸ, ಫಲಹಾರ ಸೇವನೆ, ಮಾಂಸ ಮದ್ಯ ವರ್ಜಿಸಿ, ಸಾತ್ವಿಕ ಆಹಾರ ಸೇವನೆ, ಪೂಜೆಗಳು ಇವೆಲ್ಲವುದರಿಂದ ನಮ್ಮ ತನು-ಮನಗಳ ಶುದ್ಧಿಯಾಗಿ ಆಧ್ಯಾತ್ಮದತ್ತ ಮನಸ್ಸು ಹರಿಯುತ್ತದೆ. ನವರಾತ್ರಿಯಲ್ಲಿ ನಡೆಯುವ ವಿವಿಧ ಸಾಂಸ್ಕೃತಿಕ ಆಚರಣೆಗಳು ಜನರಲ್ಲಿ ಬಾಂಧವ್ಯ ಬೆಸೆಯುತ್ತವೆ. ಏಕತೆಯನ್ನು ಮೂಡಿಸಿ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುತ್ತವೆ.

ಶೈಲಪುತ್ರಿ ಆರಾಧನೆ



ಪ್ರಕೃತಿ ಮತ್ತು ಶುದ್ಧತೆಯ ಗುಣಲಕ್ಷಣಗಳ ಸಂಕೇತವಾದ ಈ ದೇವಿಯ ಬಣ್ಣ ಕಿತ್ತಳೆ ಬಣ್ಣ. ಈ ದಿನ ಸಾಂಕೇತಿಕವಾಗಿ ಹರೀತಕಿ (ಅಳಲೇ ಕಾಯಿಯನ್ನು) ಪೂಜಿಸಲಾಗುತ್ತದೆ. ಹರೀತಕೀಯನ್ನು ದೇಹಶುದ್ಧಿ, ಚಿತ್ತ ಸಂವೃದ್ಧಿಯಾಗಿ ಕಾರ್ಯನಿರ್ವಹಿಸುವ ಮತ್ತು ಹಲವಾರು ರೋಗಗಳಲ್ಲಿ ಏಕಮೂಲಿಕಾ ಪ್ರಯೋಗವಾಗಿ ಆಯುರ್ವೇದದಲ್ಲಿ ಉಪಯೋಗಿಸುತ್ತಾರೆ.

ಬ್ರಹ್ಮಚಾರಿಣಿ



2ನೇ ದಿನದ ಬ್ರಹ್ಮಚಾರಿಣಿ ದೇವಿ ಆನಂದ ಮತ್ತು ಶಾಂತ ಸ್ವರೂಪಿಣಿಯಾಗಿ ಶ್ವೇತ ಬಣ್ಣವನ್ನು ಪ್ರತಿನಿಧಿಸಿದರೆ ಇಂದು ಬ್ರಾಹ್ಮೀ ಅಥವಾ ಒಂದೆಲಗ ವನ್ನು ಪೂಜಿಸಲಾಗುತ್ತದೆ. ಬ್ರಾಹ್ಮಿಯು ಸ್ಮೃತಿ ವರ್ಧಕ, ಮನ ಶಕ್ತಿದಾಯಕ ಜೀರ್ಣಕಾರಿ ಮತ್ತು ಸ್ಥೈರ್ಯ ಕಾರಿ ಎಂದು ಆಯುರ್ವೇದದಲ್ಲಿ ಉಲ್ಲೇಖವಿದೆ.

ಚಂದ್ರಘಂಟಾ ದೇವಿ



ಅಂದರೆ ಸುಂದರವಾದ ಕೆಂಪು ಬಣ್ಣದಲ್ಲಿ ಕಂಗೊಳಿಸುವ ದೇವಿಯು ಸೌಂದರ್ಯ ಮತ್ತು ಧೈರ್ಯದ ಸಂಕೇತವಾಗಿದ್ದು ಕೆಂಪು ಬಣ್ಣದ ವಸ್ತ್ರದಿಂದ ದೇವಿಗೆ ಅಲಂಕರಿಸಿ, ಚಂದ್ರಚೂರ್ ಅಂದರೆ ಅಳಿವೆ ಬೀಜವನ್ನು ದಿವ್ಯ ಔಷಧಿ ಸ್ವರೂಪವಾಗಿ ಪೂಜಿಸಲಾಗುತ್ತದೆ. ಈ ಅಳಿವೇ ಬೀಜವು ಸ್ಥೌಲ್ಯಹರ, ಮಹಿಳೆಯರ ಋತುಸಂಬಂಧಿ ತೊಂದರೆಗಳ ನಿವಾರಕ, ಮಧುಮೇಹ, ರಕ್ತಶೋಧಕ, ಬಾಣಂತಿಯರಿಗೆ ಅಳಿವೆ ಬೀಜದ ಲಡ್ಡು, ಪಾಯಸ ಮಾಡಿಕೊಡುವುದು ಉತ್ತಮವೆಂದು ಆಯುರ್ವೇದದಲ್ಲಿ ಉಲ್ಲೇಖಗಳಿವೆ.

ಕೂಷ್ಮಾಂಡಾದೇವಿ

ಬ್ರಹ್ಮಾಂಡದ ಹಿಂದಿನ ಶಕ್ತಿಯ ಅವತಾರವಾದ ಗಾಢ ನೀಲಿ ಬಣ್ಣವನ್ನು ಪ್ರತಿನಿಧಿಸುವ ಈ ದೇವಿಯು ಜಗತ್ತಿನ ಹಸಿರು ಸಸ್ಯವರ್ಗ ಮತ್ತು ಜೀವನದ ಸಂಕೇತವನ್ನು ತನ್ನ ಮಂದಹಾಸದ ಮೂಲಕ ಪ್ರತಿನಿಧಿಸುತ್ತಾಳೆ. ಕೂಷ್ಮಂಡ ಅಂದರೆ ಬೂದುಗುಂಬಳ ವನ್ನು ಸಾಂಕೇತಿಕವಾಗಿ ಪೂಜಿಸಲಾಗುತ್ತದೆ. ಬೂದುಗುಂಬಳ ಮೆದುಳಿಗೆ ಹಿತಕಾರಿ. ದೇಹದ ಕಶ್ಮಲನಿವಾರಕ, ಮಾನಸಿಕ ಋಣಾತ್ಮಕತೆಯನ್ನು ನಿವಾರಿಸುತ್ತದೆ. ಪ್ರಾಣಶಕ್ತಿ ವರ್ಧಕ, ಮನೋಬಲ ವರ್ಧಕ, ಬಲ್ಯ ಮತ್ತು ಪಿತ್ತಹರವೆಂದು ಆಯುರ್ವೇದದಲ್ಲಿ ಉಲ್ಲೇಖಗಳಿವೆ.



ಸ್ಕಂದ ಮಾತಾ



ಕಾರ್ತಿಕೇಯನ ತಾಯಿಯ ಅವತಾರ ದೇವಿಯು ರಕ್ಷಣಾಮಯಿ ಮತ್ತು ಹಳದಿ ಬಣ್ಣವನ್ನು ಪ್ರತಿನಿಧಿಸಿ ಶಾಂತಿ, ನೆಮ್ಮದಿಯನ್ನು ನೀಡುತ್ತಾಳೆ. ಸಾಂಕೇತಿಕವಾಗಿ ಅಗಸೇಬೀಜವನ್ನು ಪೂಜಿಸಲಾಗುತ್ತದೆ. ಅಗಸೇ ಬೀಜವು ಕ್ಯಾನ್ಸರ್ ಪ್ರತಿಬಂಧಕ, ತೂಕಹರ, ನೋವು ನಿವಾರಕ, ಹಾರ್ಮೋನುಗಳನ್ನು ಸಮತೋಲನ ಗೊಳಿಸಿ ಗರ್ಭಾಶಯ ಶೋಧಕವಾಗಿದೆ. ಹೃದ್ಯ, ಮಧುಮೇಹ ನಿವಾರಕ ಎಂದು ಆಯು ರ್ವೇದದಲ್ಲಿ ಉಲ್ಲೇಖಗಳಿದ್ದು, ಅಗಸೇ ಬೀಜದಲ್ಲಿರುವ ಲಿನ್ನಾನ್ ಎಂಬ ರಾಸಾಯನಿಕಗಳು ಕ್ಯಾನ್ಸರ್ ಪ್ರತಿಬಂಧಕವೆಂದು ಸಂಶೋಧನೆಗಳಿಂದಲೂ ದೃಢಪಟ್ಟಿದೆ.

ಕಾತ್ಯಾಯಿನಿ ದೇವಿ

ಧೈರ್ಯಶಾಲಿ ಅವತಾರವಾದ ಈ ದೇವಿಯು ಕಾತ್ಯಾಯನ ಋಷಿ ಪುತ್ರಿ, ಹಸಿರುಬಣ್ಣದ ಪ್ರತೀಕವಾಗಿದ್ದಾಳೆ. ಮಾಚಿಕಾ ಅಥವಾ ಅಂಬಾಲಿಕ ಎಂಬ ಮೂಲಿಕೆಯನ್ನು ಸಾಂಕೇತಿಕವಾಗಿ ಪೂಜಿಸುತ್ತಾರೆ. ಮಾಚಿಕಾ ಮೂಲಿಕೆಯು ಪಿತ್ತಹರ, ಜೀರ್ಣಾಂಗ ವ್ಯೂಹಕ್ಕೆ ಉತ್ತಮವಾದದ್ದು. ಯಕೃತ್, ಕಿಡ್ನಿಯ ಆರೋಗ್ಯಕ್ಕೆ ಸಹಕಾರಿ, ಗರ್ಭಾಶಯದ ಅಧಿಕ ಸ್ರಾವ ಮತ್ತು ಚರ್ಮ ರೋಗ ನಿವಾರಕವೆಂದೂ ಆಯುರ್ವೇದದಲ್ಲಿ ಉಲ್ಲೇಖಗಳಿವೆ.



ಕಾಳರಾತ್ರಿ ದೇವಿ



ಭಕ್ತರ ಎಲ್ಲಾ ಸಂಕಷ್ಟಗಳನ್ನೂ ತೊಡೆದುಹಾಕುವ ದೇವಿಯು ಈ ಶಕ್ತಿಶಾಲಿ ಅವತಾರ ಬೂದುಬಣ್ಣವನ್ನು ಪ್ರತಿನಿಧಿಸುತ್ತದೆ. ನಾಗಬಲ, ನಾಗದೇವ ಅಂದರೆ ತುರುವೇಗಿಡವನ್ನು ಸಾಂಕೇತಿಕವಾಗಿ ಪೂಜಿಸ ಲಾಗುತ್ತದೆ. ನರವ್ಯೂಹದ ತೊಂದರೆಗಳು, ಹೃದಯ, ವಾತ, ಪಿತ್ತ, ಕಫಹರ, ಆತಂಕ ನಿವಾರಕ, ಆಮ್ಲಪಿತ್ತ, ಅಜೀರ್ಣ, ಕೆಮ್ಮು, ದಮ್ಮು ನಿವಾರಕ, ಗರ್ಭಾಶಯದ ತೊಂದರೆಗಳಾದ ಪಿ.ಸಿ.ಓ.ಡಿ ಮುಂತಾದ ತೊಂದರೆಗಳಲ್ಲಿ ಉಪಯುಕ್ತವೆಂದು ಆಯುರ್ವೇದದಲ್ಲಿ ಉಲ್ಲೇಖಗಳಿವೆ.

ಮಹಾಗೌರಿ ದೇವಿ

ಬುದ್ಧಿವಂತಿಕೆ ಮತ್ತು ಶಾಂತಿಯ ಪ್ರತಿನಿಧಿಯಾದ ಈ ದೇವಿಯ ಅವತಾರವು ಆಶಾವಾದದ ಗುಲಾಬಿ ಬಣ್ಣವನ್ನು ಪ್ರತಿನಿಧಿಸುತ್ತದೆ. ಸಾಂಕೇತಿಕವಾಗಿ ಈ ಅಷ್ಟಮಿಯಂದು ದೇವಿಗೆ ತುಳಸಿ ಮೂಲಿಕೆಯಿಂದ ಪೂಜಿಸಲಾಗುತ್ತದೆ. ರೋಗ ನಿರೋಧಕ ಶಕ್ತಿಗಾಗಿ, ಜ್ವರ, ಕೆಮ್ಮು, ಕಫ, ಅಲರ್ಜಿ, ಆತಂಕ ನಿವಾರಿಸಲು, ಆ್ಯಂಟಿವೈರಲ್ ಆ್ಯಂಟಿ ಫಂಗಲ್, ಆ್ಯಂಟಿ ಬ್ಯಾಕ್ಟೀರಿಯಲ್ ಆಗಿದ್ದು ಯುಜೆನಾಲ್ ಎಂಬ ಅಂಶವು ಜೀವಾಣು ನಿರೋಧಕವೆಂದು ಸಂಶೋಧನೆಗಳಿಂದ ದೃಢಪಟ್ಟಿದ್ದು, ಆಯುರ್ವೇದದಲ್ಲಿ ಉಲ್ಲೇಖಗಳಿವೆ.



ಸಿದ್ಧಿ ಧಾತ್ರಿ ದೇವಿ



ಸಿದ್ಧಿಯನ್ನು ನೀಡುವ ಈ ದೇವಿಯ ಅವತಾರವು ಸಂತೋಷ, ಆಶೀರ್ವಾದ ಮತ್ತು ಸಕಾರಾತ್ಮಕತೆಯ ಪ್ರತೀಕವಾಗಿದ್ದು, ಶುಭ್ರ ಆಕಾಶ ನೀಲಿ ಬಣ್ಣದ ಪ್ರತೀಕದಂತೆ ದೇವಿ ಭಕ್ತರಿಗೆ ಆಶೀರ್ವದಿಸುತ್ತಾಳೆ. ಶತಾವರಿ ಮೂಲಿಕೆಯನ್ನು ಪೂಜಿಸಲಾಗುತ್ತದೆ. ಶಕ್ತಿದಾಯಕ, ಮೇಧ್ಯ, ಬಾಣಂತಿಯರಿಗೆ ಉತ್ತಮ ಔಷಧ, ಪಿತ್ತ ಶಾಮಕ, ಪುರುಷ ಮತ್ತು ಸ್ತ್ರೀಯರಿಬ್ಬರಿಗೂ ಹಾರ್ಮೋನುಗಳನ್ನು ಸರಿತೂಗಿಸುವ ಶ್ರೇಷ್ಠ ಮೂಲಿಕೆಯೆಂದು ಆಯುರ್ವೇದದಲ್ಲಿ ಉಲ್ಲೇಖಗಳಿವೆ.


ಹೀಗೆ ಈ 9 ಮೂಲಿಕೆಗಳು ಪ್ರತಿಯೊಬ್ಬರಿಗೂ ಪೂರ್ಣ ಪ್ರಮಾಣದ ಆರೋಗ್ಯ, ದೈಹಿಕ, ಮಾನಸಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಮಕ್ಕಳ ಚಿತ್ರಕಥೆ: 'ಇಲಿಯ ಕಥೆಯಲ್ಲೊಂದು ನೀತಿ..!'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಎತ್ತರವಾದ ಸುಂದರ ಮರದ ಕೆಳಗೆ ಹಚ್ಚನೆ ಹಸಿರು ತುಂಬಿದ ಹುಲ್ಲುಹಾಸು. ಅಲ್ಲಿ ಒಂದು ಇಲಿ ಮರದ ಬೇರನ್ನು ಕಡಿಯುತ್ತಾ ಇರುವಾಗ, ಬೆಕ್ಕು ಬರುವುದನ್ನು ಕಂಡು ಬೆಚ್ಚಿ 'ಅಯ್ಯೊ ನಾನು ಬೆಕ್ಕಾಗಿದ್ದರೆ ಯಾರಿಗೂ ಅಂಜದೆ ಆರಾಮವಾಗಿರಬಹುದಿತ್ತು' ಎಂದು ಮನದಲ್ಲಿ ಅಂದುಕೊಳ್ಳುತ್ತಿದ್ದಂತೆ ಕ್ಷಣಾರ್ಧದಲ್ಲಿ ಬೆಕ್ಕಾಗಿ ಮಾರ್ಪಟ್ಟಿತ್ತು.




ಬೆಕ್ಕಾಗಿ ಆರಾಮವಾಗಿ ಇರಬಹುದು ಎನ್ನುವಷ್ಟರಲ್ಲಿ ನಾಯಿ ಅಟ್ಟಿಸಿಕೊಂಡು ಬಂದಿತು. 'ನಾನೂ ನಾಯಿಯಾಗಿದ್ದರೆ ಚೆನ್ನಾಗಿರುತ್ತಿತ್ತು' ಎನ್ನುತ್ತಿದ್ದಂತೆ ನಾಯಿಯಾಗಿ ಮಾರ್ಪಟ್ಟಿತು. ಮತ್ತೆ ಆ ನಾಯಿಯನ್ನು ಆನೆಯೊಂದು ಅಟ್ಟಿಸಿಕೊಂಡು ಬಂದಾಗ 'ನಾನೂ ಆನೆಯಾಗಿದ್ದರೆ...! ಮರುಕ್ಷಣವೇ ಆನೆಯಾಗಿಬಿಟ್ಟಿತು. ತನ್ನಷ್ಟು ಬಲಶಾಲಿ ಯಾರೂ ಇಲ್ಲ ಎಂದು ಗರ್ವದಿಂದ ಮೆರೆಯಿತು.




ನಾನೂ ಸಿಂಹವಾಗಿದ್ದರೆ ಚೆನ್ನಾಗಿರುತ್ತಿತ್ತು' ಎಂದಾಕ್ಷಣ ಸಿಂಹವಾಯಿತು. ನಾನೇ ಕಾಡಿನ ರಾಜ, ನನ್ನನ್ನು ಯಾರೂ ಏನೂ ಮಾಡಲು ಸಾಧ್ಯವಿಲ್ಲ ಎಂದು ಆನಂದಪಟ್ಟಿತು. ಬೇಟೆಗಾರ ಬಿಲ್ಲು-ಬಾಣ ಹಿಡಿದು ಬೆನ್ನತ್ತಿ ಬಂದಾಗ ಓಡಲು ಪ್ರಾರಂಭಿಸಿತು. ಕೊನೆಗೆ 'ಅಯ್ಯೋ...ನಾನೂ ಬೇಟೆಗಾರನಾಗಿದ್ದರೆ... ತಕ್ಷಣ ಬೇಟೆಗಾರನಾಗಿ ಮಾರ್ಪಟ್ಟಿತು.



ಬೇಟೆಗಾರನಾದ ಮೇಲೆ ಬೇಟೆಯಾಡಲು ಕಾಡೆಲ್ಲಾ ಸುತ್ತಿದರೂ ಒಂದು ಪ್ರಾಣಿಯೂ ಸಿಗಲಿಲ್ಲ. ಆಯಾಸಗೊಂಡು ಎತ್ತರವಾದ, ಸುಂದರವಾದ ಮರದ ಕೆಳಗೆ ಕುಳಿತು ವಿಶ್ರಾಂತಿ ಪಡೆಯುತ್ತಿರುವಾಗ 'ಎಷ್ಟು ಕಷ್ಟದ ಜೀವನ ಇದು...?' ಎಂದು ಮೇಲೆ ನೋಡಿದಾಗ ಸುಂದರವಾದ ಮರ ಕಣ್ಣಿಗೆ ಬಿತ್ತು.




ಆ ಬೇಟೆಗಾರ ಯೋಚಿಸುತ್ತಾ, 'ಮರವಾದರೆ ಬೇಟೆಯಾಡುವುದು, ಹೊಟ್ಟೆ ತುಂಬಿಸಿಕೊಳ್ಳುವ ಕಷ್ಟ ತಪ್ಪುತ್ತದೆ' ಎಂದು ವಿಚಾರಮಾಡಿ ಮರವಾಗಿದ್ದರೆ ಚೆನ್ನಾಗಿರುತ್ತಿತ್ತು ಎಂದಾಕ್ಷಣ ಮರವಾಗಿ ರೂಪುಗೊಂಡ. ನಾನು ಇನ್ಮುಂದೆ ಆರಾಮವಾಗಿ ಇರಬಹುದು. ಜೀವಭಯ, ಯಾರ ಹೆದರಿಕೆಯೂ ಇರುವುದಿಲ್ಲ ಎಂದು ಸಂತೋಷದಿಂದ ಬೀಗತೊಡಗಿತು.



ಒಮ್ಮೆ ಆ ಮರವು ತನ್ನ ಬುಡವನ್ನು ನೋಡಿಕೊಂಡಾಗ ಇಲಿಗಳು ಮರದ ಬೇರುಗಳನ್ನು ಕಡಿಯುತ್ತಿದ್ದವು. 'ಅಯ್ಯೋ..ನನ್ನ ಬೇರುಗಳನ್ನು ಕಡಿದರೆ ನಾನು ನೆಲಕ್ಕೆ ಉರುಳಿ ಒಣ ಕಟ್ಟಿಗೆಯಾಗಿ ಗೆದ್ದಲು ಹಿಡಿದು ನಾಶವಾಗುತ್ತೇನೆ' ಎಂದು ರೋಧಿಸಿ, 'ನಾನು ಇಲಿಯಾಗಿದ್ದರೆ ಚೆನ್ನಾಗಿರುತಿತ್ತು' ಎಂದಾಕ್ಷಣ ಮತ್ತೆ ಇಲಿಯಾಯಿತು.

ನೀತಿ :- ದೇವರು ನೀಡಿರುವ ಬದುಕು, ವೃತ್ತಿಯಲ್ಲಿಯೇ ತೃಪ್ತರಾಗಿ ಜೀವನ ಸಾರ್ಥಕ ಮಾಡಿಕೊಳ್ಳುವುದು ಒಳ್ಳೆಯದು.

ವಾರಭವಿಷ್ಯ



28.09.2025 ರಿಂದ 4.10.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕನ್ಯಾ, ಚಂದ್ರ-ವೃಶ್ಚಿಕ, ಧನುಸ್ಸು, ಮಕರ, ಕುಂಭ, ಕುಜ-ತುಲಾ, ಬುಧ-ಕನ್ಯಾ ತುಲಾ, ಗುರು-ಮಿಥುನ, ಕಟಕ, ಶುಕ್ರ-ಸಿಂಹ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೊ,ಅ)

ವಾರದ ಆದಿಗೆ ಮುಖ್ಯ ವಿಷಯ ತೀರ್ಮಾನಗಳಲ್ಲಿ ಗೊಂದಲಕ್ಕೆ ಸಿಲುಕುವಿರಿ. ಅಪಕ್ವ ನಿರ್ಧಾರಗಳಿಂದ ಹಣ ಕಳೆದುಕೊಳ್ಳುವ ಸಂಭವವಿದೆ. ಪರಿಚಿತರೇ ಕೈ ಹಿಡಿದು ತಪ್ಪು ದಾರಿಯಲ್ಲಿ ನಡೆಸಬಹುದು. ವಾರ ಸಾಗಿದಂತೆ ಚಂದ್ರಗ್ರಹ ಮನೋಕಾರಕನಿದ್ದು ನಿಮಗೆ ಸದ್ಬುದ್ಧಿಯನ್ನು ನೀಡಲಿದ್ದಾನೆ. ಪರಿವಾರದವರೊಡನೆ ಸಮಯ ಕಳೆಯುವುದರಿಂದ ಮನಸ್ಸು ಹಗುರವೆನಿಸುವುದು.

ಶ್ರೀ ಶನಿ ಮಹಾತ್ಮೆ ಕಥೆ ಓದಿ. ಶುಭ ಸಂಖ್ಯೆ-3

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ದೇಹ ಸೌಖ್ಯ, ಸ್ತ್ರೀ ಸುಖ ಬಯಸಿದ್ದನ್ನು ಗಳಿಸಿಕೊಳ್ಳಲು ನಿಮ್ಮ ರಾಶಿಯ ಮೇಲೆ ಚಂದ್ರ ದೃಷ್ಟಿ ಇದೆ. ಗುರುಗ್ರಹವೂ ಅನುಕೂಲವಾಗಿದ್ದು, ಆಸ್ತಿ ಗಳಿಕೆ ಧನ ಸಂಚಯ ಪರೀಕ್ಷೆ, ಸಂದರ್ಶನಗಳಲ್ಲಿ ಯಶಸ್ಸನ್ನು ಗಳಿಸುವಿರಿ. ವಿವಾಹಯೋಗ್ಯರಿಗೆ ಸೂಕ್ತ ಸಂಬಂಧಗಳು ಕೂಡಿ ಬರುವುದು. ಖಾದ್ಯ ತೈಲ ತಯಾರಕರಿಗೆ ದುಪ್ಪಟ್ಟು ವ್ಯಾಪಾರ ಹಾಗೂ ಧನಲಾಭ ಉಂಟು.

ಶ್ರೀ ದೇವೀ ಮಹಾತ್ಮೆ ಓದಿ. ಶುಭ ಸಂಖ್ಯೆ-6

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ಈ ವಾರದಲ್ಲಿ ಅಸೂಯಾಪರರು ನಿಮ್ಮ ಮಹತ್ವದ ಕೆಲಸಕ್ಕೆ ಅಡ್ಡಿ ಆತಂಕಗಳನ್ನು ಉಂಟು ಮಾಡುವರು. ನಿಮ್ಮ ರಾಶಿ ಜನ್ಯ ಗುಣ ಚತುರತೆಯಿಂದ ಎದುರಾಗುವ ಎಡರು-ತೊಡರುಗಳನ್ನು ಮೀರಿ ಕಾರ್ಯ ಸಾಧಿಸಿಕೊಳ್ಳುವಿರಿ. ಕೊಟ್ಟ ಹಣ ವಾಪಸ್ಸು ಬರುವುದು ಅನುಮಾನ. ಇದರ ಜೊತೆ ಅರ್ಥಹೀನ ಖರ್ಚುಗಳಿಂದ ಜೇಬು ಖಾಲಿ. ಶರೀರದಲ್ಲಿ ಶಕ್ತಿಹೀನತೆ ಕಾಡುವುದು.

ಶ್ರೀ ಗುರುಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-1

ಕಟಕ (ಹಿ,ಹು,ಹೆ,ಹೊ,ಡ,ಡಿ,ಡು)

ವಾರದ ಆರಂಭಕ್ಕೆ ಕಾರ್ಯವಿಘ್ನ. ಕಷ್ಟ ಪಟ್ಟು ಗಳಿಸಿದ್ದನ್ನು ಕಳೆದುಕೊಳ್ಳುವಿರಿ. ಮಹಿಳಾ ಮಣಿಯರು ಆಭರಣ ರಕ್ಷಣೆ ಮಾಡಿಕೊಳ್ಳಿ. ವಾರದ ಉತ್ತರಾರ್ಧದಲ್ಲಿ ಅಧಿಕಾರಿಗಳ ಸಹಾಯಹಸ್ತ ದೊರೆತು ಆಸ್ತಿ ವಿಷಯಗಳು ಸುಖಾಂತ್ಯವಾಗುವುದು. ಕುಟುಂಬ ಸದಸ್ಯರ ಜೊತೆ ಸಮಯ ಕಳೆಯುವುದರಿಂದ ಮನೋಲ್ಲಾಸ. ಸಮಾಜದ ಮುಖ್ಯ ವ್ಯಕ್ತಿಗಳ ಸಂಪರ್ಕದಿಂದ ಕುಟುಂಬ ಸಮಸ್ಯೆ ನಿವಾರಣೆ.

ಶ್ರೀ ಅಪರಾಜಿತ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4

ಸಿಂಹ (ಮ,ಮಿ,ಮು,ಮೆ,ಮೊ,ಟ,ಟಿ,ಟು,ಟೆ)

ಗುರು ಏಕಾದಶ ಲಾಭಸ್ಥಾನ. ಮಂಗಳ ಸ್ಥಾನದಲ್ಲಿ ಸಂಚರಿಸುತ್ತಿದ್ದರೂ, ಇತರ ಪ್ರಮುಖ ಗ್ರಹಗಳು ತಮಗೆ ಅನುಕೂಲಕರ ಸ್ಥಾನದಲ್ಲಿ ಸಂಚರಿಸುತ್ತಿಲ್ಲ. ಗುರು-ಹಿರಿಯರ ಅನುಭವಿಗಳ ಮಾರ್ಗದರ್ಶನದ ಅಗತ್ಯ ನಿಮಗಿದೆ. ಬಂಡವಾಳ ಹೂಡಿಕೆ, ಅನಾವಶ್ಯಕ ಪ್ರಯಾಣಗಳು ನಿಮಗೆ ಮುಳುವಾಗಬಹುದು. ವಾರಾಂತ್ಯಕ್ಕೆ ಚಂದ್ರಗ್ರಹ ಸ್ವಭಾವದಿಂದ ಜೀವನದಲ್ಲಿ ತಂಗಾಳಿ ಬೀಸುವುದು.

ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-9

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ವಾರದ ಆದಿಗೆ ಧನ ಸಂಚಯ. ಮನೆಗೆ ಬಂಧು-ಬಳಗದವರ ಆಗಮನ. ಹಬ್ಬದ ವಾತಾವರಣ. ನೂತನ ವಸ್ತ್ರಾಭರಣ ಕೊಳ್ಳುವಿರಿ. ವಿದ್ಯಾಸಂಸ್ಥೆಗೆ ದಾನ ಕೊಡುವುದರಿಂದ ಪ್ರಸಿದ್ಧಿಗೆ ಬರುವಿರಿ. ವಾಕ್‌ಚಾತುರ್ಯದಿಂದ ನಿಮ್ಮ ಕೆಲಸ ಸಾಧನೆ ಆಗುವುದು. ಬೆಳೆದು ನಿಂತ ಮಕ್ಕಳ ಚಲನ ವಲನದ ಬಗ್ಗೆ ಗಮನ ನೀಡಿ. ವಾರದ ಕಡೆಗೆ ಸಂಸಾರ ಸಮೇತ ಕುಲದೇವತಾ ದರ್ಶನ.

ಶ್ರೀ ಹರಿನಾಮ ಜಪ. ಶುಭ ಸಂಖ್ಯೆ-5

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ಈ ವಾರದಲ್ಲಿ ಗುರು ಸಹಿತ ಇತರ ಗ್ರಹಗಳ ಶುಭಫಲ ದೊರೆಯಬೇಕೆಂದರೆ ನಿಮ್ಮ ಶ್ರದ್ಧಾಪೂರ್ವಕ ಪರಿಶ್ರಮವೂ ಸೇರಬೇಕು. ಪುಸ್ತಕ ಪ್ರಕಾಶಕರಿಗೆ ದೊಡ್ಡ ಯೋಜನೆ ದೊರೆಯಲಿದೆ. ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಗಳ ಸಂಪರ್ಕದಿಂದ ಕುಟುಂಬ ವರ್ಗದವರಿಗೆ ಒಳಿತಾಗುವುದು. ಪಿತ್ರಾರ್ಜಿತ ಆಸ್ತಿ ವಿಚಾರಗಳು ಇತ್ಯರ್ಥವಾಗಲು ಗ್ರಹಗಳು ಅನುಕೂಲಕರವಾಗಿದೆ.

ಶ್ರೀ ಲಕ್ಷ್ಮೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-8

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯ,ಯಿ,ಯು)

ಜೀವನದಲ್ಲಿ ಏಳು ಬೀಳುಗಳು ಸಾಮಾನ್ಯ. ಪಂಚಮ ಶನಿ-ಅಷ್ಟಮ ಗುರು ನಿಮ್ಮನ್ನು ಕಾಡಿಸುತ್ತಿದ್ದಾರೆ. ಎಲ್ಲ ಬೀಗಕ್ಕೂ ಒಂದು ಕೀಲಿ ಕೈ ಇರುವಂತೆ ನಿಮ್ಮ ರಾಶಿಗೆ ನಗುಮುಖ ನೀಡಲು ಚಂದ್ರಗ್ರಹ ಸಂಚಾರ ಚೆನ್ನಾಗಿದೆ. ಯಾವುದನ್ನೂ ಆತುರದಿಂದ ಮಾಡಬೇಡಿ. ಸ್ಥಿರಾಸ್ತಿ ವಿಚಾರಗಳು ನಿಧಾನವಾಗಿ ಫಲ ನೀಡುವುದು. ನಿಮ್ಮ ಮಕ್ಕಳೇ ನಿಮ್ಮ ವಿರೋಧ ಮಾತನಾಡಬಹುದು.

ಶ್ರೀ ನೃಸಿಂಹ ಋಣಮೋಚಕ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ವಾರದಾರಂಭಕ್ಕೆ 'ಲಾಭಾ ಲಬೌ ಜಯಾ ಜಯಾ' ಎಂಬ ಗೀತ ವಾಣಿಯಂತೆ ಆದಾಯ-ವ್ಯಯಗಳು ಸಮಾನವಾಗಿ ನಡೆಯುವುದು. ಬೇಡದ ವೆಚ್ಚಗಳು ಎದುರಾಗುವುದು. ಈ ವಾರ ನೀವು ದೊಡ್ಡ ನಿರ್ಧಾರ ತೆಗೆದುಕೊಳ್ಳಬೇಕಾದರೆ, ಅಂತಿಮಗೊಳಿಸುವ ಮೊದಲು ಕುಟುಂಬದ ಸದಸ್ಯರ ಅಭಿಪ್ರಾಯ ತೆಗೆದುಕೊಳ್ಳಿ. ವಾರ ಮಧ್ಯೆ ವ್ಯಾಪಾರ, ವ್ಯವಸಾಯಗಳು ಚೆನ್ನಾಗಿ ನಡೆಯುವುದು.

ಶ್ರೀ ದತ್ತ ಗುರು ಆರಾಧನೆ, ಶುಭ ಸಂಖ್ಯೆ-7

ಮಕರ (ಬೊ,ಜ,ಜಿ,ಖಿ,ಖು,ಖೆ,ಖೊ,ಗ,ಗಿ)

ವಾರದ ಆದಿಗೆ ರೆಡಿಮೇಡ್ ವಸ್ತು ವ್ಯಾಪಾರ ಹಾಗೂ ಖಾದ್ಯ ತೈಲ ತಯಾರಿಕರಿಗೆ ಗರಿಷ್ಠ ವ್ಯಾಪಾರ ಮತ್ತು ಕೈ ತುಂಬ ಧನಲಾಭವಾಗುವುದು. ಶ್ರಮಿಕ ವರ್ಗದವರಿಗೆ ಸರ್ಕಾರದ ಸಹಾಯಹಸ್ತ ದೊರೆಯಲಿದೆ. ರೈತರು ಬೆಳೆದ ಬೆಳೆಗೆ ಸೂಕ್ತ ಧಾರಣೆ ದೊರೆಯುವುದು. ರಾಹು-ಕೇತುಗಳು ಮಾರಕರಿದ್ದು, ಕೆಟ್ಟ ಅಭ್ಯಾಸಗಳ ದಾಸರಾಗಬೇಡಿ. ಜೂಜು-ಪಂಥ ಎಂದಿಗೂ ಲಾಭ ತರದು.

ಶ್ರೀ ಅಷ್ಟೋತ್ತರ ಮಂತ್ರ ಪಠಿಸಿ. ಶುಭ ಸಂಖ್ಯೆ-9

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಇದು ವ್ಯವಹಾರಿಕವಾಗಿ ಚುರುಕಿನ ವಾರ. ಹಿಂದೆ ಉಂಟಾಗಿದ್ದ ಆರ್ಥಿಕ ನಷ್ಟಗಳು ಮರುಗಳಿಕೆ ಆಗುವುದು. ಉತ್ತಮ ಹಾಗೂ ಸಜ್ಜನರ ಸಂಪರ್ಕ ನಿಮ್ಮ ಜೀವನದ ದಿಶೆಯನ್ನೇ ಬದಲಾಯಿಸಲಿದೆ. ದ್ವಿತೀಯ ಶನಿದೇವ ಕೆಟ್ಟ ನಿರ್ಧಾರಗಳಿಗೆ ಪ್ರೇರಣೆ ಆಗುವುದು. ನೆರೆಹೊರೆಯಲ್ಲಿ ಈರ್ಷಾ ಸ್ವಭಾವವನ್ನು ತ್ಯಜಿಸಿ ವಿಹಾರಾರ್ಥ ಪ್ರಯಾಣಗಳಲ್ಲಿ ಜಲಾಶಯಗಳ ಹತ್ತಿರ ಎಚ್ಚರವಾಗಿರಿ.

ಶ್ರೀ ಶನಿಮಹಾತ್ಮೆ ಕಥೆ ಓದಿ. ಶುಭ ಸಂಖ್ಯೆ-5

ಮೀನ (ದಿ,ದು,ಖ,ಝ,ಥ,ದೆ,ದೊ,ಚ,ಚಿ)

ವಾರದ ಆರಂಭ ಚೆನ್ನಾಗಿದೆ. ವಸ್ತ್ರಾಭರಣ ವ್ಯಾಪಾರಗಳು ಲಾಭದಲ್ಲಿ ನಡೆಯುವುದು. ಜನ್ಮ ರಾಶಿಯಲ್ಲಿ ಶನಿ ಇದ್ದಾಗ್ಯೂ ಮರಳುಗಾಡಿನಲ್ಲಿ ಓಯಸಿಸ್ ಎಂಬಂತೆ ನಿಮ್ಮ ರಾಶ್ಯಾಧಿಪತಿ ಗುರು ಅತಿಚಾರ ಚಲನೆಯಿಂದ ಪಂಚಮಕ್ಕೆ ಬಂದಿರುವುದು, ನಿಮಗೆ ಉನ್ನತ ಸ್ಥಾನವೂ, ಗೌರವಾನ್ವಿತ ವ್ಯಕ್ತಿಗಳ ಸಂಪರ್ಕವೂ ದೊರೆಯುವ ಸಂಭವ ಇರುತ್ತದೆ. ನೀವು ಇಷ್ಟಪಟ್ಟಿದ್ದನ್ನು ಅಯಾಚಿತವಾಗಿ ಪಡೆಯುವಿರಿ.

ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-2

ಗ್ರಾಮೀಣ ದಸರಾ ಕವಿಗೋಷ್ಠಿ ಉದ್ಘಾಟನೆ

ಮನಸ್ಸನ್ನು ಅರಳಿಸುವ ಕವಿತೆ ಸೃಷ್ಟಿಯಾಗಲಿ, ಕೆರಳಿಸುವ ಕವಿತೆಗಳಲ್ಲ

ಹೆಚ್.ಡಿ.ಕೋಟೆ: ಕವಿಗಳು ರಚಿಸುವ ಕವಿತೆಗಳು ವರ್ತಮಾನದ ಆಗು ಹೋಗುಗಳಿಗೆ ಸ್ಪಂದಿಸಬೇಕು ಎಂದು ಸಾಹಿತಿ ರಂಗನಾಥ್ ಮೈಸೂರು ಹೇಳಿದರು.

ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ 'ಗ್ರಾಮೀಣ ದಸರಾ ಕವಿಗೋಷ್ಠಿ'ಯನ್ನು ಉದ್ಘಾಟಿಸಿ ಮಾತನಾಡಿ ನಮ್ಮೊಳಗಿನ ಭಾವಗಳ ಅಭಿವ್ಯಕ್ತಿಯನ್ನು ಕವಿತೆ ಎನ್ನುವುದಾದರೆ ಅದು ವ್ಯಷ್ಟಿ ಹಿತಕ್ಕಿಂತ ಸಮಷ್ಟಿ ಹಿತಕ್ಕೆ ಹೆಚ್ಚು ಒತ್ತುಕೊಡಬೇಕು. ಮನಸ್ಸನ್ನು ಅರಳಿಸುವ ಕವಿತೆಗಳು ಹೆಚ್ಚು ಸೃಷ್ಟಿಯಾಗಬೇಕೇ ವಿನ ಕೆರಳಿಸುವ ಕವಿತೆಗಳಲ್ಲ ಎಂದರು.

ನಮ್ಮ ನವೋದಯ, ದಲಿತ, ಬಂಡಾಯ ಕವಿತೆಗಳು ಕನ್ನಡ ಸಾಹಿತ್ಯದಲ್ಲಿ ಕಂಡು ಬಂದಿವೆ. ಕವಿಗೆ ಸಹೃದಯರ ಬೆಂಬಲವೂ ಮುಖ್ಯವಾದುದು. ಕೇಳುಗರಿಲ್ಲದ ಕವಿತೆ ಮುಡಿಯುವವರಿಲ್ಲದ ಮಲ್ಲಿಗೆಯಂತೆ. ಇಂದು ಕೇಳುವ ಕಿವಿಗಳಿಗಿಂತ ಬರೆಯುವ ಕವಿಗಳೇ ಹೆಚ್ಚಾಗಿದ್ದಾರೆ. ಕವಿಗೋಷ್ಠಿಗಳಲ್ಲಿ ಕವಿತೆ ವಾಚಿಸುವವರ ಸಂಖ್ಯೆ ಅಪಾರವಾಗಿದೆ. ಉತ್ತಮ ಕವಿತೆಗಳ ಸೃಷ್ಟಿಗೆ ಹಿರಿಯ ಕವಿಗಳ ಕಾವ್ಯಗಳನ್ನು ಅಧ್ಯಯನ ಮಾಡುವ ಅಗತ್ಯ ಹೆಚ್ಚಾಗಿದೆ ಎಂದರು.



ಆದಿಚುಂಚನಗಿರಿ ಪ್ರಥಮದರ್ಜೆ ಕಾಲೇಜಿನಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿದ್ದ ಗ್ರಾಮೀಣ ದಸರಾ ಕವಿಗೋಷ್ಠಿಯಲ್ಲಿ ಪ್ರಮಾಣ ಪತ್ರ ನೀಡುತ್ತಿರುವುದು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಗ್ರಾಮೀಣ ಬರಹಗಾರರಿಗೆ ವೇದಿಕೆ ಒದಗಿಸಿ ಕೊಡುವ ಕೆಲಸವನ್ನು ಗ್ರಾಮೀಣ ದಸರಾ ಕವಿಗೋಷ್ಠಿಯ ಮೂಲಕ ಕಳೆದ 9 ವರ್ಷಗಳಿಂದಲೂ ಮಾಡುತ್ತಿರುವುದು ಸಂತಸದ ಸಂಗತಿ. ಇದಕ್ಕಾಗಿ ಕನ್ನಡ ಪ್ರಮೋದ್ ಅಭಿನಂದನಾರ್ಹರು ಎಂದು ರಂಗನಾಥ್ ನುಡಿದರು.

ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಮೈಸೂರು ಸಾಹಿತ್ಯ ದಾಸೋಹದ ಸಂಸ್ಥಾಪಕ ಹಾಗೂ ಹಿರಿಯ ಲೇಖಕ ಎಂ.ಆರ್.ಆನಂದ್ ಕವಿಗೋಷ್ಠಿಯಲ್ಲಿ ಎಲ್ಲ ಕವಿಗಳೂ ಉತ್ತಮ ಕವಿತೆಗಳನ್ನು ಪ್ರಸ್ತುತಪಡಿಸಿದ್ದಾರೆ. ನಗರ ಪ್ರದೇಶಗಳಿಗಿಂತ ಗ್ರಾಮೀಣ ಮಟ್ಟದ ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ಕಲ್ಪಿಸಿಕೊಡಬೇಕಾದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿ ಕವಿಗೋಷ್ಠಿಗಳನ್ನು ಆಯೋಜಿಸುವ ಮೂಲಕ ಯುವಪೀಳಿಗೆಯನ್ನು ಸಾಹಿತ್ಯದತ್ತ ಆಕರ್ಷಿಸಬಹುದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಎಂ.ಮಧುಕುಮಾರ್, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ, ಕೋಶಾಧ್ಯಕ್ಷ ಸಿದ್ದರಾಜು, ಸ್ವಾಮಿ, ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಚನ್ನಕೇಶವ ನಾಯಕ, ಚಂದನ, ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ ಗೌಡ ಮತ್ತಿತರರು ಉಪಸ್ಥಿತರಿದ್ದರು. ಕಾಳೇಗೌಡ, ಎಂ. ಕುಮಾರಿ, ಮಹದೇವಯ್ಯ, ಮಹದೇವ, ಕಿತ್ತೂರು ಭಾಸ್ಕರ್, ಬಾಲಸುಬ್ರಹ್ಮಣ್ಯಂ, ಚೇತನ್, ಸಂಜಯ್ ರಾಮೇನಹಳ್ಳಿ, ಸಿದ್ದರಾಜು ಕವಿಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಕಾಲೇಜು ವಿದ್ಯಾರ್ಥಿಗಳಿಂದ ನಾಡಗೀತೆ ಮತ್ತು ಪ್ರಾರ್ಥನೆಯ ನಂತರ ಎಚ್.ಡಿ. ಕೋಟೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕನ್ನಡ ಪ್ರಮೋದ್ ಪ್ರಾಸ್ತಾವಿಕ ನುಡಿಗಳನ್ನಾಡಿ ಸ್ವಾಗತಿಸಿದರು. ಕನ್ನಡ ಅಧ್ಯಾಪಕಿ ಡಿ.ಚಂದನ ಕಾರ್ಯಕ್ರಮ ನಿರೂಪಿಸಿ ವಂದಿಸಿದರರು.

ದುಶ್ಚಟ ಬಿಟ್ಟು ಬಲಾಢ್ಯರಾಗಲು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಿ

ಗ್ರಾಮೀಣ ಪ್ರೀಮಿಯರ್ ಲೀಗ್ ಕ್ರಿಕೇಟ್ ಸೀಸನ್ ಉದ್ಘಾಟನೆ

ತಿ.ನರಸೀಪುರ, ಸೆ.27–ಯುವಕರು ಮಾನಸಿಕವಾಗಿ, ದೈಹಿಕವಾಗಿ, ಉತ್ತಮ ಆರೋಗ್ಯ ಪಡೆಯಲು ಕ್ರೀಡೆಗಳು ಬಹಳ ಅವಶ್ಯಕವಾಗಿದ್ದು,ಯುವಕರು ದುಶ್ಚಟಗಳಿಂದ ದೂರವಿದ್ದು ದೈಹಿಕವಾಗಿ ಬಲಾಢ್ಯರಾಗಲು ಕ್ರೀಡೆ ವ್ಯಾಯಾಮದಂತಹ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕೆಂದು ಮೈಮುಲ್ ನಿಕಟಪೂರ್ವ ಅಧ್ಯಕ್ಷ ಆರ್. ಚೆಲುವರಾಜು ಹೇಳಿದರು.



ಬ್ಯಾಟಿಂಗ್ ಮಾಡುವ ಮೂಲಕ ಕ್ರಿಕೆಟ್ ಉದ್ಘಾಟಿಸಿದ ಆರ್.ಚೆಲುವರಾಜು.


ತಾಲೂಕಿನ ತುಂಬಲ ಗ್ರಾಮದ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ರಂಗಾಚಾರಿಹುಂಡಿ ಗ್ರಾಮೀಣ ಕ್ರಿಕೆಟ್ ಪ್ರೀಮಿಯರ್ ಲೀಗ್ ಸೀಸನ್ 1 ಅನ್ನು ಬ್ಯಾಟಿಂಗ್ ಮಾಡುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸಕ್ತ ಪರಿಸ್ಥಿತಿಯಲ್ಲಿ ಹಲವಾರು ಯುವಕರು ಮಾದಕ, ಮದ್ಯಪಾನ, ಧೂಮಪಾನ ಚಟಗಳಿಗೆ ಬಲಿಯಾಗುತ್ತಿದ್ದಾರೆ. ಹೆತ್ತವರು ಮಕ್ಕಳ ಮೇಲೆ ಅನೇಕ ಕನಸುಗಳನ್ನು ಇಟ್ಟುಕೊಂಡಿರುತ್ತಾರೆ. ತಮ್ಮ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳುವ ಗುರಿಯನ್ನು ಯುವಕರು ಹೊಂದಿರಬೇಕು. ಯುವಕರು ಉಜ್ವಲ ಭವಿಷ್ಯಕ್ಕಾಗಿ ವಿದ್ಯಾಭ್ಯಾಸದ ಅವಧಿಯಲ್ಲಿ ಉತ್ತಮವಾಗಿ ಓದಬೇಕು. ನವಸಮಾಜ ನಿರ್ಮಾಣ ಮಾಡಬೇಕು ಎಂದು ಸಲಹೆ ನೀಡಿದರು.

ಪಂದ್ಯಾವಳಿ ಆಯೋಜಕರಾದ ಕೃಷ್ಣ ಮಾತನಾಡಿ, ಮೂರು ದಿನಗಳವರೆಗೆ ನಡೆಯಲಿರುವ ಕ್ರಿಕೆಟ್ ಪಂದ್ಯಾವಳಿಯಲ್ಲಿ ತಿ.ನರಸೀಪುರ ತಾಲೂಕಿನ 10 ತಂಡಗಳು ಹಾಗೂ ಇತರೆ ತಾಲೂಕು, ಜಿಲ್ಲೆಯ 14 ತಂಡಗಳು ಭಾಗವಹಿಸಿದ್ದು, ಪ್ರಥಮ ಬಹುಮಾನವಾಗಿ 44,444 ರೂ.ಗಳ ನಗದು ಹಾಗು ಆಕರ್ಷಕ ಟ್ರೋಫಿ, ದ್ವಿತೀಯ ಬಹುಮಾನ 22,222 ಹಾಗೂ ತೃತೀಯ ಬಹುಮಾನವಾಗಿ 11,111 ರೂ.ಗಳ ನಗದು ಹಾಗು ಆಕರ್ಷಕ ಟ್ರೋಫಿ ನೀಡಲಾಗುತ್ತಿದೆ, ಅಲ್ಲದೇ ಬೆಸ್ಟ್ ಬ್ಯಾಟ್ಸ್ ಮನ್, ಬೌಲರ್, ಪಂದ್ಯಶ್ರೇಷ್ಠ ಮತ್ತು ಸರಣಿ ಶ್ರೇಷ್ಠ ಪ್ರಶಸ್ತಿಗಳನ್ನು ನೀಡಲಾಗುತ್ತದೆ ಎಂದರು.

ಪಂದ್ಯಾವಳಿಯ ಆಯೋಜಕರಾದ ಪ್ರತಾಪ್, ಹೇಮಂತ್, ನಟರಾಜು, ಸುಶಾಂತ್, ಉಮೇಶ್, ಕಿರಣ ಸೇರಿದಂತೆ ಮತ್ತಿತರರಿದ್ದರು.

ಮುಖ್ಯಮಂತ್ರಿಗಳನ್ನು ಅಭಿನಂದಿಸಿದ ಮೈಲ್ಯಾಕ್ ಅಧ್ಯಕ್ಷ



ಮೈಸೂರು ಪೇಯಿಂಟ್ಸ್ ಮತ್ತು ವಾರ್ನಿಷ್ (ಮೈಲ್ಯಾಕ್) ಅಧ್ಯಕ್ಷರಾಗಿ ನೇಮಕಗೊಂಡಿರುವ ಪಿರಿಯಾಪಟ್ಟಣ ತಾಲೂಕಿನ ಕಾಂಗ್ರೆಸ್ ಮುಖಂಡ ಹೆಚ್.ಡಿ.ಗಣೇಶ್ ಅವರು ಶನಿವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ 'ಸಾಧನೆಂಯೇ ಬದುಕು' ಪುಸ್ತಕವನ್ನು ನೀಡಿ ಅಭಿನಂದಿಸಿದರು. ಈ ವೇಳೆ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್, ಎಸ್.ಬಿ.ಮಹದೇವ್, ಮೈಸೂರು ಜಿಲ್ಲಾ ಕೆಎಸ್ಆರ್‌ಟಿಸಿ ನೌಕರರ ಸಂಘದ ಅಧ್ಯಕ್ಷ ಜವರೇಗೌಡ, ಹಳ್ಳಿಕೆರೆ ಹುಂಡಿ ಶಿವಕುಮಾರ್ ಇತರರು ಉಪಸ್ಥಿತರಿದ್ದರು.

ಗಮನ ಸೆಳೆದ ದಸರಾ ಬೊಂಬೆಗಳ ಪ್ರದರ್ಶನ

ಹುಣಸೂರು, ಸೆ27– ನಗರದ ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯಲ್ಲಿ ಪ್ರತೀ ವರ್ಷದಂತೆ ಈ ವರ್ಷವೂ ದಸರಾ ಬೊಂಬೆ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗಿದೆ. ನೂರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಮೈಸೂರು ದಸರಾ ನಾಡಿನ ಪ್ರಮುಖ ಸಾಂಸ್ಕೃತಿಕ ಹಬ್ಬವಾಗಿದ್ದು, ಅದೇ ಹಬ್ಬದ ಸೊಗಡನ್ನು ಶಾಲೆಯಲ್ಲಿಯೂ ಗೋಚರಿಸುವಂತೆ ವಿಶೇಷವಾಗಿ ಗೊಂಬೆಗಳನ್ನು ಕೂರಿಸಲಾಗಿತ್ತು.

ಸತತ ಐದನೇ ವರ್ಷ ಸಂಭ್ರಮವಾಗಿ ನಡೆಯುತ್ತಿರುವ ಈ ಬೊಂಬೆ ಉತ್ಸವದಲ್ಲಿ ನೂರಾರು ಬಗೆಯ ಗೊಂಬೆಗಳ ಪ್ರದರ್ಶನ ಗಮನ ಸೆಳೆಯಿತು. ರಾಜಾರಾಣಿಯರ ಗೊಂಬೆಗಳು, ಹಿಂದೂ ಸಂಪ್ರದಾಯದ ಮದುವೆಯ ಗೊಂಬೆಗಳು, ರಾಮಾಯಣ ಹಾಗೂ ಮಹಾಭಾರತದ ಕಥೆಗಳ ಗೊಂಬೆಗಳು, ವಿಷ್ಣುವಿನ ಅವತಾರಗಳು, ನವದುರ್ಗೆಯರ ಗೊಂಬೆಗಳು,



ಹುಣಸೂರಿನ ಟ್ಯಾಲೆಂಟ್ ಶಿಕ್ಷಣ ಸಂಸ್ಥೆಯಲ್ಲಿ ದಸರಾ ಬೊಂಬೆ ಉತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ.

ಮಾತೃ ವಾತ್ಸಲ್ಯವನ್ನು ಪ್ರತಿಬಿಂಬಿಸುವ ಗೊಂಬೆಗಳು, ಗ್ರಾಮೀಣ ಸಂಪ್ರದಾಯದ ಗೊಂಬೆಗಳು, ಸಂಗೀತ ಉಪಕರಣಗಳು, ಪಕ್ಷಿಗಳು, ದೇವತೆಗಳ ಗೊಂಬೆಗಳು ಹಾಗೂ ಮಕ್ಕಳಿಗೆ ಇಷ್ಟವಾಗುವ ಟಿವಿ ಪಾತ್ರಗಳ ಗೊಂಬೆಗಳು ಪ್ರದರ್ಶನ ವೈಶಿಷ್ಟ್ಯವಾಗಿ ಹೊರಹೊಮ್ಮಿದೆ. ಪ್ರತಿನಿತ್ಯ ಪೋಷಕರು ಮತ್ತು ಸಾರ್ವಜನಿಕರು ಶಾಲೆಗೆ ಭೇಟಿ ನೀಡಿ ಗೊಂಬೆ ಪ್ರದರ್ಶನ ವೀಕ್ಷಿಸಿ ಮೆಚ್ಚುಗೆ ವ್ಯಕ್ತ ಪಡಿಸುತ್ತಿದ್ದಾರೆ.

ಜಯಪುರ ಜಾಮಿಯಾ ಮಸೀದಿಗೆ ವಕ್ಫ್ ಕಮಿಟಿ ಭೇಟಿ



ಮೈಸೂರು ತಾಲೂಕು ಜಯಪುರ ಗ್ರಾಮದ ಜಾಮಿಯಾ ಮಸೀದಿಗೆ ಮೈಸೂರು ಜಿಲ್ಲಾ ವಕ್ಫ್ ಕಮಿಟಿ ಅಧ್ಯಕ್ಷ ಅಜೀಜ್ ಉಲ್ಲಾ (ಅಜ್ಜು) ಇತ್ತೀಚೆಗೆ ಭೇಟಿ ನೀಡಿ ಮುಸ್ಲಿಂ ಬಾಂಧವರ ಕುಂದು–ಕೊರತೆ ಆಲಿಸಿದರು. ಈ ವೇಳೆ ಜಯಪುರ ಜಾಮಿಯಾ ಮಸೀದಿ ಕಮಿಟಿ ಅಧ್ಯಕ್ಷ ಮಹಮ್ಮದ್ ಆಲಿ, ಉಪಾಧ್ಯಕ್ಷ ನಜೀರ್ ಅಹಮದ್, ಕಾರ್ಯದರ್ಶಿ ಅಬ್ದುಲ್ ಮುತಾಲಿಕ್, ಮೊಹಿಯುದ್ದೀನ್ ಇತರರು ಉಪಸ್ಥಿತರಿದ್ದರು.

ಜಿಂಕೆ ಮಾಂಸ ಮಾರಾಟಕ್ಕೆ ಯತ್ನ: ಒಬ್ಬನ ಬಂಧನ



ಹೆಚ್.ಡಿ.ಕೋಟೆ: ಅಕ್ರಮವಾಗಿ ಜಿಂಕೆ ಮಾಂಸ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಬಂಧಿಸಿದ್ದಾರೆ.

ತಾಲೂಕಿನ ಹ್ಯಾಂಡ್‌ಪೋಸ್ಟ್ ಘಟಕದ ವಲಯ ಅರಣ್ಯಾಧಿಕಾರಿ ಖಚಿತ ಮಾಹಿತಿಯ ಮೇರೆಗೆ ಎಸ್‌ಟಿಪಿಎಫ್ ತಂಡ, ಹೆಚ್.ಡಿ.ಕೋಟೆ ಪಟ್ಟಣದ ಉಪ ನೊಂದಣಾಧಿಕಾರಿರವರ ಕಛೇರಿಯ ಮುಂಬಾಗವಿರುವ ಟೀ ಅಂಗಡಿಯ ಹತ್ತಿರ, ಅಕ್ರಮವಾಗಿ ಜಿಂಕೆ ಮಾಂಸವನ್ನು ಮಾರಾಟ ಮಾಡಲು ಯತ್ನಿಸುತ್ತಿದ್ದ ಪಟ್ಟಣದ ವಿದ್ಯಾನಗರದ ನಿವಾಸಿ ಎಂ.ಕುಮಾರ ಬಿನ್ ಮರಿಶೆಟ್ಟಿ(36) ಬಂಧಿಸಿದ್ದು, ಮಾಂಸವನ್ನು ವಶಪಡಿಸಿಕೊಳ್ಳಲಾಗಿದೆ.

ನಂತರ ಎಚ್.ಡಿ. ಕೋಟೆ ವಲಯ ಅರಣ್ಯಾಧಿಕಾರಿಗಳು, ಪ್ರಾದೇಶಿಕ ವಲಯಕ್ಕೆ ಈ ಪ್ರಕರಣವನ್ನು ಹಸ್ತಾಂತರಿಸಲಾಗಿದ್ದು, ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದೇ ಸಂದರ್ಭದಲ್ಲಿ ವಲಯ ಅರಣ್ಯಾಧಿಕಾರಿ ರಾಮಾಂಜನೇಯುಲು, ಡಿಆರ್‌ಎಫ್‌ಒಗಳಾದ ವಿನೋದ್ ಟಿ.ಎಸ್, ಜ್ಯೋತಿ ಕುಮಾರ್, ಅಪ್ಪಣ್ಣಕಾಂಬ್ಳೆ, ಸಂತೋಷ್ ಕಮಣೂರೆ, ಕೋಟೆ ವಲಯದ ಡಿಆರ್‌ಎಫ್‌ಓ ಮಹೇಶ್, ಬೀಟ್ ಪ್ರೆಸ್ಟರ್‌ಗಳಾದ ಮಲ್ಲಿಕಾರ್ಜುನ್, ಸುರೇಶ ಕಲ್ಲಪ್ಪ ಪೂಜೇರಿ, ನಿಂಗರಾಜು, ಉಮೇಶ, ಬೋಳ, ಕವಿನ, ಕಾಳ, ನಾಗೇಂದ್ರ, ಅರ್ಚನ ಚಾಲಕ ಆದಿತ್ಯ ಭಾಗವಹಿಸಿದ್ದರು.

ಕುರುಬ ಸಮುದಾಯವನ್ನು ಎಸ್‌ಟಿಗೆ ಸೇರಿಸಲು ವಾಲ್ಮೀಕಿ ಮಹಾಸಭಾ ವಿರೋಧ

ನಂಜನಗೂಡು: ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಮೀಸಲಾತಿ ನೀಡುವುದನ್ನು ತಾಲ್ಲೂಕು ವಾಲ್ಮೀಕಿ ನಾಯಕ ಮಹಾಸಭಾ ವಿರೋಧಿಸುತ್ತದೆ ಎಂದು ಮಹಾಸಭಾದ ಸಂಚಾಲಕ ಹುಲ್ಲಹಳ್ಳಿ ಜೆ.ನಾಗೇಂದ್ರ ಹೇಳಿದರು.

ನಗರದ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದ ಅವರು, ಹಿಂದುಳಿದ ವರ್ಗಗಳ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸುವ ನೆಪದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜಾತಿಗಣತಿ ನಡೆಸುತ್ತಿದ್ದಾರೆ, ಹಿಂದೆ ದೇವರಾಜ ಅರಸು ಅವರು ತುಳಿತಕ್ಕೊಳಗಾದ ಸಮುದಾಯಗಳನ್ನು,



ಪತ್ರಿಕಾಗೋಷ್ಠಿಯಲ್ಲಿ ಮಹಾ ಸಭಾ ಸಂಚಾಲಕ ಹುಲ್ಲಹಳ್ಳಿ ಜೆ.ನಾಗೇಂದ್ರ ಮಾತನಾಡಿದರು.

ಮೇಲೆತ್ತುವ ಸಲುವಾಗಿ ಹಾವನೂರ್ ಆಯೋಗ ರಚಿಸಿದ್ದರು, ರಾಜ್ಯದಲ್ಲಿ 3ನೇ ಹೆಚ್ಚು ಜನಸಂಖ್ಯೆ ಹೊಂದಿರುವ ನಾಯಕ ಸಮುದಾಯಕ್ಕೆ ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಗಳಾಗಿದ್ದಾಗ ಶೇ.3 ರಷ್ಟಿದ್ದ ಮೀಸಲಾತಿ ಪ್ರಮಾಣವನ್ನು ಶೇ.7 ಹೆಚ್ಚಿಸಿದ್ದರು, ಆ ಮೀಸಲಾತಿ ಮೇಲೆ ಕಣ್ಣು ಹಾಕಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಜಾತಿ ಗಣತಿ ನಡೆಸುವ ಮೂಲಕ ತಮ್ಮ ಕುರುಬ ಸಮಾಜವನ್ನು ಮುಂಚೂಣಿಗೆ ತರುವ ಮೂಲಕ ನಾಯಕ ಸಮಾಜದ ಮೀಸಲಾತಿಯಲ್ಲಿ ಸಿಂಹ ಪಾಲು ಪಡೆಯಲು ಹುನ್ನಾರ ನಡೆಸಿದ್ದಾರೆ, ನಮ್ಮ ಸಮಾಜದ ಸ್ವಾಮೀಜಿಗಳ ನೇತೃತ್ವದಲ್ಲಿ ಕುರುಬ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸುವ ಪ್ರಯತ್ನದ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲಾಗುವುದು ಎಂದು ಹೇಳಿದರು.

ಮುಖಂಡ ಸಿ.ಚಂದ್ರು ಮಾತನಾಡಿ, ನಾಯಕ ಸಮಾಜ ಸತತ 30–40 ವರ್ಷಗಳಿಂದ ಹೋರಾಟ ನಡೆಸಿ ಶೇ.7 ರಷ್ಟು ಮೀಸಲಾತಿ ಪಡೆದಿದ್ದೇವೆ, ಪ್ರಬಲ ಕುರುಬ ಸಮುದಾಯದವರು ಮುಖ್ಯಮಂತ್ರಿ, ಸಚಿವರು, ಕಾರ್ಖಾನೆ ಮಾಲೀಕ, ಗುತ್ತಿಗೆದಾರರಾಗಿದ್ದಾರೆ, ಆರ್ಥಿಕವಾಗಿ ಪ್ರಬಲರಾಗಿದ್ದಾರೆ, ಕುರುಬ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವುದು ನ್ಯಾಯಸಮ್ಮತವಲ್ಲ, ಸರ್ಕಾರದ ಈ ದೋರಣೆಯನ್ನು ಖಂಡಿಸಿ ನಾಯಕ ಸಮುದಾಯ ಸರ್ಕಾರ ನಡೆಸುವ ವಾಲ್ಮೀಕಿ ಜಯಂತಿಯನ್ನು ಬಹಿಷ್ಕರಿಸುತ್ತದೆ ಎಂದು ಹೇಳಿದರು.

ಪತ್ರಿಕಾ ಗೋಷ್ಠಿಯಲ್ಲಿ ತಾಪಂ ಮಾಜಿ ಸದಸ್ಯ ಹೆಡತಲೆ ಮಹದೇವನಾಯಕ, ಗೋಪಿ, ಪುಟ್ಟರಂಗನಾಯಕ, ಕಸುವಿನಹಳ್ಳಿ ಕುಮಾರ್, ಕುಂಬರಳ್ಳಿ ಮಹೇಶ್, ಹುರ ಪ್ರಕಾಶ್, ಶಿವರಾಜು, ತಗಡೂರು ರಾಮು ಉಪಸ್ಥಿತರಿದ್ದರು.



ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆಯ ನೂತನ ನಿರ್ದೇಶಕ ಡಾ.ಬಿ. ದಿನೇಶ್ ಅವರನ್ನು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಬೈರಾಪುರ ಗ್ರಾಮದ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್ ಅಭಿನಂದಿಸಿದರು. ಸೋಮನಾಥಪುರ ಸಹಕಾರ ಸಂಘದ ಮಾಜಿ ಅಧ್ಯಕ್ಷ ಆರ್‌ಟಿಓ ಶಿವಣ್ಣ, ಮುಖಂಡ ಮಂಜುನಾಥ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ನಗರ್ಲೆಯಲ್ಲಿ ಡೇರಿ ವಾರ್ಷಿಕ ಮಹಾಸಭೆ

ನಗರ್ಲೆ: ನಂಜನಗೂಡು ತಾಲೂಕಿನ ನಗರ್ಲೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ನಡೆಯಿತು.

ಮೈಮುಲ್ ನಿರ್ದೇಶಕ ಬಿ.ಎನ್.ಸದಾನಂದ ಮಾತನಾಡಿ, ರೈತರು ಹೈನುಗಾರಿಕೆಗೆ ಹೆಚ್ಚು ಒತ್ತು ನೀಡಬೇಕು. ಒಕ್ಕೂಟದಿಂದ ಸಿಗುವ ವಿಮೆ ಸೌಲಭ್ಯ, ಮೇವು ಕಟಾವು ಯಂತ್ರ ಸೇರಿದಂತೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಪ್ರಗತಿ ಸಾಧಿಸಬೇಕು ಎಂದರು. ಅಧ್ಯಕ್ಷ ಎನ್.ಬಿ.ವೀರೇಂದ್ರ ಮಾತನಾಡಿದರು. ಈ ವೇಳೆ ಒಕ್ಕೂಟದ ವಿಸ್ತರಣಾಧಿಕಾರಿ ಶ್ರುತಿ, ಉಪಾಧ್ಯಕ್ಷೆ ಮಂಜುಳಾ, ನಿರ್ದೇಶಕರಾದ ಎನ್.ಇ.ಗುರುಸ್ವಾಮಿ, ಎಂ.ಎನ್.ರಾಜಶೇಖರಪ್ಪ ಎನ್.ಎಂ.ರಾಜು, ನಾಗೇಗೌಡ, ಎನ್.ಎಂ.ಮಹದೇವಸ್ವಾಮಿ, ಪಾಪಣ್ಣ, ಜಯಕುಮಾರ್, ನಾಗೇಂದ್ರಸ್ವಾಮಿ, ಚೆನ್ನಗೌರಮ್ಮ, ಸಿಇಓ ಎನ್.ಎಂ.ರಾಜೇಂದ್ರ ಇದ್ದರು.

ಸರಗೂರಲ್ಲಿ ಬೃಹತ್ ಆರೋಗ್ಯ ತಪಾಸಣಾ ಶಿಬಿರ

ಸರಗೂರು: ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆಯ ಆವರಣದಲ್ಲಿ ಶನಿವಾರ ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ವಿವೇಕಾನಂದ ಸ್ಮಾರಕ ಆಸ್ಪತ್ರೆ, ವರ್ತಕರ ಮಂಡಳಿ (ಸರಗೂರು), ಲಯನ್ಸ್ ಕ್ಲಬ್ ಆಫ್ ಸರಗೂರು, ಜೈನ್ ಮಿಲನ್ ಸರಗೂರು, ಲಯನ್ಸ್ ಕ್ಲಬ್ ಹೆಚ್.ಡಿ.ಕೋಟೆ, ರೋಟರಿ ಕ್ಲಬ್ ಹೆಚ್.ಡಿ.ಕೋಟೆ, ರಾಜಸ್ಥಾನ್ ಸಂಘ ಸರಗೂರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಹೆಚ್,ಡಿ, ಕೋಟೆ)ಯ ಸಹಭಾಗಿತ್ವದಲ್ಲಿ ಡಾ. ಸಿ.ಎನ್. ಮೃತ್ಯುಂಜಯಪ್ಪ ಟ್ರಸ್ಟ್ ನಿರ್ದೇಶಕರಾದ ಸುಧಾ ಮೃತ್ಯುಂಜಯಪ್ಪ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಆರೋಗ್ಯವನ್ನು ಸುಧಾರಿಸುವ ನಿಟ್ಟಿನಲ್ಲಿ ಎಲ್ಲಾ ಆರೋಗ್ಯ ಸೌಲಭ್ಯಗಳು ಒಂದೇ ಸೂರಿನಲ್ಲಿ ದೊರಕುವಂತೆ ವಿಶೇಷ ತಜ್ಞರ ತಂಡದಿಂದ ಬೃಹತ್ ಆರೋಗ್ಯ ತಪಾಸಣೆ ಶಿಬಿರವನ್ನು ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ಆಯೋಜಿಸಲಾಗಿರುವುದರಿಂದ ವಿಶೇಷವಾಗಿ ಗ್ರಾಮೀಣ ಮಹಿಳೆಯರು ಒತ್ತಡ ಮತ್ತು ಸವಾಲುಗಳನ್ನು ಮೀರಿ ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಲು ಅನುಕೂಲವಾಗಲಿದೆ ಎಂದರು. ವಿವೇಕಾನಂದ ಸ್ಮಾರಕ ಆಸ್ಪತ್ರೆ ಉಪನಿರ್ದೇಶಕರಾದ ಡಾ.ಶಂಕರ್ ಎಚ್.ಕೆ ಮಾತನಾಡಿ ಇಂದು ನೋಂದಣಿ ಮಾಡಿಕೊಂಡ ರೋಗಿಗಳಿಗೆ ಪೂರ್ಣ ಆರೋಗ್ಯ ತಪಾಸಣೆಯನ್ನು ಶೇ.10ರಷ್ಟು ರಿಯಾಯಿತಿಯನ್ನು ನೀಡಲಾಗುತ್ತದೆ. ಅಕ್ಟೋಬರ್ 31 ರವರೆಗೆ ಈ ಸೇವೆ ನೀಡಲಾಗುವುದು. ಮತ್ತು ಆಸ್ಪತ್ರೆಯಿಂದ 10 ಕಿ.ಮೀ ವ್ಯಾಪ್ತಿ ಒಳಗಿರುವ ಸಾರ್ವಜನಿಕರಿಗೆ ಮನೆ ಮನೆಗೆ ತೆರಳಿ ರಕ್ತ ಸಂಗ್ರಹಿಸಿ ರಿಪೋರ್ಟ್ ನೀಡುವ ಸೌಲಭ್ಯವನ್ನು ಆಸ್ಪತ್ರೆಯಿಂದ ಒದಗಿಸಲಾಗುತ್ತದೆ. ಸಾರ್ವಜನಿಕರು ಇದರ ಉಪಯೋಗವನ್ನು ಪಡೆದುಕೊಳ್ಳಿ ಎಂದರು.



ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ಗಣ್ಯರು ಉದ್ಘಾಟಿಸಿದರು.

ನಿವೃತ್ತ ಐ.ಪಿ.ಎಸ್ ಅಧಿಕಾರಿಗಳು ಮತ್ತು ಪದ್ಮಶ್ರೀ ಪುರಸ್ಕೃತ ಚಮನ್‌ಲಾಲ್ ಮಾತನಾಡಿದರು. ಶಿಕ್ಷಣ ಕಾರ್ಯಕ್ರಮಗಳ ಮುಖ್ಯಸ್ಥರಾದ ಪ್ರವೀಣ್ ಸಯ್ಯಪ್ಪರಾಜು ಆಸ್ಪತ್ರೆ ವ್ಯವಸ್ಥಾಪಕಿ ಸಂಧ್ಯಾ ಬಿ.ಜಿ, ಜೈನ್ ಮಿಲನ್ ಸೋಮಪ್ರಭ, ಸರಗೂರು ಲಯನ್ಸ್ ಕ್ಲಬ್ ಅಧ್ಯಕ್ಷ ನಾಗರಾಜು ಭಾಗವಹಿಸಿದ್ದರು.

ಸಹಕಾರ ಸಂಘದ ಅಭಿವೃದ್ಧಿಗೆ ಸಹಕರಿಸಿ



ಕುರಿ ಹುಂಡಿ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಉದ್ಘಾಟನೆ.

ಮಲ್ಕುಂಡಿ: ರೈತರು ಸಹಕಾರ ಸಂಘದಿಂದ ಶೂನ್ಯ ಬಡ್ಡಿ ದರದಲ್ಲಿ ಸಾಲ ಪಡೆದು ಸಕಾಲಕ್ಕೆ ಮರುಪಾವತಿಸಿ ಸಹಕಾರ ಸಂಘದ ಅಭಿವೃದ್ಧಿಗೆ ಸಹಕರಿಸಿ ಎಂದು ಕುರಿಹುಂಡಿ ಕೃಷಿ ಪತ್ತಿನ ಸಹಕಾರ ಸಂಘದ ಅದ್ಯಕ್ಷ ಮಂಜುನಾಥ್ ಹೇಳಿದರು.

ಸಮೀಪದ ಕುರಿಹುಂಡಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ರೈತರು ಬಹಳ ಕಷ್ಟ ಜೀವಿಗಳಾಗಿ ದುಡಿಯುತ್ತಿದ್ದಾರೆ.ಸಹಕಾರ ಸಂಘದಿಂದ ಸಾಲ ಪಡೆದ ರೈತರು ಸಕಾಲದಲ್ಲಿ ಸಾಲ ಮರುಪಾವತಿ ಮಾಡಿದರೆ ಸಂಘವು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಾಧ್ಯವಾಗುತ್ತದೆ. ಈಗಾಗಲೇ ನಮ್ಮ ಸಂಘಕ್ಕೆ 6.19.716 ರೂ ನಿವ್ವಳ ಲಾಭ ದೊರೆತ್ತಿದೆ ಮುಂದಿನ ದಿನಗಳಲ್ಲಿ ಸಂಘದ ಎಲ್ಲಾ ಸದಸ್ಯರ ಸಹಕಾರದಿಂದ ಹೆಚ್ಚಿನ ಲಾಭಾಂಶ ಬರಲು ಪ್ರಾಮಾಣಿಕವಾಗಿ ದುಡಿಯಬೇಕಿದೆ ಎಂದು ತಿಳಿಸಿದರು. ಸಂಘದ ಸಿಇಓ ಹರೀಶ್ ಅವರು 2024–25ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿಯನ್ನು ಮಂಡಿಸಿದರು. ಈ ವೇಳೆ ಸಂಘದ ಉಪಾಧ್ಯಕ್ಷ ಮಹದೇವಯ್ಯ, ನಿರ್ದೇಶಕರುಗಳಾ ಹೆಚ್.ಸಿ. ಕೆಂಡಗಣ್ಣಪ್ಪ, ಮಲ್ಲಾರಾಧ್ಯ, ಶ್ರೀನಿವಾಸಶೆಟ್ಟಿ, ಸಂಪತ್, ಬಸವರಾಜ್, ದೊಡ್ಡಸೋಮಣ್ಣ, ರಾಜೇಂದ್ರಕುಮಾರ್, ಮಾರ್ಕಂಡಯ್ಯ, ಮಾಲಮ್ಮ, ಮಹದೇವಮ್ಮ, ಸಹಕಾರ ಸಂಘದ ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಜಿ.ಎಸ್.ನಿರಂಜನ್ ಸೇರಿದಂತೆ ಪ್ರಮುಖರು ಹಾಜರಿದ್ದರು.

ನಷ್ಟದಿಂದ ಹೊರಬಂದ ಕುರುಬೂರು ಕೃಷಿ ಪತ್ತಿನ ಸಹಕಾರ ಸಂಘ

ಎಲ್ಲರ ಸಹಕಾರದಿಂದ ಬ್ಯಾಂಕು ಉತ್ತಮವಾಗಿ ನಡೆಯುತ್ತಿದೆ ಎಂದ ಅಧ್ಯಕ್ಷ

ತಿ.ನರಸೀಪುರ, ಸೆ.27– ಸಹಕಾರ ಸಂಘದ ಸದಸ್ಯರ ಸಹಕಾರ, ನಿರ್ದೇಶಕರ ಬೆಂಬಲ ಮತ್ತು ಸಮಯೋಚಿತ ಸಲಹೆ, ಸಿಬ್ಬಂದಿಗಳ ಪ್ರಾಮಾಣಿಕ ಕಾರ್ಯವೈಖರಿಯಿಂದಾಗಿ ಸಹಕಾರ ಸಂಘವು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದೆ ಎಂದು ಕುರುಬೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಗುರು ಬಸಪ್ಪ ಸಂತಸ ವ್ಯಕ್ತಪಡಿಸಿದರು.

ತಾಲೂಕಿನ ಕುರುಬೂರು ಗ್ರಾಮದ ಸಹಕಾರ ಸಂಘದ ಆವರಣದಲ್ಲಿ ಏರ್ಪಡಿಸಲಾಗಿದ್ದ 2024–2025ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದ ಅವರು, ಕಳೆದ ಸಾಲಿನ ನಷ್ಟದಿಂದ ಹೊರಬಂದಿದ್ದು ಲಾಭದಾಯಕದತ್ತ ಹೆಜ್ಜೆ ಇಟ್ಟಿದೆ ಎಂದರು.

ಸದಸ್ಯರು ಮತ್ತು ನಿರ್ದೇಶಕರ ಸಹಕಾರದಿಂದಾಗಿ ಸಂಘವು ವರ್ಷದಿಂದ ವರ್ಷಕ್ಕೆ ಅಭಿವೃದ್ಧಿ ಪಥದತ್ತ ಸಾಗುತ್ತಿದ್ದು,ಜಿಲ್ಲಾ ಬ್ಯಾಂಕು ನಮ್ಮ ಸಹಕಾರ ಸಂಘಕ್ಕೆ ಉತ್ತಮ ಸಹಕಾರ ಸಂಘವೆಂದು ಪ್ರಶಸ್ತಿ ನೀಡಿ ಗೌರವಿಸಿದೆ ಎಂದರು. ರೈತರಿಗೆ ಬೆಳೆ ಸಾಲವಾಗಿ 6 ಕೋಟಿ ರೂ.ಗಳನ್ನು ವಿತರಣೆ ಮಾಡಲಾಗಿದ್ದು ಸಾಲ ಪಡೆದ ರೈತರು ಸಮಯಕ್ಕೆ ಸರಿಯಾಗಿ ಸಾಲ ಮರು ಪಾವತಿ ಮಾಡುವ ಮೂಲಕ ಸಂಘದ ಬೆಳವಣಿಗೆಗೆ ಸಹಕಾರ ನೀಡಬೇಕು, ಸಾಲ ಮರು ಪಾವತಿ ಮಾಡಿದಲ್ಲಿ ಇನ್ನಿತರೆ ಸದಸ್ಯರಿಗೆ ಸಾಲವನ್ನು ನೀಡಲು ಸಹಾಯವಾಗಲಿದ್ದು, ಯಾರೂ ಸುಸ್ತಿದಾರರಾಗದೇ ಸಾಲದ ಮರು ಪಾವತಿ ಮಾಡಬೇಕು ಎಂದು ಮನವಿ ಮಾಡಿದರು.



ತಿ.ನರಸೀಪುರ ತಾಲೂಕು ಕುರುಬೂರು ಗ್ರಾಮದಲ್ಲಿ ಏರ್ಪಡಿಸಲಾಗಿದ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ಮಹಾಸಭೆಯನ್ನು ಸಂಘದ ಅಧ್ಯಕ್ಷ ಗುರು ಬಸಪ್ಪ ಉದ್ಘಾಟಿಸಿದರು.

ಸಂಘದ ವಾರ್ಷಿಕ ವರದಿ ಮಂಡಿಸಿದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಸಿ. ಶ್ರೀನಿವಾಸ ಮೂರ್ತಿ ಸಂಘವು 18.50 ಲಕ್ಷ ರೂ.ಗಳ ಕ್ರೋಢೀಕೃತ ನಷ್ಟ ಕಳೆದು ಪ್ರಸಕ್ತ ಸಾಲಿನಲ್ಲಿ 42 ಸಾವಿರ ರೂ.ಗಳ ನಿವ್ವಳ ಲಾಭ ಗಳಿಸಿದೆ.ಲಾಭಾಂಶ ದಲ್ಲಿ ಬದಲಾವಣೆ ಕಾಣ ಬೇಕಾದರೆ ಸರ್ವ ಸದಸ್ಯರು ಪಡೆದಿರುವ ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡಬೇಕಿದೆ ಎಂದರು.

ಈ ವೇಳೆ ಸಂಘದ ಉಪಾಧ್ಯಕ್ಷ ಕು.ಶಿ. ಭೃಂಗೀಶ್, ನಿರ್ದೇಶಕರಾದ ಚಿನ್ನಸ್ವಾಮಿ, ಕೆ.ಜಿ.ವೀರಣ್ಣ ಶಿವಣ್ಣ ಬಸವರಾಜು, ನಂಜುಂಡಯ್ಯ, ಶಿವರುದ್ರಮ್ಮ, ಭವ್ಯ, ಸೋಮಶೇಖರ್, ಡೈರಿ ಮಾಜಿ ಅಧ್ಯಕ್ಷ ಕೆ.ಸಿ.ವೀರೇಶ್, ರಾಜಪ್ಪ(ಜಗಪತಿ), ಅಶೋಕ, ಪಿ.ಅರುಣ ಕುಮಾರಿ ಸೇರಿದಂತೆ ಮತ್ತಿತರರಿದ್ದರು.

ಕುಮಾರ ನಿಧನ



ಎಚ್.ಡಿ.ಕೋಟೆ: ತಾಲೂಕಿನ ಮಗ್ಗೆ ಗ್ರಾಮದ ವಿನೋದ ಕುಮಾರ್ ಮತ್ತು ಸುಮಿತ್ರ ದಂಪತಿಯ ಪುತ್ರ ಕುಮಾರ (ನಾಗೇಂದ್ರ) ಶುಕ್ರವಾರ ಬೆಳಿಗ್ಗೆ ನಿಧನರಾಗಿದ್ದಾರೆ. ಅವರಿಗೆ 51 ವರ್ಷ ವಯಸ್ಸಾಗಿತ್ತು. ಶುಕ್ರವಾರ ಸಂಜೆ ಮಗ್ಗೆ ಗ್ರಾಮದಲ್ಲಿ ಇವರ ಅಂತ್ಯ ಸಂಸ್ಕಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೃತರು ಪತ್ನಿ ಗೀತಾ, ಮಗಳು ಸುಪ್ರಿಯ, ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅವರ ನಿಧನಕ್ಕೆ ಬಿಜೆಪಿಯ ಮುಖಂಡ ವೈ ಪಿ ನಾಗರಾಜು, ಊರಿನ ಗುಡಿಗೌಡರಾದ ನಂದೀಶ್, ಶಿವಕುಮಾರ್, ಪ್ರಕಾಶ್, ಪುನೀತ್, ಅಪರಂಜಿ, ನಾಗೇಂದ್ರ, ರಾಮಕೃಷ್ಣ, ಕಿಶೋರ್ ಕುಮಾರ, ರಾಮು ಸಂತಾಪ ಸೂಚಿಸಿದ್ದಾರೆ.

ಇಂದಿನ (ಸೆಪ್ಟೆಂಬರ್ 28) ದಸರಾ ಕಾರ್ಯಕ್ರಮಗಳು

ಸಾಂಸ್ಕೃತಿಕ ಕಾರ್ಯಕ್ರಮಗಳು





ಭುವನೇಶ್ವರಿ

ಅರಮನೆ ವೇದಿಕೆ

ಮ. 3.30 : ರಂಗಸ್ವಾಮಿ ಮತ್ತು ತಂಡದಿಂದ ನಾದಸ್ವರ
ಸಂ. 4.00 : ಡಾ. ರಾಗಿಣಿ ಮತ್ತು ತಂಡ, ತಮಿಳುನಾಡು ಅವರಿಂದ ಭಜನ್ ಸಂಗೀತ
ಸಂ. 5.00 : ಶ್ರೀಮತಿ ಎಚ್. ಭುವನೇಶ್ವರಿ ವೆಂಕಟೇಶ್ ಮತ್ತು ತಂಡದಿಂದ ಸುಗಮ ಸಂಗೀತ
ಸಂ. 6.00 : ಭೂಮ್ತಾಯಿ ಬಳಗ, ಬೆಂಗಳೂರು ಅವರಿಂದ ಪರಿವರ್ತನಾ ಗೀತೆಗಳು
ರಾ. 7.00 : ವಿಜಯ್ ಪ್ರಕಾಶ್ ಮತ್ತು ತಂಡದಿಂದ ಸಂಗೀತ ಯಾನ
ರಾ. 8.30 : ಪದ್ಮಶ್ರೀ ಡಾ. ಪದ್ಮಜ ರೆಡ್ಡಿ ತಂಡದಿಂದ ಕೂಚುಪುಡಿ ನೃತ್ಯ : ನವದುರ್ಗಾ

ಕಿರು ರಂಗ ಮಂದಿರ ವೇದಿಕೆ

ಬೆ. 10.30 : ಸಂಚಲನ, ಮೈಸೂರು ಅವರಿಂದ ಹರಕೆಯ ಕುರಿ
ಮ. 2.00 : ಕುಮಾರಿ ಶಿವಾನಿ ಶಿವದಾಸ ಸ್ವಾಮಿ, ಬೀದರ್ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ
ಮ. 3.00 : ಪೃಥ್ವಿ ಸಾಂಸ್ಕೃತಿಕ ಸಂಸ್ಥೆ, ಮೈಸೂರು ಅವರಿಂದ ನಾಟಕ : ಮುಪ್ಪು
ರಾ. 7.00 : ಮಾರ್ಗ ನೃತ್ಯಶಾಲೆ ಆಯನೂರು ಶಿವಮೊಗ್ಗ ಶ್ರುತಿ ಆದರ್ಶ್ ಅವರಿಂದ ನಾಟಕ : ನಿರಾಕರಣೆ

ಪುರಭವನ ವೇದಿಕೆ

ಬೆ. 10.30 : ರಮೇಶ್ ಹಂಚಿನಮನಿ ಮತ್ತು ತಂಡದಿಂದ ಪೌರಾಣಿಕ ನಾಟಕ : ರಕ್ತರಾತ್ರಿ
ಮ. 3.00 : ಶ್ರೀ ಸಿದ್ದೇಶ್ವರ ಕಲಾಸಂಘ, ಹಾಸನ, ಎಚ್.ಜಿ. ಗಂಗಾಧರ ಅವರಿಂದ ನಾಟಕ : ಕುರುಕ್ಷೇತ್ರ
ಸಂ. 6.00 : ಶ್ರೀ ನಾಗಾರ್ಜುನ ಕಲಾಸಂಘ, ತುಮಕೂರು, ತಿಪ್ಪೇಸ್ವಾಮಿ ಅವರಿಂದ ಪೌರಾಣಿಕ ನಾಟಕ : ಕುರುಕ್ಷೇತ್ರ

ಚಿಕ್ಕಗಡಿಯಾರ ವೇದಿಕೆ

ಸಂ. 5.00 : ಅಂಜನ ವೈ.ಟಿ. ಮತ್ತು ತಂಡ, ಚಿಕ್ಕಮಗಳೂರು ಅವರಿಂದ ಡೊಳ್ಳು ಕುಣಿತ
ಸಂ. 5.30 : ಜಗದೀಶ ಮತ್ತು ತಂಡದಿಂದ ಜನಪದ ಗಾಯನ
ಸಂ. 6.30 : ಕಿರಣ್‌ಕುಮಾರ್ ಎಸ್.ಕೆ. ಮತ್ತು ತಂಡ, ಹಾಸನ ಅವರಿಂದ ತತ್ವಪದ ಗಾಯನ
ರಾ. 7.30 : ರಾಮು ಮೂಲಗಿ ಮತ್ತು ತಂಡ, ಹುಬ್ಬಳ್ಳಿ ಅವರಿಂದ ಜನಪದ ಗಾಯನ
ರಾ. 8.30 : ಶ್ರೀ ದುರ್ಗಾ ಪರಮೇಶ್ವರಿ ಸಾಂಸ್ಕೃತಿಕ ರಂಗ ಸಾಹಿತ್ಯ ಕಲಾವಿದರ ಸಂಘ, ಲಕ್ಷ್ಮೀ ಕೆಂಪವ್ವ ಹರಿಜನ, ಬೆಳಗಾವಿ ಅವರಿಂದ ಸಣ್ಣಾಟ-ರಾಧಾನಾಟ

ನಾದಬ್ರಹ್ಮ ಸಂಗೀತಸಭಾ ವೇದಿಕೆ

ಸಂ. 5.00 : ನವದುರ್ಗಿ ಮಹಾತ್ಮೆ ರಂಗೋತ್ರಿ ತಂಡ, ಬೆಂಗಳೂರು ಅವರಿಂದ ನೃತ್ಯರೂಪಕ
ಸಂ. 5.30 : ಶಾಂಬಯ್ಯ ಮತ್ತು ತಂಡದಿಂದ ಜಾನಪದ ಗಾಯನ
ಸಂ. 6.30 : ಸಂತೋಷ್ ಪ್ರಸಾದ್ ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ
ರಾ. 7.30 : ಎಸ್. ಸರಸ್ವತಿ ಮತ್ತು ತಂಡದಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ
ರಾ. 8.30 : ಅನಂತೇಶ್ವರ ಟ್ರಸ್ಟ್, ಮೈಸೂರು ಅವರಿಂದ ಸುಗಮ ಸಂಗೀತ

ಗಾನಭಾರತಿ ವೇದಿಕೆ

ಸಂ. 4.30 : ಮೈಸೂರು ಜಿಲ್ಲಾ ಸೋಬಾನೆ ಪದ ಕಲಾವಿದರಿಂದ ಸೋಬಾನೆ ಪದ
ಸಂ. 5.30 : ಬಾಗಳಿ ಮಹಾದೇವ ಮತ್ತು ಮಹದೇವು ಪೂರಿಗಾಲಿ, ಪೂರಿಗಾಲಿ ತಂಡ (ಸಂಬುದ್ಧ) ಅವರಿಂದ ಜಾನಪದ ಗಾಯನ
ಸಂ. 6.30 : ಬೃಂದಾ ನಂಜುಂಡಸ್ವಾಮಿ ಮತ್ತು ತಂಡ, ಮೈಸೂರು ಅವರಿಂದ ಭರತನಾಟ್ಯ
ರಾ. 7.30 : ಶ್ರೀ ನಟರಾಜ ನಾಟ್ಯಾಲಯ, ತುಮಕೂರು ಅವರಿಂದ ಭರತನಾಟ್ಯ
ರಾ. 8.30 : ಡಿ.ಬಿ. ನಿಂಗಪ್ಪ ಮತ್ತು ತಂಡ, ವಿಜಯನಗರ ಅವರಿಂದ ಸುಗಮ ಸಂಗೀತ

ರಮಾಗೋವಿಂದ ರಂಗಮಂದಿರ ವೇದಿಕೆ

ಸಂ. 4.00 : ಹರೀಶ ಬಿ.ಪಿ. ಮತ್ತು ತಂಡದಿಂದ ನಾದಸ್ವರ
ಸಂ. 4.30 : ನೀಲಾಲಯ ನೃತ್ಯಕೇಂದ್ರ, ತುಮಕೂರು ಅವರಿಂದ ಭರತನಾಟ್ಯ
ಸಂ. 5.30 : ಪರಶುರಾಮ ಬಣ್ಣದ, ಕೊಪ್ಪಳ ಜಿಲ್ಲೆ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ
ರಾ. 6.30 : ನರಮುಗ್ಯೆ ನಾಟ್ಯಾಲಯ, ಚೆನ್ನೈ ಅವರಿಂದ ನೃತ್ಯರೂಪಕ
ರಾ. 7.30 : ಅನುಭೂತಿ, ಮೈಸೂರು ರಾಮನಾಥ್ ಅವರಿಂದ ನಾಟಕ : ಮಾಯಾ

ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು

ಸಂ. 4.45 : ಜಿ. ರಾಜಪ್ಪ ಮತ್ತು ತಂಡ, ಚಾಮರಾಜನಗರ ಅವರಿಂದ ಜಾನಪದ ಗೀತೆ
ಸಂ. 5.30 : ವಿದ್ವಾನ್ ತಾಂಡವಮೂರ್ತಿ ಮತ್ತು ತಂಡ, ಮೈಸೂರು ಅವರಿಂದ ಪಂಚಪಿಟೀಲುವಾದನ
ಸಂ. 6.30 : ದಿವ್ಯ ಎ.ಜೆ. ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀತ
ರಾ. 7.30 : ಕರೆಮ್ಮಾ ದೇವಸ್ಥಾನ ಭಜನಾ ಮಂಡಳಿ, ಬೆಳಗಾವಿ ಅವರಿಂದ ಭಜನೆ
ರಾ. 8.30 : ಡಾ. ಶಿವಕುಮಾರ್ ಎಂ. ಮತ್ತು ತಂಡದಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ

ಜಗನ್ಮೋಹನ ಅರಮನೆ ವೇದಿಕೆ

ಸಂ. 4.00 : ಸುರೇಶ್ ಮತ್ತು ತಂಡ, ಚಿಕ್ಕಮಗಳೂರು ಅವರಿಂದ ಚಿಟ್ಟಿಮೇಳ
ಸಂ. 4.30 : ಕು. ನಿನಾದ ಎಸ್. ಹೆಗ್ಡೆ ಮತ್ತು ತಂಡ, ಮೈಸೂರು ಅವರಿಂದ ಭರತನಾಟ್ಯ
ಸಂ. 5.30 : ಶಿವಕುಮಾರ್ ಹಿರೇಮಠ್ ಮತ್ತು ತಂಡ, ಕಲಬುರ್ಗಿ ಅವರಿಂದ ವಚನಗಾಯನ
ಸಂ. 6.30 : ಮಂಜುನಾಥ್ ಮತ್ತು ತಂಡದಿಂದ ಸುಗಮ ಸಂಗೀತ
ರಾ. 7.30 : ಸಂಜೀವಿನಿ ಕಲಾ ಸಂಸ್ಥೆ, ಬೆಂಗಳೂರು, ಡಾ. ಬಿ. ತನುಜಾ ರಾಜ್ ಅವರಿಂದ ಭರತನಾಟ್ಯ
ರಾ. 8.30 : ವಿದುಷಿ ಎಂ.ಬಿ. ನಾಗಶ್ರೀ ಮತ್ತು ತಂಡದಿಂದ ಭರತನಾಟ್ಯ

ಕರ್ನಾಟಕ ಕಲಾಮಂದಿರ ವೇದಿಕೆ

ಸಂ. 4.00 : ಕೆ.ಎಂ. ನಾಗೇಶ್ ಮತ್ತು ತಂಡ, ಮಂಡ್ಯ ಅವರಿಂದ ಪೂಜಾ ಕುಣಿತ
ಸಂ. 4.30 : ಎಸ್. ಸಿದ್ದೇಶ್ವರಿ ಮತ್ತು ತಂಡ, ಬಳ್ಳಾರಿ ಅವರಿಂದ ಸಮೂಹ ಭರತನಾಟ್ಯ
ಸಂ. 5.15 : ವಿಜಯ್‌ಕುಮಾರ್ ಮತ್ತು ತಂಡ, ವಿಜಯನಗರ ಅವರಿಂದ ಶಾಸ್ತ್ರೀಯ ಸಂಗೀತ
ಸಂ. 6.30 : ಜ್ಞಾನದಮ್ಮ ಬಹುದ್ದೇಶೀಯ ವಿಕಾಸ್ ಸಂತ ನಾಗಪುರ, ಮಹಾರಾಷ್ಟ್ರ ಅವರಿಂದ ನಾಟಕ : ಮಹಾನಾಯಕ ಸಾಮ್ರಾಟ್ ಅಶೋಕ್

ಅಲ್ಯೂಮಿನಿ ಅಸೋಸಿಯೇಷನ್ ಸಭಾ ಭವನ, ಜೆ.ಕೆ. ಮೈದಾನ

ಬೆ. 10.00 : ಮುದ್ದು ಪ್ರಾಣಿಗಳ ಪ್ರದರ್ಶನ ಸ್ಪರ್ಧೆ, ಉದ್ಘಾಟನೆ : ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ. ವೆಂಕಟೇಶ್
ಸಂ. 5.30 : ಮುದ್ದು ಪ್ರಾಣಿಗಳ ಪ್ರದರ್ಶನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ

ಚಾಮರಾಜೇಂದ್ರ ದೃಶ್ಯಕಲಾ ಕಾಲೇಜು (ಕಾವಾ)

ಬೆ. 10.00 : ಕಲಾ ಜಾತ್ರೆ ಉದ್ಘಾಟನೆ, ಟೆರಾಕೋಟಾ ಭಿತ್ತಿ ಶಿಲ್ಪಕಲೆಯ ಅನಾವರಣ ಹಾಗೂ ರಾಷ್ಟ್ರೀಯ ಕರಕುಶಲ ವಸ್ತು, ಲಲಿತ ಕಲೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಸಿ.ಅನಿಲ್‌ಕುಮಾರ್, ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಡಾ. ಮಾನಸ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್

ಪಂಜಿನ ಕವಾಯಿತು ಮೈದಾನ (ಬನ್ನಿಮಂಟಪ)



ರಾ. 7.00 : ಡ್ರೋನ್ ಪ್ರದರ್ಶನ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ

ರಂಗಾಯಣದ ಭೂಮಿಗೀತ

ಸಂ. 7.00 : ರಂಗ ಭೀಷ್ಮ ಬಿ.ವಿ. ಕಾರಂತ ಕಾಲೇಜು ನವರಾತ್ರಿ ರಂಗೋತ್ಸವ, ಮಹಾಜನ ಪದವಿ ಕಾಲೇಜು ವಿದ್ಯಾರ್ಥಿಗಳಿಂದ ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ ನಾಟಕ ಪ್ರದರ್ಶನ, ರಚನೆ : ಕೆ.ವಿ. ಅಕ್ಷರ, ನಿರ್ದೇಶನ : ಪ್ರವೀಣ್ ಬೆಳ್ಳಿ

ವನರಂಗ

ಸಂ. 5.30 : ಅಂತರರಾಜ್ಯ ಕಲಾತಂಡಗಳಿಂದ ಜಾನಪದ ನೃತ್ಯ ಪ್ರದರ್ಶನ ಲಂಬಾಡಿ/ಮಾತುರಿ, ತೆಲಂಗಾಣ; ಲಾವಣಿ, ಹೋಲಿ-ಮಹಾರಾಷ್ಟ್ರ; ಸಿದ್ದಿ ಢುಮಾಲ್-ಗುಜರಾತ್; ಸಂಬಲ್‌ಪುರಿ-ಒರಿಸ್ಸಾ; ತಿರುವತ್ತಿರಕಳಿ ಮತ್ತು ಒಪ್ಪಾನ-ಕೇರಳ; ಬಿಹು, ಗುಸಾನ್-ಅಸ್ಸಾಂ; ನೋರ್ತಾ ಮತ್ತು ಸೈತಾಮ್-ಮಧ್ಯಪ್ರದೇಶ್; ರಥ್ವ-ಗುಜರಾತ್; ತಪ್ಪಾಟ್ಟಗುಳು-ಆಂಧ್ರ ಪ್ರದೇಶ, ಕರಗಂ, ಕಾವಾಡಿ, ತಪ್ಪಟ್ಟಮ್-ತಮಿಳುನಾಡು

ದೈನಂದಿನ ಆಕರ್ಷಣೆಗಳು

ಬೆ. 9 ರಿಂದ ರಾ. 9 : ದಸರಾ ಫಲಪುಷ್ಪ ಪ್ರದರ್ಶನ, ಕುಪ್ಪಣ್ಣ ಪಾರ್ಕ್, ಜಯಚಾಮರಾಜ ಒಡೆಯರ್ ಸರ್ಕಲ್ (ಹಾರ್ಡಿಂಜ್ ವೃತ್ತ)
ಬೆ. 6.30 ರಿಂದ ಸಂ 5.30 : ದಸರಾ ಫಲಪುಷ್ಪ ಪ್ರದರ್ಶನ, ಕುಕ್ಕರಹಳ್ಳಿ ಕೆರೆ
ಬೆ. 9 ರಿಂದ ರಾ. 9 : ದಸರಾ ಫಲಪುಷ್ಪ ಪ್ರದರ್ಶನ, ಲಿಂಗಾಂಬುದಿ ಬಟಾನಿಕಲ್ ಗಾರ್ಡನ್
ಮ. 1, 4 ಮತ್ತು ಸಂಜೆ 7 : ಜೆಮಿನಿ ಸರ್ಕಸ್, ಹಾರ್ಸ್ ಪಾರ್ಕ್ ಮೈದಾನ, ಕಾರಂಜಿ ಕೆರೆ ಸಮೀಪ (3 ಪ್ರದರ್ಶನ)
ಸಂಜೆ 6,7,8 ಮತ್ತು ರಾ.9 : ಅಂಬಾರಿ ಡಬ್ಬಲ್ ಡೆಕ್ಕರ್ ಬಸ್ ರೈಡ್ (1 ಗಂಟೆ- ದಿನ 4 ಟ್ರಿಪ್),
ಬೆ. 10 ರಿಂದ 5 : ಕಲಾ ವಸ್ತುಪ್ರದರ್ಶನ, ಕಾವಾ, ಸಿದ್ಧಾರ್ಥನಗರ
ಬೆ. 10 ರಿಂದ ರಾತ್ರಿ 8 : ರೈಲ್ ಮ್ಯೂಸಿಯಂ (ಸಂಜೆ ದೀಪಾಲಂಕಾರ)
ಬೆ. 10 ರಿಂದ : ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ

ದಸರಾ ಕವಿಗೋಷ್ಠಿಯ ಕೊನೆ ಹಂತದ ಪ್ರಬುದ್ಧ ಕವಿಗೋಷ್ಠಿಗೆ ಸಿಪಿಕೆ ಚಾಲನೆ

ಕಾವ್ಯ ಸಂಸ್ಕೃತಿಯ ಒಂದು ಭಾಗ: ಹಿರಿಯ ಕವಿವಾಣಿ



ದಸರಾ ಕವಿಗೋಷ್ಠಿಯ ಕೊನೆಯ ದಿನದ 'ಪ್ರಬುದ್ಧ ಕವಿಗೋಷ್ಠಿ'ಯನ್ನು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಉದ್ಘಾಟಿಸಿದರು

ಮೈಸೂರು, ಸೆ27(ಎಂಕೆ)- ಪ್ರೀತಿ, ಸಹಾನುಭೂತಿಯೇ ಕಾವ್ಯದ ಆದಿ ಮತ್ತು ಬುನಾದಿಯಾಗಿದ್ದು, ಕಾವ್ಯದಲ್ಲಿ ಪ್ರಪಂಚವೇ ಅಡಗಿದೆ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ದಸರಾ ಕವಿಗೋಷ್ಠಿ ಉಪಸಮಿತಿ ವತಿಯಿಂದ ಆಯೋಜಿಸಿರುವ ದಸರಾ ಕವಿಗೋಷ್ಠಿಯ ಕೊನೆಯ ದಿನದ 'ಪ್ರಬುದ್ಧ ಕವಿಗೋಷ್ಠಿ' ಉದ್ಘಾಟಿಸಿ ಮಾತನಾಡಿದ ಅವರು, ಕಾವ್ಯ ಎಂಬುದು ಸಂಸ್ಕೃತಿಯ ಒಂದು ಭಾಗವಾಗಿದೆ. ಕಾವ್ಯದ ಪರಿಣಿತಿಗೆ ಮುಖ್ಯವಾದದ್ದು ಕಾವ್ಯದ ಔತಣ, ಐದು ಗೋಷ್ಠಿಗಳ ಹೂರಣ, ರಸೋತ್ಪಾದನಾ, ಆನಂದದ ಜನನ. ಇದರಲ್ಲಿ ಉದ್ದಿಷ್ಟವಾಗಿರುವುದು ಮಾನವತೆಯ ಸಾರ ಎಂದರು.

ಸಂಸಾರಕ್ಕೆ ಸಂಸ್ಕಾರವನ್ನು ನೀಡುವುದು ಕಾವ್ಯದ ಧ್ಯೇಯವಾಗಿದೆ. ಕಾವ್ಯ ಆತ್ಮವನ್ನು ರಕ್ಷಿಸುವುದಿಲ್ಲ. ಆದರೆ, ರಕ್ಷಣೆಗೆ ಯೋಗ್ಯವಾಗಿರುತ್ತದೆ. ಭಾವದ ಮಿಗಿಲಾಗಿ ಅನುಭವವೇ ಕಾವ್ಯದ ಅಂತರಂಗವಾಗಿದ್ದು, ವೈಚಾರಿಕೆ ಅತ್ಯಗತ್ಯ. ಕಾವ್ಯಕ್ಕೆ ಭಾಷೆಯೇ ಮುಖ್ಯವಾಗಿದ್ದು, ಹೊಂಬೆಳಕಾಗಿ ಸಮಾಜದಲ್ಲಿ ವಿಜೃಂಭಿಸುತ್ತಿರುವ ಮೌಢ್ಯ ಮಂಡನೆಯನ್ನು ದೂರ ಮಾಡುತ್ತದೆ ಎಂದು ತಿಳಿಸಿದರಲ್ಲದೆ, ಕುವೆಂಪು ಹಾಗೂ ಬಿಎಂಶ್ರೀ ಅವರನ್ನು ಕುರಿತ ಕಾವ್ಯ ವಾಚಿಸಿ, ನೆರೆದಿದ್ದ ಕನ್ನಡಾಭಿಮಾನಿಗಳ ಮನಗೆದ್ದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಸಮಾಜದಲ್ಲಿ ಶಾಂತಿ, ನೆಮ್ಮದಿ ಹಾಗೂ ಸುಸ್ಥಿರತೆ ನಿರ್ಮಿಸುವಲ್ಲಿ ಕವಿಗಳ ಅವಶ್ಯಕತೆ ಬಹಳ ಮುಖ್ಯ. ಪ್ರಪಂಚ ಕಲುಷಿತವಾಗುವತ್ತ ಸಾಗುತ್ತಿದೆ ಎಂದು ಭಾವಿಸುತ್ತೇವೆ. ಆದರೆ, ಸಮಾಜ ಮಾನಸಿಕವಾಗಿ, ಭೌತಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಎಷ್ಟೇ ಕಲುಷಿತಗೊಂಡರು ಅದನ್ನು ತಿಳಿಮಾಡಿ ಪರಿಶುದ್ಧಗೊಳಿಸುವವರು ಯಾರಾದರೂ ಇದ್ದಾರೆ ಎಂದರೆ ಅವರೇ ಕವಿಗಳು ಎಂದು ಅಭಿಮಾನ ತೋರಿದ ಅವರು, ಕನ್ನಡ ತಾಯಿಯ ಬಗ್ಗೆ ಆಶಯ ಗೀತೆಯನ್ನು ಹಾಡಿ ಕನ್ನಡ ಪ್ರೇಮ ಮೆರೆದರು.


ಕವಯತ್ರಿ ಡಾ. ಮಲ್ಲಿಕಾಘಂಟಿ, ದಸರಾ ಕವಿಗೋಷ್ಠಿ ಉಪ ವಿಶೇಷಾಧಿಕಾರಿ ಜಿ.ಎಸ್. ಸೋಮಶೇಖರ್, ಕಾರ್ಯಾಧ್ಯಕ್ಷರಾದ ಪ್ರೊ.ಎನ್.ಕೆ.ಲೋಕಾಕ್ಷಿ, ಪಾಲಿಕೆ ಅಧಿಕಾರಿ ಎಂ.ಚೇತನ್ ಬಾಬು, ದಸರಾ ಕವಿಗೋಷ್ಠಿ ಉಪಸಮಿತಿ ಅಧ್ಯಕ್ಷ ಪಾಳ್ಯ ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

ಕನ್ನಡ ಅಭಿಮಾನ... ಅನಾವರಣ...!

ದಸರಾ ಕವಿಗೋಷ್ಠಿಯ ಕೊನೆ ದಿನದ ಪ್ರಬುದ್ಧ ಕವಿಗೋಷ್ಠಿಯಲ್ಲಿ ಕವನ ವಾಚಿಸಿದ 34 ಮಂದಿ ಕವಿಗಳು ಕನ್ನಡ ಅಭಿಮಾನವನ್ನು ಅನಾವರಣಗೊಳಿಸಿದರು. ಲೇಖಕ ಅಕ್ಬರ್ ಎ.ಸನದಿ 'ಹೂವಿನಂತೆ ಹರಳಲಿ' ಶೀರ್ಷಿಕೆಯ ಕವನ ಹಾಡಿ ಗಮನ ಸೆಳೆದರೆ, ನೀಲಾವರ ಸುರೇಂದ್ರ ಅಡಿಗ 'ಕನ್ನಡ ಅಭಿಮಾನಿ' ಎಂಬ ಕಾವ್ಯ ವಾಚಿಸಿದರು.

ಹಾಗೆಯೇ ನಂದಾ ಪ್ರೇಮ ಕುಮಾರ 'ಬೇಕೇ ಬೇಕು ಕನ್ನಡ ಶಾಲೆ' ಶೀರ್ಷಿಕೆ ಕವನ ವಾಚಿಸಿ ಕನ್ನಡ ಶಾಲೆಗಳ ಮೇಲಿನ ಪ್ರೀತಿ ವ್ಯಕ್ತಪಡಿಸಿದರೆ, ಪ್ಲಾವಿಯ ಕ್ಯಾಸ್ಟಲೀನೊ, ಕೊಂಕಣಿ ಭಾಷೆಯಲ್ಲಿ 'ಕೋಣ್ ಕೋಣಾಸ್', ಪದ್ಮಿನಿ ನಾಗರಾಜ್ 'ಹಾರುವೆ ಫಿನಿಕ್ಸ್', ಕಾ.ರಾಮೇಶ್ವರಪ್ಪ 'ಯುಗದ ಸೂರ್ಯನೇ', ಉಮೇಶ್ ಬಾಬು 'ಮತಕ್ಕೆ ಅವರು ಬೇಕಾಗಿದ್ದಾರೆ' ಶೀರ್ಷಿಕೆಯ ಕವನ ವಾಚಿಸಿ ನೆರೆದಿದ್ದವರ ಮನಗೆದ್ದರು.

'ಮೈಸೂರು ಮಿತ್ರ'ನಲ್ಲಿ 'ಆವರಣ'ದ ಸಹೋದರಿ ಮಾಹಿತಿ ಅನಾವರಣ ಬಾನು ಮುಷ್ತಾಕ್ ಪುಸ್ತಕಗಳಿಗೆ ಭಾರಿ ಡಿಮ್ಯಾಂಡ್



ಮೈಸೂರು ವಿವಿ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು ಅವರು ಬಾನು ಮುಷ್ತಾಕ್ ಕೃತಿಗಳನ್ನು ಅಭಿರುಚಿ ಗಣೇಶ್ ಬಳಿ ವಿಚಾರಿಸುತ್ತಿರುವ ದೃಶ್ಯ.

ಮೈಸೂರು,ಸೆ.27(ಎಸ್‌ಪಿಎನ್)- ಸಾಹಿತಿ ಬಾನು ಮುಷ್ತಾಕ್ ರಚಿತ, ಆಂಗ್ಲ ಭಾಷೆಗೆ ಲೇಖಕಿ ದೀಪ ಭಾಸ್ತಿ ಅನುವಾದಿಸಿರುವ ಆಯ್ದ ಲೇಖನಗಳ 'ಎದೆಯ ಹಣತೆ'(ಬೂಕರ್ ಪ್ರಶಸ್ತಿ ಪಡೆದ ಕೃತಿ) ಪುಸ್ತಕ ಹಾಗೂ ಸಮಗ್ರ ಸಾಹಿತ್ಯದ ಹಸೀನಾ ಪುಸ್ತಕಗಳಿಗೆ ದಸರಾ ಪುಸ್ತಕ ಮೇಳದಲ್ಲಿ ಗ್ರಾಹಕರಿಂದ ಭಾರೀ ಬೇಡಿಕೆ ಬರುತ್ತಿದೆ.


ಅಭಿರುಚಿ ಪ್ರಕಾಶನದ ಅಭಿರುಚಿ ಗಣೇಶ್ ಅವರು 'ಮೈಸೂರು ಮಿತ್ರ'ನಿಗೆ ಈ ಮಾಹಿತಿ ಹಂಚಿಕೊಂಡಿದ್ದು, 'ಮೈಸೂರು ಮಿತ್ರ' ಹಾಗೂ ಸಾಮಾಜಿಕ ಜಾಲತಾಣದಲ್ಲಿ ಖ್ಯಾತ ಸಾಹಿತಿ ಡಾ.ಎಸ್.ಎಲ್.ಭೈರಪ್ಪನವರು ಬಾನು ಮುಷ್ತಾಕ್ ಅವರ ಮನೆಯಲ್ಲಿ 'ಆವರಣ' ಕಾದಂಬರಿ ಕ್ಷೇತ್ರಾಧ್ಯಯನಕ್ಕಾಗಿ ಹದಿನೈದು ದಿನಗಳ ಕಾಲ ತಂಗಿದ್ದರು ಎಂಬ ಸತ್ಯ ಹೊರಜಗತ್ತಿಗೆ ತಿಳಿದ ತಕ್ಷಣ ಅವರ ಕೃತಿಗಳಿಗೆ ಗ್ರಾಹಕರಿಂದಲೂ ಬೇಡಿಕೆ ಹೆಚ್ಚಾಗುತ್ತಿದೆ. ಅಲ್ಲದೆ, ಖರೀದಿಸದವರೂ ಒಮ್ಮೆ ಬಾನು ಮುಷ್ತಾಕ್ ಅವರ ಕೃತಿಗಳನ್ನು ನೋಡಿ, ಹೋಗುತ್ತಿರುವುದು ಸಂತೋಷದ ಸಂಗತಿ ಎಂದರು.

ಮೈಸೂರು ದಸರಾ ಪುಸ್ತಕ ಮೇಳಕ್ಕೆ ಬರುವ ಗ್ರಾಹಕರು ಇವೆರಡು ಕೃತಿಗಳಿಗೆ (ಹಸೀನಾ ಮತ್ತು ಎದೆಯ ಹಣತೆ) ನಮ್ಮ ಮಳಿಗೆ ಸೇರಿದಂತೆ ಇತರೆ ಮಳಿಗೆಗಳಿಗೆ ಭೇಟಿ ನೀಡಿ, ವಿಚಾರಣೆ ಮಾಡುತ್ತಿದ್ದಾರೆ. ಹಾಗೆ 250ಕ್ಕೂ ಕೃತಿಗಳನ್ನು ಇಲ್ಲಿಯವರೆಗೆ ಖರೀದಿಸಿರುವ ಮಾಹಿತಿಯಿದೆ. ನಮ್ಮ ಮಳಿಗೆಯಲ್ಲಿ ಇವರೆಡು 80ರಿಂದ 100 ಪುಸ್ತಕಗಳು ಮಾರಾಟವಾಗಿವೆ ಎಂದು ಮಾಹಿತಿ ನೀಡಿದರು. ಇದೇ ವೇಳೆ ದಸರಾ ಪುಸ್ತಕ ಮೇಳಕ್ಕೆ ಭೇಟಿ ನೀಡಿದ್ದ ಮೈಸೂರು ವಿವಿ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರಾಧ್ಯಾಪಕ ಡಾ.ಡಿ.ಎಸ್. ಗುರು ಅವರು ಬಾನು ಮುಷ್ತಾಕ್ ಕೃತಿಗಳನ್ನು ಒಮ್ಮೆ ತಿರುವಿ ಹಾಕಿದರು.

ಮುಂದುವರೆದು ಡಾ.ಎಸ್.ಎಲ್. ಭೈರಪ್ಪನವರು ಕಳೆದ 35 ವರ್ಷಗಳ ಹಿಂದೆ ಅಭಿರುಚಿ ಪ್ರಕಾಶನವನ್ನು ಉದ್ಘಾಟಿಸಿ, ಶುಭ ಹಾರೈಸಿದ್ದರು. ಈ ವೇಳೆ 'ಜಾಜಿ ಹೂವಿನ ಕಟ್ಟು', 'ಅಜ್ಜಿಮಾದ' ಬಿಡುಗಡೆಗೊಳಿಸಿದ್ದ ಪ್ರಸಂಗವನ್ನು ನೆನೆದರು.

ಭೈರಪ್ಪನವರ ಪುಸ್ತಕಗಳಿಗೆ ಹೆಚ್ಚಿದ ಬೇಡಿಕೆ: ಕಳೆದ ಮೂರು ದಿನಗಳಿಂದ ದಸರಾ ಪುಸ್ತಕ ಮೇಳದಲ್ಲಿ ಹಿರಿಯ ಸಾಹಿತಿ ದಿವಂಗತ ಎಸ್.ಎಲ್.ಭೈರಪ್ಪನವರು ರಚಿಸಿರುವ ವಂಶವೃಕ್ಷ, ದಾಟು, ಪರ್ವ ಸೇರಿದಂತೆ ಇತರೆ ಕೃತಿಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಪುಸ್ತಕ ಮೇಳದ ಮಳಿಗೆಗಳಿಗೆ ಭೇಟಿ ನೀಡುವ ಗ್ರಾಹಕರು ಹೆಚ್ಚಾಗಿ ಭೈರಪ್ಪನವರ ಕೃತಿಗಳ ಬಗ್ಗೆ ವಿಚಾರಣೆ ಮಾಡುತ್ತಿದ್ದಾರೆ ಎಂದು ಚಿಂತನ ಚಿತ್ತಾರ ಪ್ರಕಾಶನದ ನಿಂಗರಾಜ್ ಚಿತ್ತಣ್ಣವರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು. ಇದೇ ವೇಳೆ ಮೈಸೂರಿನ ಕಲಾವಿದರಾದ ಜಿ.ಆರ್. ಶ್ರೀವತ್ಸ ಮತ್ತು ತಂಡ ಕಲಾವಿದರ ಜಾನಪದಗಳ ಗಾಯನ ಪ್ರೇಕ್ಷಕರನ್ನು ಸೆಳೆಯಿತು.

ದಸರಾ ವೇಳೆ ಮಾತ್ರವೇ ತೆರೆದುಕೊಳ್ಳುವ ಸಬ್‌ವೇಗಳು!



ಮೈಸೂರು, ಸೆ. 27 (ಆರ್‌ಕೆ&ಕೆಎಸ್)- ಸಾರ್ವಜನಿಕರ ಅನುಕೂಲಕ್ಕಾಗಿ ಮೈಸೂರು ನಗರದ ಸಂಚಾರ ದಟ್ಟಣೆಯಿರುವ ರಸ್ತೆಗಳಲ್ಲಿ ನಿರ್ಮಿಸಿರುವ ಸಬ್‌ವೇಗಳು ಕೇವಲ ದಸರಾ ಸಂದರ್ಭದಲ್ಲಿ ಮಾತ್ರವೇ ತೆರೆದಿದ್ದು, ಉಳಿದಂತೆ ಮುಚ್ಚಿರುತ್ತವೆ.

ಸಾರ್ವಜನಿಕರ ತೆರಿಗೆ ಹಣದಲ್ಲಿ ಮೈಸೂರು ಮಹಾನಗರ ಪಾಲಿಕೆಯಿಂದ ಸಯ್ಯಾಜಿರಾವ್ ರಸ್ತೆ-ಧನ್ವಂತರಿ ರಸ್ತೆ ಜಂಕ್ಷನ್ ಹಾಗೂ ಅರಮನೆ ಪೂರ್ವ ದ್ವಾರದ ಬಳಿ ಬಿ.ಎನ್. ರಸ್ತೆಯಲ್ಲಿ ಕೆಲ ವರ್ಷದ ಹಿಂದೆ ಈ ಸಬ್‌ವೇಗಳನ್ನು ನಿರ್ಮಿಸಲಾಗಿದೆ. ಪಾದಚಾರಿಗಳು ರಸ್ತೆ ದಾಟಲು ಅನುಕೂಲವಾಗಲಿ ಎಂಬ ಉದ್ದೇಶದಿಂದ ನಿರ್ಮಿಸಿರುವ ಸುರಂಗ ಮಾರ್ಗಗಳನ್ನು ಬಳಸಿದ್ದೇ ಅಪರೂಪ. ವರ್ಷವಿಡೀ ಬಂದ್ ಆಗಿರುತ್ತವೆ.

ವರ್ಷದ 365 ದಿನವೂ ಮುಚ್ಚಿದ್ದು, ದಸರಾ ವೇಳೆ ಹತ್ತು ದಿನಗಳವರೆಗೆ ಮಾತ್ರ ಈ ಸಬ್‌ವೇಗಳನ್ನು ತೆರೆಯುವುದು ಏಕೆ? ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ. ಮೈಸೂರು ವರ್ಷವಿಡೀ ಪ್ರವಾಸಿಗರ ಆಕರ್ಷಿಸುವ ಪ್ರವಾಸಿ ತಾಣವಾಗಿರುವುದರಿಂದ ದಸರಾ ಸಮಯದಲ್ಲಿ ಮಾತ್ರವಲ್ಲದೆ ಇಡೀ ವರ್ಷವೂ ಸಬ್‌ವೇಗಳು ಬಳಕೆ ಆಗಬೇಕು. ದಸರಾ ಹೊರತು, ಸದರಿ ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳು ಮತ್ತು ವಿಭಜಕಗಳನ್ನು ಅಳವಡಿಸಲಾಗಿದ್ದು, ಕಿರಿದಾಗಿರುವ ಈ ರಸ್ತೆಗಳಲ್ಲಿ ಭಾರೀ ವಾಹನ ದಟ್ಟಣೆ ಸಾಮಾನ್ಯವಾಗಿರುತ್ತದೆ. ಹಾಗಾಗಿ ಸಾರ್ವಜನಿಕರು ಸುರಕ್ಷಿತವಾಗಿ ರಸ್ತೆ ದಾಟಲು ಸುರಂಗ ಮಾರ್ಗ ಅನಿವಾರ್ಯವಲ್ಲವೇ?

ಸಯ್ಯಾಜಿರಾವ್ ರಸ್ತೆಯ ಮಾರುಕಟ್ಟೆ ಕಟ್ಟಡದ ಇಸ್ಮಾಯಿಲ್ ಆಪ್ಟಿಕಲ್ಸ್‌ನ ಅನ್ವರ್ ಬೇಗ್, ವರ್ಷದ 355 ದಿನ ಇಲ್ಲಿನ ಸುರಂಗಮಾರ್ಗ ಮುಚ್ಚಿರುತ್ತದೆ. ಇದನ್ನು ತೆರೆಯುವುದು ನವರಾತ್ರಿಯ ಸಮಯದಲ್ಲಿ ಮಾತ್ರ ಉಳಿದ ದಿನಗಳಲ್ಲಿ, ಜನರು ಮೂತ್ರ, ಮಲವಿಸರ್ಜನೆಗೆ ಇದನ್ನು ಬಳಸುತ್ತಿದ್ದಾರೆ. ಹಾಗಾಗಿ ಸಾರ್ವಜನಿಕ ಆರೋಗ್ಯಕ್ಕೆ ಅಪಾಯಕಾರಿಯಾಗಿ ಪರಿಣಮಿಸಿದೆ ರಾತ್ರಿ ವೇಳೆ ಕಾನೂನುಬಾಹಿರ ಕೃತ್ಯಗಳಿಗೂ ಇದು ಪ್ರಶಸ್ತ ಸ್ಥಳವಾಗಿ ಪರಿಣಮಿಸಿದೆ ಎಂದು ಬೇಸರ ಹೊರ ಹಾಕಿದ್ದಾರೆ.

ಮೈಸೂರಲ್ಲಿ ಕಲ್ಪಿಸಲಾದ ಹಲವು ಮೂಲಸೌಕರ್ಯಗಳು ವ್ಯರ್ಥ. ಬರೀ ಆರ್ಥಿಕ ಹೊರೆಯಾಗುತ್ತಿವೆ. ಅವೈಜ್ಞಾನಿಕವಾಗಿ ವಿನ್ಯಾಸಗೊಳಿಸಲಾದ ಸಯ್ಯಾಜಿರಾವ್ ರಸ್ತೆಯ ಸುರಂಗಮಾರ್ಗವು ತೆರಿಗೆ ಪಾವತಿಸುವವರ ಹೆಸರಲ್ಲಿ ನಿರ್ಮಾಣವಾದ ಅಪ್ರಯೋಜಕ ಯೋಜನೆ. ತೆರಿಗೆ ಪಾವತಿಸಿ ವ್ಯವಸ್ಥಿತವಾಗಿ ವ್ಯಾಪಾರ-ವಹಿವಾಟು ನಡೆಸುವವರಿಗೆ ಕಾನೂನು ಪ್ರಕಾರ ಮೂಲ ಸೌಕರ್ಯ ಕಲ್ಪಿಸಬೇಕಾದ ಮೈಸೂರುನಗರ ಪಾಲಿಕೆ, ರಸ್ತೆ ಬದಿ ವ್ಯಾಪಾರಿಗಳ ಬೆಂಬಲಿಸಿ, ಆ ಮೂಲಕ ತನ್ನ ಆದಾಯಕ್ಕೆ ತಾನೇ ಕಲ್ಲು ಹಾಕಿಕೊಳ್ಳುವುದರ ಜೊತೆಗೆ ವ್ಯವಸ್ಥೆಯನ್ನು ಹಾಳು ಮಾಡುತ್ತಿದೆ ಎಂದು ಬೇಸರಿಸಿದ್ದಾರೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

11ನೇ ವರ್ಷದ ಸವಿನೆನಪು



ಮಹದೇವಮ್ಮ

ನೀವು ನಮ್ಮನ್ನಗಲಿ ಇಂದಿಗೆ 11 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಮಕ್ಕಳಾದ ಪ್ರಕಾಶ್ ಎಂ, ರವಿ ಎಂ. ಗಾಂಚಿತ್ರಿ ಎಂ. ಲಕ್ಷ್ಮಿ ಎಂ. ಹಾಗೂ ಕುಟುಂಬವರ್ಗದವರು

(ಮಹಾರಾಜ ಕಾಲೇಜು ಮೈಸೂರು ವಿಶ್ವವಿದ್ಯಾಲಯ) ನಿಧನ :28-09-2014

#875, EWS, ಲಕ್ಷ್ಮೀಕಾಂತ ನಗರ, 2ನೇ ಹಂತ, ಹೆಬ್ಬಾಳ, ಮೈಸೂರು

ಎರಡನೇ ವರ್ಷದ ಪುಣ್ಯಸ್ಮರಣೆ



ಲೀಲಮ್ಮ.ಎನ್

ನಿವೃತ್ತ ಮುಖ್ಯಶಿಕ್ಷಕಿ, ಮಾದರಿಶಾಲಾ, ಮೈಸೂರು

ದುಃಖತಪ್ತರು:
ಎಂ. ಆರ್. ಶ್ರೀಕಂಠ ಮತ್ತು ಕುಟುಂಬವರ್ಗ

7ನೇ ವರ್ಷದ ಸವಿನೆನಪು



ರಕ್ಷಿತ್.ಎಂ.ಗೌಡ

ಜನನ :07.09.1992 ನಿಧನ : 27-09-2018

ಸದಾ ನಿಮ್ಮ ನೆನಪಿನಲ್ಲಿರುವ
ತಾಯಿ, ತಂಗಿ, ಭಾವ ಹಾಗೂ ಕುಟುಂಬವರ್ಗದವರು

ಕೂಡ್ಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ನಂಜನಗೂಡು ತಾಲ್ಲೂಕು

ಪತ್ರಿಕಾ ಪ್ರಕಟಣೆ

ಕೂಡ್ಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ನಂಜನಗೂಡು ತಾಲ್ಲೂಕು ಇದರ ಚುನಾವಣೆ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಯ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯನ್ನು **ದಿನಾಂಕ 12–10–2025 ರ ಭಾನುವಾರ ಬೆಳಿಗ್ಗೆ 9–00 ಗಂಟೆಯಿಂದ ಸಂಜೆ 4–00 ಗಂಟೆಯವರೆಗೆ** ಸಂಘದ ಕಛೇರಿ ಇಲ್ಲಿ ನಿಗದಿಪಡಿಸಲಾಗುತ್ತಿದೆ. ಚುನಾವಣೆಗೆ ಸ್ಪರ್ಧಿಸಲು ನಾಮಪತ್ರಗಳನ್ನು **ದಿನಾಂಕ 29–9–2025 ರಿಂದ 5–10–2025 ರ ವರೆಗೆ ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 2–00 ಗಂಟೆವರೆಗೆ** ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಚುನಾವಣೆ ವೇಳಾಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರಿಗೂ ತಲುಪಿಸಲು ಸಂಘದ ಕಾರ್ಯದರ್ಶಿಗೆ ಸೂಚಿಸಲಾಗಿದ್ದು ಹೆಚ್ಚಿನ ವಿವರಗಳಿಗಾಗಿ ಸಂಘದ ಕಾರ್ಯದರ್ಶಿ ಹಾಗೂ ರಿಟರ್ನಿಂಗ್ ಆಫೀಸರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ರಿಟರ್ನಿಂಗ್ ಅಧಿಕಾರಿ
ಕೂಡ್ಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ. ನಂಜನಗೂಡು ತಾ.

IN THE COURT OF THE II ADDITIONAL DISTRICT AND SESSIONS JUDGE JUDGE AT MYSORE

Com.O.S.No.82/2025

Plaintiff : Sri S.M. Shusheel Kumar, S/o S.L. Mallesh, Aged about 41 years, Residing at: Door No.90, Sadholalu Village, Madduru Taluk, Mandya District-571428,

V/s

Defendants : M/s Sri Siddivinayaka Developers & others, D5. Smt.T.Prabhavathi, W/o Late P.Manchaiah, Aged about 61 years, Residing at: No.1016, 1st Main, 4th Cross, 2nd Stage, Sreerampura, Mysore-570023

SUMMONS TO DEFENDANT, No.5 THROUGH PAPER PUBLICATION

It is hereby notified that, the plaintiff has filed the above suit against the defendants for the relief of specific performance of contract, declaration and mandatory injunction. Hence, the defendant No. 5 is hereby notified that, the hearing of the case is fixed on 28.10.2025. If you have any defense/claim, you shall appear before the Hon'ble Court on 28.10.2025 at 11.00 A.M either in person or through the pleader. Failing which the case will be decided ex-parte.

SCHEDULE-A PROPERTY

Item No.1: All that piece and parcel of the converted property bearing Sy.No.249/2 measuring an extent of 2 Acre 1 guntas, situated at H.D.Kote Village, Kasaba Hobli, H.D.Kote Taluk, Mysore District, bounded on: **East by** : Sy.No. 188, **West by:** Sy.No.249/1 and Sy.No.207, **North by:** Sy.No.248, Sy.No. 188 and Sy.No.249/1, **South by:** Sy.No.249/3 and Taraka Nala Road, **Item No.2:** All that piece and parcel of the converted property bearing Sy.No.249/4 measuring an extent of 10 Acre 5 guntas, situated at H.D.Kote Village, Kasaba Hobli, H.D.Kote Taluk, Mysore District, bounded on: East by : Sy.No. 188, West by : Sy.No. 171 and Sy.No.207, North by : Taraka Nala Property, South by: Sy.No 362, Sy.No.233 and Sy.No166,

SCHEDULE-B PROPERTY

All that piece and parcel of the residential sites bearing No.1 to 181, which are carved out of plaint-A schedule properties in Sy.No.249/2 measuring an extent of 2 Acre 10 guntas and Sy.No.249/4 measuring an extent of 10 Acre 5 guntas, in total 12 Acre 15 guntas, situated at H.D.Kote Village, Kasaba Hobli, H.D.Kote Taluk, Mysore District.

Given under my hand and Seal of this Court on 26/09/2025

Advocate for plaintiff.
Place : Mysore,

By order of the Hon'ble Court
Sd/- Chief Administrative officer,
District & Sessions Court, MYSORE

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಎ–ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, (1). ಬಾಬಿ ಸಿರಿಯಾಕ್ ಬಿನ್. ಕೆ. ಪಿ. ಕುರಿಯಾಕೋಸ್, ಮತ್ತು ಬಿ–ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, (2). ರಾಣಿ ಪೀಟರ್ @ ರಾಣಿ ಸಿರಿಯಾಕ್ ಕೋಂ. ಬಾಬಿ ಸಿರಿಯಾಕ್, ಇವರ ಇಬ್ಬರ ವಾಸ: ನಂಬರ್ ಎ–26, ಕಿಜಾಕ್ಕೆದಾತ್, ಜವಾಹರ್ ನಗರ ಕಾಲೋನಿ, ಎರನ್ಹಿಪಾಲಂ, ಕೇರಳ ರಾಜ್ಯ 673006, ರ ನಿವಾಸಿಗಳಾದ, ಇವರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ:

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಐದು (05) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಎ ಮತ್ತು ಬಿ ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿರ್ಬಂಧಿತರಾಗುವುದಿಲ್ಲ.

ಎ–ಷೆಡ್ಯೂಲ್

ಐಟಂ–1
ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಇಂಡವಾಳು ಗ್ರಾಮದ ಸರ್ವೆ ನಂಬರ್. 133/1 ರಲ್ಲಿನ ಒಟ್ಟು ವಿಸ್ತೀರ್ಣ ಎರಡು ಎಕರೆ ಮೂರುವರೆ ಗುಂಟೆ ಇದರಲ್ಲಿ ಇಪ್ಪತ್ತೇಳು ಗುಂಟೆ (0.27.00.00) ವಸತಿ ಉದ್ದೇಶಕ್ಕೆ ಅನ್ಯಕ್ರಾಂತವಾಗಿರುವ ಜಮೀನು ಮತ್ತು ಒಂದು ಎಕರೆ ಹದಿನಾರುವರೆ ಗುಂಟೆ (1.16.08.00) ಖುಷ್ಕಿ ಜಮೀನು, ಸದರಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ:– ಸರ್ವೆ ನಂಬರ್ 136 ಪಶ್ಚಿಮಕ್ಕೆ:– ಸರ್ವೆ ನಂಬರ್ 133/2; ಉತ್ತರಕ್ಕೆ: – ಸರ್ವೆ ನಂಬರ್ 134/1, 2; ದಕ್ಷಿಣಕ್ಕೆ:– ಸರ್ವೆ ನಂಬರ್ 131 ಮತ್ತು 132

ಐಟಂ–2
ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಇಂಡವಾಳು ಗ್ರಾಮದ ಸರ್ವೆ ನಂಬರ್. 134/1 ರಲ್ಲಿನ ಮೂರು ಎಕರೆ ಏಳು ಗುಂಟೆ (3.07.00.00) ವಿಸ್ತೀರ್ಣದ ವಸತಿ ಉದ್ದೇಶಕ್ಕೆ ಅನ್ಯಕ್ರಾಂತವಾಗಿರುವ ಜಮೀನಿಗೆ ಚಕ್ಕುಬಂದಿ; ಪೂರ್ವಕ್ಕೆ:– ಸರ್ವೆ ನಂಬರ್ 134/2; ಪಶ್ಚಿಮಕ್ಕೆ:– ಸರ್ವೆ ನಂಬರ್ 134/3; ಉತ್ತರಕ್ಕೆ: – ಸರ್ವೆ ನಂಬರ್ 135/1, 3; ದಕ್ಷಿಣಕ್ಕೆ:– ಸರ್ವೆ ನಂಬರ್ 133/1, 2

ಐಟಂ–3
ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಇಂಡವಾಳು ಗ್ರಾಮದ ಸರ್ವೆ ನಂಬರ್. 134/2 ರಲ್ಲಿನ ಎರಡು ಎಕರೆ (2.00.00.00) ವಿಸ್ತೀರ್ಣದ ವಸತಿ ಉದ್ದೇಶಕ್ಕೆ ಅನ್ಯಕ್ರಾಂತವಾಗಿರುವ ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ:– ಸರ್ವೆ ನಂಬರ್ 136; ಪಶ್ಚಿಮಕ್ಕೆ:– ಸರ್ವೆ ನಂಬರ್ 134/1; ಉತ್ತರಕ್ಕೆ: – ಸರ್ವೆ ನಂಬರ್ 135/1; ದಕ್ಷಿಣಕ್ಕೆ:– ಸರ್ವೆ ನಂಬರ್ 133/1

ಐಟಂ–4
ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಇಂಡವಾಳು ಗ್ರಾಮದ ಸರ್ವೆ ನಂಬರ್, 135/1 ರಲ್ಲಿನ ಹದಿನಾಲ್ಕು ಗುಂಟೆ (0.14.00.00) ವಿಸ್ತೀರ್ಣದ ವಸತಿ ಉದ್ದೇಶಕ್ಕೆ ಅನ್ಯಕ್ರಾಂತವಾಗಿರುವ ಜಮೀನಿಗೆ ಚಕ್ಕುಬಂದಿ; ಪೂರ್ವಕ್ಕೆ:– ನಾಲಾ ಮತ್ತು ಸರ್ವೆ ನಂಬರ್ 136; ಪಶ್ಚಿಮಕ್ಕೆ:– ಸರ್ವೆ ನಂಬರ್ 135/3; ಉತ್ತರಕ್ಕೆ: – ಮೈಸೂರು–ಟಿ.ನರಸಿಪುರ ರಾಜ್ಯ ರಸ್ತೆ; ದಕ್ಷಿಣಕ್ಕೆ:– ಸರ್ವೆ ನಂಬರ್ 134/1, 2.

ಬಿ–ಷೆಡ್ಯೂಲ್

ಐಟಂ–1
ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಇಂಡವಾಳು ಗ್ರಾಮದ ಸರ್ವೆನಂಬರ್. 133/2 ರಲ್ಲಿನ ಎರಡು ಎಕರೆ ಮೂರುವರೆ ಗುಂಟೆ (2.03.08.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ:– ಸರ್ವೆ ನಂಬರ್ 133/1; ಪಶ್ಚಿಮಕ್ಕೆ:– ಹೊಸಕೋಟೆ ಗ್ರಾಮ ಗಡಿ; ಉತ್ತರಕ್ಕೆ: – ಸರ್ವೆ ನಂಬರ್ 134/1, 3; ದಕ್ಷಿಣಕ್ಕೆ:– ಸರ್ವೆ ನಂಬರ್ 131

ಐಟಂ–2
ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಇಂಡವಾಳು ಗ್ರಾಮದ ಸರ್ವೆ ನಂಬರ್. 134/3 ರಲ್ಲಿನ ಒಂದು ಎಕರೆ ಏಳು ಗುಂಟೆ (1.07.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ:– ಸರ್ವೆ ನಂಬರ್ 134/1; ಪಶ್ಚಿಮಕ್ಕೆ:– ಹೊಸಕೋಟೆ ಗ್ರಾಮ ಗಡಿ; ಉತ್ತರಕ್ಕೆ: – ಸರ್ವೆ ನಂಬರ್ 135/3; ದಕ್ಷಿಣಕ್ಕೆ:– ಸರ್ವೆ ನಂಬರ್ 133/2

ಐಟಂ–3
ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಇಂಡವಾಳು ಗ್ರಾಮದ ಸರ್ವೆ ನಂಬರ್. 135/3 ರಲ್ಲಿನ ಒಂಭತ್ತುವರೆ ಗುಂಟೆ (0.09.08.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ:– ಸರ್ವೆ ನಂಬರ್ 135/1; ಪಶ್ಚಿಮಕ್ಕೆ:– ಸರ್ವೆ ನಂಬರ್ 135/2 ಮತ್ತು ಹೊಸಕೋಟೆ ಗ್ರಾಮ ಗಡಿ; ಉತ್ತರಕ್ಕೆ: – ಮೈಸೂರು–ಟಿ.ನರಸಿಪುರ ರಾಜ್ಯ ರಸ್ತೆ; ದಕ್ಷಿಣಕ್ಕೆ:– ಸರ್ವೆ ನಂಬರ್ 134/1, 3

Sd/- M.N Pakash Kalappa, Advocate, KAR-1996-2000
#2-3, First Floor, PRI Complex, 67/7A, New Sayyajirao Road, Fort Mohalla, Mysore -570004 India, Cell: 93431 12535

ಮೈಸೂರು: 27/09/2025